ಸೋಮವಾರ, ಏಪ್ರಿಲ್ 26, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 116 | ಪುಟ 12

www.prajavani.net


/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

10ನೇ ತರಗತಿ ನಂತರ ಮುಂದೇನು ಓದಬೇಕು ಎಂದು ಮಕ್ಕಳು ಗೊಂದಲಕ್ಕೆ ಈಡಾಗುವುದು ಸಹಜ. ಆದರೆ ಅವರ ಆಸಕ್ತಿ, ಗುರಿಯನ್ನು ಪೋಷಕರು ತಿಳಿದುಕೊಂಡು ಪ್ರೋತ್ಸಾಹ ನೀಡಬೇಕು




ದ್ವಿತೀಯ ಪಿಯು ಪ್ರಾಯೋಗಿಕ ಪರೀಕ್ಷೆ ಮುಂದೂಡಿಕೆ

ಬೆಂಗಳೂರು: ದ್ವಿತೀಯ ಪಿಯುಸಿ ವಿಜ್ಞಾನ ವಿದ್ಯಾರ್ಥಿಗಳಿಗೆ ಇದೇ 28 ರಿಂದ ಆರಂಭವಾಗಬೇಕಿದ್ದ ಪ್ರಾಯೋಗಿಕ ಪರೀಕ್ಷೆಗಳನ್ನು ಮುಂದೂಡಲಾಗಿದೆ.

'ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದ್ದು, ವಿದ್ಯಾರ್ಥಿಗಳ ಆರೋಗ್ಯದ ದೃಷ್ಟಿಯಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ವಾರ್ಷಿಕ ಪರೀಕ್ಷೆಗಳು ಮುಗಿದ ತಕ್ಷಣ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಲು ನಿರ್ಧರಿಸಲಾಗಿದೆ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದ್ದಾರೆ.

'ಈ ಸಂದರ್ಭದಲ್ಲಿ ಪ್ರಾಯೋಗಿಕ ಪರೀಕ್ಷೆ ನಡೆಸುವುದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅವೈಜ್ಞಾನಿಕ ನಿರ್ಧಾರವಾಗಿತ್ತು. ಪರೀಕ್ಷೆ ಮುಂದೂಡಿರುವುದು ಸೂಕ್ತವಾಗಿದೆ' ಎಂದು ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಹೇಳಿದೆ.

ಹಿಂದೂಸ್ತಾನಿ ಗಾಯಕ ರಾಜನ್ ಮಿಶ್ರಾ ನಿಧನ



ನವದೆಹಲಿ: ಹೆಸರಾಂತ ಹಿಂದೂಸ್ತಾನಿ ಗಾಯಕ, ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರಾಗಿದ್ದ ಪಂಡಿತ್ ರಾಜನ್ ಮಿಶ್ರಾ (70) ಭಾನುವಾರ ನಿಧನರಾದರು.

ಕೋವಿಡ್–19 ಸೋಂಕು ದೃಢಪಟ್ಟಿದ್ದ ಅವರಿಗೆ ಹೃದಯಸಂಬಂಧಿ ಸಮಸ್ಯೆಗಳು ಕಾಣಿಸಿಕೊಂಡಿದ್ದವು ಅವರನ್ನು ಇಲ್ಲಿನ ಸೇಂಟ್ ಸ್ಟೀಫನ್ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಅವರು ಮೃತಪಟ್ಟರು.

ನುಡಿ ನಮನ | 4

ಸಿಗದ ಆಕ್ಸಿಜನ್ ಹಾಸಿಗೆ, ಐಸಿಯು ಕೊರತೆ • ಸೋಂಕಿತರ ನರಳಾಟ • ಮತ್ತಷ್ಟು ಬಿಗಡಾಯಿಸಿದ ಪರಿಸ್ಥಿತಿ

ಸರ್ಕಾರ– ಖಾಸಗಿ 'ಬೆಡ್' ಜಟಾಪಟಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ಕೋವಿಡ್ ಎರಡನೇ ಅಲೆ ಸೃಷ್ಟಿಸಿರುವ ಬಿಕ್ಕಟ್ಟಿನಿಂದ ಆರೋಗ್ಯ ವಲಯ ತಲ್ಲಣಗೊಂಡಿದೆ. ಸೋಂಕಿತರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದ್ದು, ತೀವ್ರ ನಿಗಾ ಘಟಕ (ಐಸಿಯು) ಸೇರುವವರ ಸಂಖ್ಯೆಯೂ ಏರಿಕೆಯಾಗಿದೆ. ಉಸಿರಾಟ ಸಮಸ್ಯೆಯಿಂದ ಆಸ್ಪತ್ರೆಗಾಗಿ ಅಲೆದಾಟ, ಸಿಗದ ಬೆಡ್, ಆಕ್ಸಿಜನ್ ಹಾಸಿಗೆ, ಐಸಿಯು ಕೊರತೆ ಪರಿಸ್ಥಿತಿಯನ್ನು ಬಿಗಡಾಯಿಸಿದೆ.

ಸೋಂಕಿತರಿಗೆ ಹಂಚಿಕೆ ಮಾಡಲು ಶೇಕಡ 50 ರಷ್ಟು ಹಾಸಿಗೆಗಳನ್ನು ಸರ್ಕಾರಕ್ಕೆ ಬಿಟ್ಟುಕೊಡಬೇಕೆಂಬ ಆದೇಶ ಪಾಲಿಸದ ಖಾಸಗಿ ಆಸ್ಪತ್ರೆಗಳು, ಹಾಸಿಗೆ ಹಂಚಿಕೆಯಾದ ಆಸ್ಪತ್ರೆಗೆ ತೆರಳಿದರೆ ಖಾಲಿ ಇಲ್ಲವೆಂಬ ಉತ್ತರ, ಇದರ ನಡುವೆ ಜೀವ ಉಳಿಸಿಕೊಳ್ಳಬೇಕೆಂದು ರೋಗಿ ಸಹಿತ ಆಸ್ಪತ್ರೆಗಳಿಗೆ ಸುತ್ತಾಡುವ ಸಂಬಂಧಿಕರ ಪಡಿಪಾಟಲು ಮುಂದುವರಿದಿದೆ. ಹಣ ಕೊಟ್ಟರೂ ಹಾಸಿಗೆ ಸಿಗದ ಪರಿಸ್ಥಿತಿ ಉಂಟಾಗಿದೆ.

ಈ ಮಧ್ಯೆ, ಕೊರತೆ ತುಂಬಲು, ಶೇಕಡ 75ರಷ್ಟು ಹಾಸಿಗೆಗಳನ್ನು ಖಾಸಗಿ ಅಸ್ಪತ್ರೆಗಳು ಬಿಟ್ಟುಕೊಡಬೇಕೆಂದು ಸರ್ಕಾರ ಆದೇಶ ಹೊರಡಿಸಿದೆ. ಆದರೆ, ಅದನ್ನು ಒಪ್ಪಲು ತಯಾರಿಲ್ಲದ ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಂ ಅಸೋಸಿಯೇಷನ್ (ಫನಾ), 'ಖಾಸಗಿ ಆಸ್ಪತ್ರೆಗಳನ್ನೆಲ್ಲ ಸರ್ಕಾರವೇ ನಡೆಸಲಿ' ಎಂದು ಸವಾಲೊಡ್ಡಿದೆ. ಇದು ಸರ್ಕಾರ–ಖಾಸಗಿ ಆಸ್ಪತ್ರೆಗಳ ನಡುವೆ ಗುದ್ದಾಟಕ್ಕೆ ಕಾರಣವಾಗುವ ಸಾಧ್ಯತೆ ಇದೆ.

'ಸರ್ಕಾರದಿಂದ ಖಾಸಗಿ ಆಸ್ಪತ್ರೆಗಳಲ್ಲಿ ಸೋಂಕು ಪೀಡಿತರಿಗೆ ಹಂಚಿಕೆಯಾದ ಬೆಡ್‌ಗಳು ಖಾಲಿ ಇಲ್ಲ. ಅಷ್ಟರಮಟ್ಟಿಗೆ ಪರಿಸ್ಥಿತಿ ವಿಕೋಪಕ್ಕೆ ಹೋಗಿದೆ. ಯಾವ ಖಾಸಗಿ ಆಸ್ಪತ್ರೆಗಳಲ್ಲಿ ಬೆಡ್ ಖಾಲಿ ಇದೆ ಎಂಬ ಮಾಹಿತಿ ಸಿಗದೇ ರೋಗಿಗಳು, ಕುಟುಂಬ ಸದಸ್ಯರ ಜೊತೆ ಅಲೆದಾಡುತ್ತಿದ್ದಾರೆ. ಹೀಗಾಗಿ, ನಮ್ಮಲ್ಲಿ ಲಭ್ಯವಿರುವ ಹಾಸಿಗೆಗಳ ಮಾಹಿತಿಗಾಗಿ ವೆಬ್ ಪೋರ್ಟಲ್ ಆರಂಭಿಸಲು ಸಿದ್ಧತೆ ಮಾಡಿಕೊಂಡಿದ್ದೇವೆ. ಶೇಕಡ 75ರಷ್ಟು ಹಾಸಿಗೆಗಳನ್ನು ಬಿಟ್ಟುಕೊಡಬೇಕೆಂಬ ಸರ್ಕಾರದ ಆದೇಶ ವಿರುದ್ಧ, ಎಲ್ಲ ಆಸ್ಪತ್ರೆಗಳನ್ನು ಸರ್ಕಾರಕ್ಕೇ ಬಿಟ್ಟುಕೊಡುವ ಬಗ್ಗೆ ಸದಸ್ಯರಿಂದ ಸಹಿ ಅಭಿಯಾನ ಮಾಡುತ್ತೇವೆ' ಎಂದು ಫನಾ ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ. ಆಕ್ರೋಶ ವ್ಯಕ್ತಪಡಿಸಿದರು.

'ಸಾಮಾನ್ಯ ಬೆಡ್‌ಗೆ ₹ 10 ಸಾವಿರ ಖರ್ಚು ಬರುತ್ತದೆ. ಕಳೆದ ಬಾರಿ ಶೇ 50 ಹಾಸಿಗೆಗಳನ್ನು ಶೇ 50 ರಷ್ಟು ಮೊತ್ತಕ್ಕೆ ಬಿಟ್ಟುಕೊಟ್ಟಿದ್ದೇವೆ. ಅದರಲ್ಲೂ ಸರ್ಕಾರದಿಂದ ಬಾಕಿ ಬರಬೇಕಿದೆ. ಶೇ 75ರಷ್ಟು ಬೆಡ್‌ಗಳನ್ನು ಬಿಟ್ಟುಕೊಟ್ಟರೆ, ಉಳಿದ ರೋಗಿಗಳಿಗೆ ಮತ್ತು ನಮ್ಮ ಸಿಬ್ಬಂದಿ ಅನಾರೋಗ್ಯಕ್ಕೀಡಾದರೆ ಹೊಂದಿಸುವುದು ಹೇಗೆ? ಅಷ್ಟೇ ಅಲ್ಲ, ಖಾಸಗಿ ಆಸ್ಪತ್ರೆಗಳಿಗೆ ರೆಮ್‌ಡಿಸಿವಿರ್ ಕೊಡಲ್ಲ. ಆಕ್ಸಿಜನ್ ಪೂರೈಕೆ ಮಾಡಲ್ಲ. ಕೋಟಿ, ಕೋಟಿ ಸಾಲ ಮಾಡಿ ಆಸ್ಪತ್ರೆ ಸ್ಥಾಪಿಸಿದ ನಮ್ಮ ಸಂಕಷ್ಟ ಯಾರಲ್ಲಿ ಹೇಳಿಕೊಳ್ಳಬೇಕು' ಎಂದು ಪ್ರಶ್ನಿಸಿದರು.


'ಹಾಸಿಗೆಗಳ ಕೊರತೆ ಇರುವುದು ನಿಜ. ಪರ್ಯಾಯ ವ್ಯವಸ್ಥೆಯ ಬಗ್ಗೆ ಸಲಹೆ ಕೊಡುವ ಸ್ಥಿತಿಯಲ್ಲಿ ನಾವು ಇಲ್ಲ. ಸರ್ಕಾರ ತೋಚಿದಂತೆ ಮಾಡುತ್ತಿದೆ. ನಮ್ಮ ಕೈಯಲ್ಲಿ ಸಾಧ್ಯವಿರುವುದನ್ನು ನಾವು ಮಾಡುತ್ತಿದ್ದೇವೆ. ತಾಂತ್ರಿಕ ಸಲಹಾ ಸಮಿತಿಯ ಸಲಹೆಯನ್ನೂ ಸರ್ಕಾರ ತೆಗೆದುಕೊಳ್ಳುವುದಿಲ್ಲ. ರಾಜಕೀಯವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದೆ. ಅವು ವೈಜ್ಞಾನಿಕವಾಗಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

10 ದಿನಗಳಲ್ಲಿ ಮೂರು ಪಟ್ಟು!: ಬೆಂಗಳೂರಿನ ಸರ್ಕಾರಿ– ಖಾಸಗಿ ಆಸ್ಪತ್ರೆಗಳಲ್ಲಿರುವ ಐಸಿಯು ಹಾಗೂ ವೆಂಟಿಲೇಟರ್‌ಗಳು ಭರ್ತಿ ಆಗಿವೆ. ಕಳೆದೊಂದು ವಾರದಿಂದ ಐಸಿಯುಗೆ ದಾಖಲಾಗುತ್ತಿರುವ ಸೋಂಕಿತರ ಸಂಖ್ಯೆ ರಾಜ್ಯದಲ್ಲಿ ಏರಿಕೆಯಾಗುತ್ತಲೇ ಇದೆ. ಕೇವಲ 10 ದಿನದಲ್ಲಿ ಐಸಿಯುಗೆ ದಾಖಲಾಗಿರುವ ಸೋಂಕಿತರ ಸಂಖ್ಯೆ ಮೂರು ಪಟ್ಟು ಆಗಿದೆ.

9ನೇ ಪುಟ ನೋಡಿ



ದೆಹಲಿಯಲ್ಲಿ ಕೋವಿಡ್ ರೋಗಿಯ ಸಂಬಂಧಿಯೊಬ್ಬರು ಆಮ್ಲಜನಕ ಸಿಲಿಂಡರ್ ತುಂಬಿಸಿಕೊಳ್ಳಲು ಆಮ್ಲಜನಕ ಘಟಕದ ಮುಂದೆ ಭಾನುವಾರ ಸರದಿಯಲ್ಲಿ ನಿಂತಿದ್ದರು –ಪಿಟಿಐ ಚಿತ್ರ





ಖಾಸಗಿ ಆಸ್ಪತ್ರೆಗಳಲ್ಲಿರುವ ಹಾಸಿಗೆಗಳ ಪೈಕಿ ಶೇ 75ರಷ್ಟನ್ನು ಕೋವಿಡ್ ರೋಗಿಗಳಿಗೆ ಮೀಸಲಿಡಲು ನಿರ್ಧರಿಸಲಾಗಿದೆ. ಸರ್ಕಾರದಿಂದ ಆದೇಶ ಹೊರಡಿಸಲಾಗಿದೆ

ಡಾ.ಕೆ. ಸುಧಾಕರ್
ಆರೋಗ್ಯ ಸಚಿವ



ಶೇಕಡ 75ರಷ್ಟು ಹಾಸಿಗೆಗಳನ್ನು ಬಿಟ್ಟುಕೊಡಲು ಸಾಧ್ಯವಿಲ್ಲ. ಅದರ ಬದಲು, ಅವರೇ (ಸರ್ಕಾರ) ನಮ್ಮ ಆಸ್ಪತ್ರೆಗಳನ್ನೂ ನಡೆಸಲಿ, ಬಿಟ್ಟುಕೊಡುತ್ತೇವೆ

ಡಾ. ಪ್ರಸನ್ನ ಎಚ್.ಎಂ. ಅಧ್ಯಕ್ಷ,
ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಂ ಅಸೋಸಿಯೇಷನ್ (ಫನಾ)

ಪಿಎಂ ಕೇರ್ಸ್ ಹಣದಲ್ಲಿ 551 ಆಮ್ಲಜನಕ ಘಟಕ

ನವದೆಹಲಿ (ಪಿಟಿಐ): ವೈದ್ಯಕೀಯ ಆಮ್ಲಜನಕ ತಯಾರಿಸುವ 551 ಘಟಕಗಳನ್ನು ದೇಶದ ವಿವಿಧೆಡೆಯ ಆಸ್ಪತ್ರೆಗಳಲ್ಲಿ ಸ್ಥಾಪಿಸಲಾಗುವುದು ಎಂದು ಪ್ರಧಾನಿ ಕಾರ್ಯಾಲಯ ತಿಳಿಸಿದೆ. ಹಲವು ರಾಜ್ಯಗಳಲ್ಲಿ ವೈದ್ಯಕೀಯ ಆಮ್ಲಜನಕದ ತೀವ್ರ ಕೊರತೆ ಇದೆ. ಇದನ್ನು ನೀಗಿಸುವುದಕ್ಕಾಗಿ ಪ್ರೆಷರ್ ಸ್ವಿಂಗ್ ಅಡ್ಸಾರ್ಪ್ಶನ್ (ಪಿಎಸ್‌ಎ) ತಂತ್ರಜ್ಞಾನದಲ್ಲಿ ಕೆಲಸ ಮಾಡುವ ಘಟಕಗಳನ್ನು ಸ್ಥಾಪಿಸಲಾಗುವುದು.

ಘಟಕಗಳ ಸ್ಥಾಪನೆಗೆ ಬೇಕಾದ ಹಣ ನೀಡಲು ಪಿಎಂ ಕೇರ್ಸ್ ನಿಧಿಯು ತಾತ್ವಿಕ ಒಪ್ಪಿಗೆ ಕೊಟ್ಟಿದೆ. ಈ ಘಟಕಗಳು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಕಾರ್ಯಾರಂಭ ಮಾಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸೂಚಿಸಿದ್ದಾರೆ ಎಂದು ಪ್ರಧಾನಿ ಕಾರ್ಯಾಲಯ ಹೇಳಿದೆ.

ಜಿಲ್ಲಾ ಮಟ್ಟದಲ್ಲಿ ಆಮ್ಲಜನಕ ಲಭ್ಯತೆ ಹೆಚ್ಚಿಸಲು ಇದು ನೆರವಾಗಲಿದೆ ಎಂದು ಪ್ರಧಾನಿ ಹೇಳಿದ್ದಾರೆ.

ಜಿಲ್ಲಾ ಕೇಂದ್ರದಲ್ಲಿರುವ ಆಯ್ದ ಸರ್ಕಾರಿ ಆಸ್ಪತ್ರೆಗಳಲ್ಲಿ ಈ ಘಟಕಗಳನ್ನು ಸ್ಥಾಪಿಸಲಾಗುವುದು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಮೂಲಕ ಘಟಕಗಳ ಖರೀದಿ ನಡೆಯಲಿದೆ. ಇಂತಹ ವ್ಯವಸ್ಥೆ ಇದ್ದರೆ ಜಿಲ್ಲಾ ಆಸ್ಪತ್ರೆಗಳಲ್ಲಿ ಆಮ್ಲಜನಕ ಪೂರೈಕೆಯು ಹಠಾತ್ ವ್ಯತ್ಯಯ ಆಗುವುದಿಲ್ಲ. ನಿರಂತರವಾಗಿ ಆಮ್ಲಜನಕ ಬೇಕಿರುವ ಕೋವಿಡ್ ಮತ್ತು ಇತರ ರೋಗಿಗಳಿಗೆ ತೊಂದರೆ ಆಗುವುದು ತಪ್ಪುತ್ತದೆ ಎಂದು ಹೇಳಲಾಗಿದೆ. ವಿವಿಧ ಆಸ್ಪತ್ರೆಗಳಲ್ಲಿ 162 ವೈದ್ಯಕೀಯ ಆಮ್ಲಜನಕ ತಯಾರಿಕೆ ಘಟಕ ಸ್ಥಾಪನೆಗೆ ಈ ವರ್ಷದ ಆರಂಭದಲ್ಲಿ ₹201.58 ಕೋಟಿಯನ್ನು ಪಿಎಂ ಕೇರ್ಸ್ ನಿಧಿಯಿಂದ ಮಂಜೂರು ಮಾಡಲಾಗಿತ್ತು.

ಇನ್ನಷ್ಟು ಸುದ್ದಿಗಳು 3,4,4A, 9

ರಾಜ್ಯ ಕೋವಿಡ್ ಅಂಕಿ-ಅಂಶ

13,39,201	ಒಟ್ಟು ಸೋಂಕಿತರು (13,04,397 ನಿನ್ನೆಯ ವಿವರ)
2,62,162	ಸಕ್ರಿಯ ಪ್ರಕರಣಗಳು
10,62,594	ಗುಣಮುಖರಾದವರು
14,426	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	34,804
ಗುಣಮುಖ	6,982
ಸಾವು	143

1,492 ಐಸಿಯುನಲ್ಲಿ ಇರುವವರು

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಮೇ 4 ರವರೆಗೆ ಕರ್ಫ್ಯೂ ಮುಂದುವರಿಕೆ?

ಬೆಂಗಳೂರು: ವಾರಾಂತ್ಯದ ಕರ್ಫ್ಯೂ ಯಶಸ್ವಿಯಾದ ಬೆನ್ನಲ್ಲೇ, ಮೇ 4 ರ ವರೆಗೂ ಕರ್ಫ್ಯೂ ಮುಂದುವರಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ ಎಂದು ಮೂಲಗಳು ತಿಳಿಸಿವೆ.

ಸೋಮವಾರ ಬೆಳಿಗ್ಗೆ ನಡೆಯುವ ಸಚಿವ ಸಂಪುಟ ಸಭೆಯ ಬಳಿಕ ಈ ಸಂಬಂಧ ಅಂತಿಮ ತೀರ್ಮಾನ ಪ್ರಕಟಿಸಲಾಗುವುದು. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಈ ಪ್ರಸ್ತಾವಕ್ಕೆ ಒಪ್ಪಿಗೆ ನೀಡಿದ್ದಾರೆ ಎನ್ನಲಾಗಿದೆ.

ಶನಿವಾರ ಮತ್ತು ಭಾನುವಾರದಂದು ಇದ್ದಂತೆ ಬೆಳಿಗ್ಗೆ 6 ರಿಂದ 10 ಗಂಟೆಯವರೆಗೆ ಮಾತ್ರ ಅಗತ್ಯ ವಸ್ತುಗಳ ಖರೀದಿಗೆ ಅವಕಾಶ ನೀಡಲಾಗುವುದು. ಬಳಿಕ ವಾಣಿಜ್ಯ ವಹಿವಾಟುಗಳು ಬಂದ್ ಆಗಲಿವೆ. ಅಂತರ್ ಜಿಲ್ಲೆ ಮತ್ತು ಅಂತರ್ ರಾಜ್ಯಗಳ ಮಧ್ಯೆ ವಾಹನಗಳ ಸಂಚಾರಕ್ಕೆ ಅವಕಾಶವನ್ನು ಮುಂದುವರಿಸಲಾಗುವುದು. ಸಚಿವ ಸಂಪುಟ ಸಭೆಯ ಬಳಿಕ ಮಾರ್ಗಸೂಚಿಯನ್ನು ಹೊರಡಿಸಲಾಗುವುದು ಎಂದು ಮೂಲಗಳು ಹೇಳಿವೆ.

'ವಾರಾಂತ್ಯದ ಕರ್ಫ್ಯೂಗೆ ರಾಜ್ಯಾದ್ಯಂತ ಜನ ಸ್ವಯಂ ಪ್ರೇರಣೆಯಿಂದ ಸ್ಪಂದಿಸಿದ್ದಾರೆ. ಆದರೆ, ಈ ರೀತಿಯ ಬಿಗಿ ಕ್ರಮವನ್ನು ವಾರದ ದಿನಗಳಿಗೂ ವಿಸ್ತರಿಸುವ ಬಗ್ಗೆ ಇದುವರೆಗೆ ಯಾವುದೇ ಚರ್ಚೆ ಆಗಿಲ್ಲ' ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು. ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು,'ವಾರಾಂತ್ಯದ ಕರ್ಫ್ಯೂಗೆ ಜನ ಸ್ಪಂದಿಸಿರುವುದು ಕೋವಿಡ್ ನಿಯಂತ್ರಣಕ್ಕೂ ಸಹಕಾರಿಯಾಗಿದೆ ಎಂದರು. 'ರಾಜ್ಯ ಸರ್ಕಾರ ಕೇಳಿರುವುದಕ್ಕಿಂತಲೂ ಹೆಚ್ಚಿನ, ಅಂದರೆ 800 ಟನ್ ಆಮ್ಲಜನಕವನ್ನು ಕೇಂದ್ರ ನೀಡಿದೆ. ಇದರಿಂದ ಸದ್ಯದ ಪರಿಸ್ಥಿತಿಯಲ್ಲಿ ಆಮ್ಲಜನಕದ ಬೇಡಿಕೆ ಮೇಲಿನ ಹೊರೆ ಕಡಿಮೆ ಆಗಲಿದೆ. ಇದೇ 30ರವರೆಗೆ ಬಳಕೆ ಮಾಡಲು ರಾಜ್ಯ ಸರ್ಕಾರಕ್ಕೆ 50 ಸಾವಿರ ರೆಮ್‌ಡಿಸಿವಿರ್ ಚುಚ್ಚುಮದ್ದು ಹಂಚಿಕೆ ಮಾಡಲಾಗಿತ್ತು. ಕೇಂದ್ರ ಸರ್ಕಾರ ಇದನ್ನು ಒಟ್ಟು 1.22 ಲಕ್ಷಕ್ಕೆ ಹೆಚ್ಚಿಸಿದೆ' ಎಂದರು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ–5

ಇಂದಿನ ಪಾಡ್‌ಕಾಸ್ಟ್ ವಿಶೇಷ

ವಚನವಾಣಿ

ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ

Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ



ರೈಲು ಬೋಗಿ ಐಸೊಲೇಷನ್ ವಾರ್ಡ್‌ಗಳು ಸಿದ್ಧ

ಸಮಸ್ಯೆ ಇದ್ದರೂ ಬೇಡಿಕೆ ಸಲ್ಲಿಸದ ರಾಜ್ಯ ಸರ್ಕಾರ

• ಗುರು ಪಿ.ಎಸ್.

ಬೆಂಗಳೂರು: ನೈರುತ್ಯ ರೈಲ್ವೆಯು 4,240 ಹಾಸಿಗೆ ಸಾಮರ್ಥ್ಯದ ಐಸೊಲೇಷನ್ ರೈಲು ಬೋಗಿಗಳನ್ನು ಸಿದ್ಧ ಮಾಡಿಕೊಂಡಿದೆ.

ಈ ಪೈಕಿ ನಗರದ ಕೆಎಸ್‌ಆರ್ ಹಾಗೂ ಯಶವಂತಪುರ, ಮೈಸೂರು ಹಾಗೂ ಹುಬ್ಬಳ್ಳಿ ರೈಲು ನಿಲ್ದಾಣಗಳಲ್ಲಿ ವೈದ್ಯಕೀಯ ಆಕ್ಸಿಜನ್ ಸಹಿತ ಹಾಸಿಗೆಗಳನ್ನು ಪೂರೈಸಲು ಸಜ್ಜಾಗಿದೆ. ಆದರೆ, ರಾಜ್ಯ ಸರ್ಕಾರದಿಂದ ಈವರೆಗೆ ಯಾವುದೇ ಬೇಡಿಕೆ ಬರದ ಕಾರಣ ಈ ಸೌಲಭ್ಯವು ಬಳಕೆಯಾಗದೇ ಉಳಿದಿದೆ.

ಕೋವಿಡ್ ಐಸೊಲೇಷನ್ ವಾರ್ಡ್ ಮಾದರಿಯಲ್ಲಿ ಈ ಬೋಗಿಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ನೈರುತ್ಯ ರೈಲ್ವೆಯ ಮೂರು ವಿಭಾಗಗಳಿಗೆ ಇವುಗಳನ್ನು ಹಂಚಲಾಗಿದ್ದು, ಸೇವೆಗೆ ಸಿದ್ಧವಾಗಿವೆ.

'ಸೋಂಕಿನ ಸೌಮ್ಯ ಸ್ವಭಾವದ ಲಕ್ಷಣ ಹೊಂದಿರುವ, ಗಂಭೀರ ಸ್ಥಿತಿಯಲ್ಲಿಲ್ಲದ ರೋಗಿಗಳಿಗೆ ಈ ಹಾಸಿಗೆಗಳನ್ನು ಮೀಸಲಿಡಲಾಗುತ್ತಿದೆ. ನಾಲ್ಕು ನಿಲ್ದಾಣಗಳಲ್ಲಿ ಮಾತ್ರ ವೈದ್ಯಕೀಯ ಆಮ್ಲಜನಕಸಹಿತ ಹಾಸಿಗೆ ವ್ಯವಸ್ಥೆ ಕಲ್ಪಿಸುವಂತೆ ರೈಲ್ವೆ ಸಚಿವಾಲಯ ಮಾರ್ಗಸೂಚಿಯಲ್ಲಿ ತಿಳಿಸಿದೆ' ಎಂದು ನೈರುತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಅನೀಶ್ ಹೆಗ್ಡೆ 'ಪ್ರಜಾವಾಣಿ'ಗೆ ತಿಳಿಸಿದರು.

'ಈ ನಾಲ್ಕು ನಿಲ್ದಾಣಗಳಲ್ಲಿ ರೋಗಿಗಳಿಗೆ ಪ್ರಾರಂಭಿಕ ಹಂತದಲ್ಲಿ ಆಕ್ಸಿಜನ್ ಪೂರೈಸಲಾಗುತ್ತದೆ. ನಂತರ ಅವುಗಳ ರಿಫಿಲ್ಲಿಂಗ್ ಜವಾಬ್ದಾರಿಯನ್ನು ರಾಜ್ಯ ಸರ್ಕಾರ ಅಥವಾ ಸಂಬಂಧಿಸಿದ ಜಿಲ್ಲಾಡಳಿತವೇ ಮಾಡಿಕೊಳ್ಳಬೇಕು' ಎಂದರು.

ಪ್ರಜಾವಾಣಿ ವಿಶೇಷ

9ನೇ ಪುಟ ನೋಡಿ



ಐಸೊಲೇಷನ್ ವಾರ್ಡ್ ಆಗಿ ಪರಿವರ್ತನೆಗೊಂಡಿರುವ ರೈಲು ಬೋಗಿ

ಅಂಕಿ-ಅಂಶಗಳು

265	97	95	73
ಮೂರು ವಿಭಾಗಗಳಲ್ಲಿನ ಕೋವಿಡ್ ವಾರ್ಡ್ ಬೋಗಿಗಳು	ಹುಬ್ಬಳ್ಳಿ	ಮೈಸೂರು	ಬೆಂಗಳೂರು

ಕೋವಿಡ್: ನ್ಯಾಷನಲ್ ವಿಮೆನ್ ಫ್ರಂಟ್‌ನಿಂದ ಮೃತ ಮಹಿಳೆಗೆ ಸೇವೆ

ಮಹಿಳೆಯರಿಂದಲೇ ಗೌರವದ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಕೋವಿಡ್–19ನಿಂದ ಮೃತಪಟ್ಟ ಮಹಿಳೆಯರ ಅಂತ್ಯಸಂಸ್ಕಾರವನ್ನು ಗೌರವಯುತವಾಗಿ ನಡೆಸುವ ಕಾರ್ಯದಲ್ಲಿ ನ್ಯಾಷನಲ್ ವಿಮೆನ್ ಫ್ರಂಟ್‌ನ ತಂಡ ತೊಡಗಿದೆ. ಕೋವಿಡ್‌ನಿಂದ ಮೃತಪಟ್ಟವರ ಶವದ ಸಮೀಪಕ್ಕೆ ಬರಲೂ ಹಿಂದೇಟು ಹಾಕುವ ಸಂದರ್ಭದಲ್ಲಿ ಮಹಿಳೆಯರ ತಂಡವೇ ಈ ಕಾರ್ಯವನ್ನು ನಿರ್ವಹಿಸುತ್ತಿದೆ.

ಕಳೆದ ವರ್ಷದ ಕೋವಿಡ್–19 ಪಿಡುಗು ಉಲ್ಬಣಿಸಿದ ಸಂದರ್ಭದಲ್ಲಿಯೂ ಈ ತಂಡ ಇದೇ ರೀತಿಯ ಕಾರ್ಯವನ್ನು ಮಾಡುತ್ತಿತ್ತು. ಈಗಲೂ ಮತ್ತೊಮ್ಮೆ ತಮ್ಮ ಸೇವೆಯನ್ನು ಮುಂದುವರಿಸಿದೆ. ಕೆಲದಿನಗಳ ಹಿಂದೆ ಬಂಟ್ವಾಳದಲ್ಲಿ ಮೃತಪಟ್ಟಿದ್ದ ಬೆಂಗಳೂರಿನ ಮಹಿಳೆಯೊಬ್ಬರ ಅಂತ್ಯಕ್ರಿಯೆಯನ್ನು ಈ ತಂಡವೇ ಮಾಡಿದೆ.

'ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಇಂತಹ ತಂಡಗಳನ್ನು ಮಾಡಲಾಗಿದೆ. ಐದು ಮತ್ತು ಆರು ಮಂದಿ ಮಹಿಳೆಯರಿರುವ ಇಂತಹ ತಂಡಗಳಿಗೆ ಅಗತ್ಯ ತರಬೇತಿಯನ್ನು ನೀಡಲಾಗಿದೆ' ಎಂದು ಫ್ರಂಟ್‌ನ ಅಧ್ಯಕ್ಷೆ ಝೀನತ್ ತಿಳಿಸಿದ್ದಾರೆ.

'ಕೋವಿಡ್–19 ನಿಂದ ಮೃತಪಟ್ಟವರ ಶವಗಳನ್ನು ಕುಟುಂಬದವರಿಗೆ ಹಸ್ತಾಂತರಿಸದೇ ಆಡಳಿತದ ವತಿಯಿಂದಲೇ ನಡೆಸಲಾಗುತ್ತಿತ್ತು. ಅಂತ್ಯಕ್ರಿಯೆ ಗೌರವದಿಂದ ನಡೆಯಬೇಕು ಎಂಬ ಉದ್ದೇಶದಿಂದ ತಂಡಗಳು ರಚನೆಯಾಗಿವೆ. ಪಿಪಿಇ ಕಿಟ್ ಧರಿಸಿ, ಮುಂಜಾಗ್ರತೆಯೊಂದಿಗೆ ಧಾರ್ಮಿಕ ವಿಧಿಯಂತೆ ಅಂತ್ಯಕ್ರಿಯೆ ನಡೆಸಲಾಗುತ್ತಿದೆ' ಎಂದಿದ್ದಾರೆ.

'ಅಂತ್ಯಸಂಸ್ಕಾರ ನಡೆಸುವ ಬಗ್ಗೆ ನಮಗೆ ತರಬೇತಿ ನೀಡಲಾಗಿದೆ. ವೈಜ್ಞಾನಿಕ ಕ್ರಮದಲ್ಲಿಯೇ ಅಂತ್ಯಕ್ರಿಯೆ ಮಾಡಲಾಗುತ್ತಿದೆ' ಎಂದು ತಂಡದ ಸದಸ್ಯೆ ಫಾತಿಮಾ ನಸೀಮ್ ತಿಳಿಸಿದ್ದಾರೆ.



ಬಂಟ್ವಾಳದಲ್ಲಿ ಮೃತಪಟ್ಟ ಬೆಂಗಳೂರಿನ ಮಹಿಳೆಯ ಅಂತ್ಯಸಂಸ್ಕಾರ ಮಾಡಿದ ಮಹಿಳಾ ತಂಡ

ಕೋವಿಡ್ ನಿಯಂತ್ರಣ: ಎಪಿಎಂಸಿ ಸೂಚನೆ ಅನ್ವಯ ಕಲಾಸಿಪಾಳ್ಯದಿಂದ ಸ್ಥಳಾಂತರಕ್ಕೆ ವರ್ತಕರ ಸಮ್ಮತಿ

ಇಂದಿನಿಂದ ಸಿಂಗೇನ ಅಗ್ರಹಾರಕ್ಕೆ ಸಗಟು ಮಾರುಕಟ್ಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಕಲಾಸಿಪಾಳ್ಯದ ತರಕಾರಿ ಸಗಟು ಮಾರುಕಟ್ಟೆಯನ್ನು ಸಿಂಗೇನ ಅಗ್ರಹಾರಕ್ಕೆ ಸ್ಥಳಾಂತರಿಸಲು ವರ್ತಕರು ಸಮ್ಮತಿ ನೀಡಿದ್ದು, ಸೋಮವಾರದಿಂದಲೇ (ಏ.26) ವ್ಯಾಪಾರ ಆರಂಭಗೊಳ್ಳಲಿದೆ.

'ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದನ್ನು ಮನಗಂಡು, ಕರ್ಫ್ಯೂ ಅವಧಿಯಲ್ಲಿ ಕಲಾಸಿಪಾಳ್ಯ ಸಗಟು ಮಾರುಕಟ್ಟೆಯಲ್ಲಿ ವ್ಯಾಪಾರವನ್ನು ಸ್ವಯಂ ಪ್ರೇರಿತವಾಗಿ ನಿಲ್ಲಿಸಿದೆವು. ಹೆಚ್ಚು ಜನ ಸೇರದಂತೆ ತಡೆಯುವ ಉದ್ದೇಶದಿಂದ ಎಪಿಎಂಸಿ ಸೂಚನೆ ಮೇರೆಗೆ ಸಗಟು ಮಾರುಕಟ್ಟೆಯ 430 ಮಳಿಗೆಗಳನ್ನು ತಾತ್ಕಾಲಿಕವಾಗಿ ಸಿಂಗೇನ ಅಗ್ರಹಾರಕ್ಕೆ ಸ್ಥಳಾಂತರಿಸಲು ವರ್ತಕರೆಲ್ಲ ನಿರ್ಧರಿಸಿದ್ದೇವೆ' ಎಂದು ಮಾರುಕಟ್ಟೆಯ ತರಕಾರಿ ಮತ್ತು ಹಣ್ಣು ಸಗಟು ವರ್ತಕರ ಸಂಘದ ಅಧ್ಯಕ್ಷ ಆರ್.ವಿ.ಗೋಪಿ ತಿಳಿಸಿದರು.

'ಕಳೆದ ಲಾಕ್‌ಡೌನ್ ಅವಧಿಯಲ್ಲೂ ಸಿಂಗೇನ ಅಗ್ರಹಾರಕ್ಕೆ ಸಗಟು ಮಳಿಗೆಗಳು ಸ್ಥಳಾಂತರಗೊಂಡಿದ್ದವು. ಆದರೆ, ಮೂಲ ಸೌಕರ್ಯಗಳನ್ನು ಒದಗಿಸಿರಲಿಲ್ಲ. ಈಗಲೂ ಅದೇ ಪರಿಸ್ಥಿತಿ ಎದುರಾಗಿರುವುದರಿಂದ ಸಿಂಗೇನ ಅಗ್ರಹಾರದಲ್ಲಿ ಸಗಟು ವರ್ತಕರಿಗೆ ತಾತ್ಕಾಲಿಕ ಮಳಿಗೆಗಳ ನಿರ್ಮಾಣ ಪ್ರಗತಿಯಲ್ಲಿದೆ. ಎರಡು ದಿನಗಳಲ್ಲಿ ಮಳಿಗೆಗಳು ಸಿದ್ಧಗೊಳ್ಳಲಿವೆ. ವಿದ್ಯುತ್, ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಮಾಡುವುದಾಗಿ ಎಪಿಎಂಸಿ ಭರವಸೆ ನೀಡಿದೆ' ಎಂದರು.

'ಈ ಸಮಯದಲ್ಲಿ ಕಲಾಸಿಪಾಳ್ಯ ಸುತ್ತಮುತ್ತ ಸಗಟು ತರಕಾರಿ ವ್ಯಾಪಾರಕ್ಕೆ ಅನುವು ಮಾಡಿಕೊಟ್ಟಲ್ಲಿ, ನಾವು ಮತ್ತೆ ಇಲ್ಲೇ ವ್ಯಾಪಾರ ನಡೆಸಬೇಕಾಗುತ್ತದೆ. ಇದಕ್ಕೆ ಅಧಿಕಾರಿಗಳು ಅವಕಾಶ ನೀಡಬಾರದು' ಎಂದೂ ಎಚ್ಚರಿಸಿದರು.



ಕಲಾಸಿಪಾಳ್ಯ ಮಾರುಕಟ್ಟೆಯ ವರ್ತಕರಿಗಾಗಿ ಸಿಂಗೇನ ಅಗ್ರಹಾರದಲ್ಲಿ ತಾತ್ಕಾಲಿಕ ಮಳಿಗೆಗಳ ನಿರ್ಮಾಣಕ್ಕೆ ಸಿದ್ಧತೆ ನಡೆಯುತ್ತಿದೆ.

ಕೆ.ಆರ್.ಮಾರುಕಟ್ಟೆ ಸ್ಥಳಾಂತರ ಬೇಡ: ಕೆ.ಆರ್.ಮಾರುಕಟ್ಟೆಯಲ್ಲಿ ಸೀಮಿತ ಅವಧಿಯಲ್ಲಿ ವ್ಯಾಪಾರ ನಡೆಯುತ್ತಿರುವುದರಿಂದ ಜನಸಂದಣಿಯಾಗುತ್ತಿದೆ. ಹೀಗಾಗಿ, ಮಾರುಕಟ್ಟೆಯ ಅವಧಿ ವಿಸ್ತರಿಸಬೇಕು. ಮಾರುಕಟ್ಟೆ ಸ್ಥಳಾಂತರಿಸುವ ನಿರ್ಧಾರ ಅರ್ಥಹೀನ ಎಂದು ವರ್ತಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಮಾರುಕಟ್ಟೆಯಲ್ಲಿ ಒಟ್ಟು 2,200 ಮಳಿಗೆಗಳಿವೆ. ಇದರಲ್ಲಿ 150 ಹೂವಿನ ಮಳಿಗೆಗಳು ಹಾಗೂ 120 ಸಣ್ಣ ಮಳಿಗೆಗಳು ಇವೆ. ಉಳಿದ 1,900 ಮಳಿಗೆಗಳಲ್ಲಿ ಎಲ್ಲ ರೀತಿಯ ವ್ಯಾಪಾರ ನಡೆಯುತ್ತವೆ. ಮಾರುಕಟ್ಟೆ ಪ್ರಾಂಗಣದಲ್ಲಿರುವ ಮಳಿಗೆಗಳಲ್ಲಿ ಜನಸಂದಣಿಯಾಗುತ್ತಿಲ್ಲ. ಅಲ್ಲಿಗೆ ದೈನಂದಿನ ಗ್ರಾಹಕರು ಮಾತ್ರ ಬರುತ್ತಾರೆ. ಮಾರುಕಟ್ಟೆ ಹೊರಾಂಗಣದಲ್ಲಿರುವ ಮಳಿಗೆಗಳಲ್ಲಿ ಹೆಚ್ಚಿನ ಜನರು ಸೇರುತ್ತಾರೆ' ಎಂದು ಕೆ.ಆರ್. ಮಾರುಕಟ್ಟೆ ವರ್ತಕರ ಸಂಘದ ಅಧ್ಯಕ್ಷ ದಿವಾಕರ್ ತಿಳಿಸಿದರು.

'ಕರ್ಫ್ಯೂ ಅವಧಿಯಲ್ಲಿ ಅಗತ್ಯ ವಸ್ತುಗಳ ಖರೀದಿಗೆ ಕೆಲವೇ ಗಂಟೆಗಳವರೆಗೆ ಅವಕಾಶ ನೀಡಿರುವುದರಿಂದ ಒಂದೇ ಸಮಯಕ್ಕೆ ಎಲ್ಲರೂ ಖರೀದಿಗೆಂದು ಬರುತ್ತಾರೆ. ವ್ಯಾಪಾರದ ಅವಧಿಯನ್ನು ಸಂಜೆವರೆಗೆ ವಿಸ್ತರಿಸಿದರೆ, ಜನರು ಹೆಚ್ಚಾಗಿ ಸೇರುವುದಿಲ್ಲ. ಸರ್ಕಾರ ಈ ದೃಷ್ಟಿಯಲ್ಲೂ ಚಿಂತನೆ ನಡೆಸಬೇಕು' ಎಂದೂ ಸಲಹೆ ನೀಡಿದರು.

ಸುದ್ದಿ 2 ನಿಮಿಷ

'ಜನರಲ್ಲಿ ಆತಂಕ ಹುಟ್ಟಿಸಬೇಡಿ'

ಬೆಂಗಳೂರು: ಕೋವಿಡ್ ನಿಯಂತ್ರಣಕ್ಕೆ ಸರ್ಕಾರ, ಅಧಿಕಾರಿಗಳು ಮತ್ತು ವೈದ್ಯಕೀಯ ಸಮೂಹ ಹಗಲಿರುಳೆನ್ನದೇ ಶ್ರಮಿಸುತ್ತಿರುವ ಈ ಸಂದರ್ಭದಲ್ಲಿ ಸಮೂಹ ಮಾಧ್ಯಮಗಳು ಜನರಲ್ಲಿ ಆತ್ಮವಿಶ್ವಾಸ ಮೂಡಿಸುವ ಮತ್ತು ಸ್ಥೈರ್ಯ ಬೆಳೆಸುವ ಕಾರ್ಯಕ್ಕೆ ಮುಂದಾಗಬೇಕು ಎಂದು ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಮನವಿ ಮಾಡಿದ್ದಾರೆ.

'ಸಂದಿಗ್ಧತೆಯ ಸಮಯದಲ್ಲಿ ಜನರಲ್ಲಿ ಆತಂಕ ಹೆಚ್ಚಿಸುವ ವರದಿಗಳಿಂದಾಗಿ ಸೋಂಕಿತರೆಂದು ಕಂಡು ಬಂದ ತಕ್ಷಣ ಅವಶ್ಯವಿಲ್ಲದಿದ್ದರೂ ಭಯದಿಂದ ಆಸ್ಪತ್ರೆಗಳಿಗೆ ದೌಡಾಯಿಸುವವರ ಸಂಖ್ಯೆ ಹೆಚ್ಚಾಗಿದೆ. ಇದರ ಪರಿಣಾಮ ಹಾಸಿಗೆಗಳ ಕೊರತೆ ಆಗಿದೆ. ತುರ್ತು ಚಿಕಿತ್ಸೆಯ ಅನಿವಾರ್ಯ ಇರುವವರು ಕಂಗಾಲಾಗುವ ಪರಿಸ್ಥಿತಿ ನಿರ್ಮಾಣವಾಗಿದೆ' ಎಂದು ಅವರು ಹೇಳಿದ್ದಾರೆ.



ಕೋವಿಡ್ ನಿಯಂತ್ರಣದಲ್ಲಿ ಮಾಧ್ಯಮಗಳ ಪಾತ್ರವೂ ದೊಡ್ಡದು. ರೋಗದಿಂದ ಗುಣಮುಖರಾಗುವವರ ಬಗ್ಗೆಯೂ ಆದ್ಯತೆ ನೀಡಬೇಕು. ಅವರ ಅನುಭವಗಳನ್ನು ಸಾರ್ವಜನಿಕರ ಜತೆಗೆ ಹಂಚಿಕೊಂಡರೆ, ಜನರಲ್ಲಿ ವಿಶ್ವಾಸ ಮೂಡಿಸಲು ಸಾಧ್ಯವಾಗುತ್ತದೆ. ಜನರನ್ನು ಜಾಗೃತಗೊಳಿಸಲು ತಜ್ಞರ ಸಲಹೆ, ಮಾರ್ಗದರ್ಶನಗಳನ್ನು ನಿರಂತರ ತಲುಪುವಂತೆ ಮಾಡಲು ಹೆಚ್ಚಿನ ಸಮಯ ಮೀಸಲಿಟ್ಟರೆ ಜನರಲ್ಲಿ ಭರವಸೆ ಮೂಡುತ್ತದೆ ಎಂದು ಹೇಳಿದ್ದಾರೆ.

'ಸರ್ಕಾರ ಮತ್ತು ವ್ಯವಸ್ಥೆಯಲ್ಲಿ ಲೋಪದೋಷಗಳನ್ನು ಪತ್ತೆ ಮಾಡಿ ತೋರಿಸುವುದು ಸರಿ. ಇದರ ಜತೆಗೆ ಪರಿಹಾರಾತ್ಮಕ ಸಲಹೆಗಳೂ ಹರಿದು ಬರಲಿ. ನಾವೆಲ್ಲರೂ ಸಮಸ್ಯೆ ಎದುರಿಸಲು, ಸಂಕಷ್ಟ ದೂರ ಮಾಡಲು ಸಂಘಟನಾತ್ಮಕವಾಗಿ ಹೋರಾಡಬೇಕು' ಎಂದು ತಿಳಿಸಿದ್ದಾರೆ.

ಹೊರ ರೋಗಿಗಳಿಗೂ ಆಂಬುಲೆನ್ಸ್ ಸೇವೆ: ಡಿಸಿಎಂ ಅಶ್ವತ್ಥನಾರಾಯಣ

ಬೆಂಗಳೂರು: 'ಕೊರೊನಾ ಸೋಂಕಿನಿಂದಾಗಿ ಆಸ್ಪತ್ರೆಗಳಲ್ಲಿ ಹೊರ ರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಿರುವವರಿಗೂ ಆಂಬುಲೆನ್ಸ್ ಸೇವೆ ಒದಗಿಸಲಾಗುತ್ತದೆ. ಸೋಂಕಿತರಿಗೆ ಚಿಕಿತ್ಸೆ ನೀಡುವ ಸಲುವಾಗಿ ಮಲ್ಲೇಶ್ವರದ ಕೆ.ಸಿ. ಜನರಲ್ ಆಸ್ಪತ್ರೆ ಸೇರಿದಂತೆ ಇತರೆಡೆ ಅಗತ್ಯ ವ್ಯವಸ್ಥೆ ಮಾಡಲಾಗುತ್ತದೆ' ಎಂದು ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಕೊರೊನಾ ನಿಯಂತ್ರಣ ಸಂಬಂಧ ಪಶ್ಚಿಮ ವಲಯದ ಅಧಿಕಾರಿಗಳ ಜೊತೆ ಭಾನುವಾರ ಸಭೆ ನಡೆಸಿದ ಅವರು ಬಳಿಕ ಮಾಧ್ಯಮದವರ ಜೊತೆ ಮಾತನಾಡಿದರು.

'ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಹೊಸದಾಗಿ ಹೊರ ರೋಗಿಗಳ ವಿಭಾಗ (ಒಪಿಡಿ) ತೆರೆಯಲಾಗುತ್ತದೆ' ಎಂದರು.

ಸಂಸದ ಪಿ.ಸಿ.ಮೋಹನ್, ಪಶ್ಚಿಮ ವಲಯದ ಉಸ್ತುವಾರಿ ಉಜ್ವಲ್ ಕುಮಾರ್ ಘೋಷ್ ಇದ್ದರು.

'ರಾಜ್ಯದ ಅಗತ್ಯ ಪೂರೈಸಲು ದೆಹಲಿಯಲ್ಲಿ ಅಧಿಕಾರಿ ನೇಮಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಕ್ಕೆ 1,400 ಟನ್ ವೈದ್ಯಕೀಯ ಆಮ್ಲಜನಕ ನೀಡಲು ಕೇಂದ್ರ ಸಿದ್ಧವಿದ್ದು, ಕೋವಿಡ್‌ಗೆ ಸಂಬಂಧಿಸಿದಂತೆ ರಾಜ್ಯ ಎಲ್ಲ ಅಗತ್ಯಗಳನ್ನು ಪೂರೈಸಲು ದೆಹಲಿಯಲ್ಲಿ ಹಿರಿಯ ಅಧಿಕಾರಿಯೊಬ್ಬರನ್ನು ನೇಮಿಸಲಾಗಿದೆ ಎಂದು ಕೇಂದ್ರದ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಡಿ.ವಿ. ಸದಾನಂದ ಗೌಡ ಹೇಳಿದರು.

ರಾಜ್ಯದಲ್ಲಿ ಕೊರೊನಾ ಪರಿಸ್ಥಿತಿ ಕುರಿತು ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಮತ್ತು ಹಿರಿಯ ಅಧಿಕಾರಿಗಳ ಜೊತೆ ವಿಧಾನ ಸೌಧದಲ್ಲಿ ಭಾನುವಾರ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಕೋವಿಡ್ ನಿಯಂತ್ರಿಸಲು ಅಗತ್ಯವಾದ ನೆರವಿನ ಬಗ್ಗೆ ಒಂದು ವಾರ ಮೊದಲೇ ತಿಳಿಸಿದರೆ, ಕೇಂದ್ರ ಸಚಿವ ಸಂಪುಟದಲ್ಲಿ ರಾಜ್ಯವನ್ನು ಪ್ರತಿನಿಧಿಸುವ ಸಚಿವರು ಒಂದಾಗಿ, ಬೇಡಿಕೆ ಈಡೇರಿಸಲು ಶ್ರಮಿಸುತ್ತೇವೆ' ಎಂದರು.

'ಮೇ ತಿಂಗಳಲ್ಲಿ ಪರಿಸ್ಥಿತಿ ಇನ್ನಷ್ಟು ಗಂಭೀರವಾಗುವ ಸಾಧ್ಯತೆ ಇದ್ದು, 1,400 ಟನ್ ಆಕ್ಸಿಜನ್, ರೆಮ್‌ಡಿಸಿವಿರ್ ಚುಚ್ಚುಮದ್ದು ಸೇರಿದಂತೆ ಹೆಚ್ಚುವರಿ ಸೌಲಭ್ಯಗಳನ್ನು ನೀಡಬೇಕು' ಎಂದು ಸುಧಾಕರ್ ಸಭೆಯಲ್ಲಿ ಪ್ರಸ್ತಾಪಿಸಿದರು.

ಅದಕ್ಕೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ ಸದಾನಂದಗೌಡ, 'ರಾಜ್ಯಕ್ಕೆ ಅಗತ್ಯ ನೆರವು ಒದಗಿಸಲು ದೆಹಲಿಯ ಕಚೇರಿಯಲ್ಲಿ ಹಿರಿಯ ಅಧಿಕಾರಿಯೊಬ್ಬರನ್ನು ನಿಯೋಜಿಸಿದ್ದೇನೆ' ಎಂದರು.

'ಇದೇ 30ರವರೆಗಿನ ಬಳಕೆಗಾಗಿ ರಾಜ್ಯಕ್ಕೆ 1 ಲಕ್ಷ ರೆಮ್‌ಡಿಸಿವಿರ್ ವೈಯಲ್ಸ್ ಬೇಕು ಎಂದು ರಾಜ್ಯ ಸರ್ಕಾರ ಬೇಡಿಕೆ ಇಟ್ಟಿತ್ತು. ಈಗ 1.22 ಲಕ್ಷ ವೈಯಲ್ಸ್ ಹಂಚಿಕೆ ಮಾಡಲಾಗಿದೆ. ಆಮ್ಲಜನಕ ಬಳಕೆ ಪ್ರಮಾಣ ಮೇಲೆ ರೆಮ್‌ಡಿಸಿವಿರ್ ಪ್ರಮಾಣ ನಿಗದಿ ಮಾಡುವುದು ಸರಿಯಲ್ಲ. ಕೊರೊನಾ ಸೋಂಕಿತರ ಸಂಖ್ಯೆ ಆಧರಿಸಿ ಹಂಚಿಕೆಯಾಗಬೇಕು ಎಂಬುದು ರಾಜ್ಯಗಳ ಮತ್ತು ನಮ್ಮೆಲ್ಲರ ಅಭಿಪ್ರಾಯವಾಗಿತ್ತು. ಅದರಂತೆ, ರೆಮ್‌ಡಿಸಿವರ್ ಮರುಹಂಚಿಕೆ ಮಾಡಲಾಗಿದೆ. ಅದೇ ರೀತಿ 800 ಮೆಟ್ರಿಕ್ ಟನ್ ಆಮ್ಲಜನಕ ಹಂಚಿಕೆ ಮಾಡಲಾಗಿದೆ' ಎಂದರು.

'ಲಸಿಕಾ ಅಭಿಯಾನಕ್ಕೆ ವೇಗ ನೀಡಲು ರಾಜ್ಯವು ಹೆಚ್ಚಿನ ಲಸಿಕೆ ಪೂರೈಕೆಗೆ ಬೇಡಿಕೆ ಇಟ್ಟಿದೆ. ಈ ಬಗ್ಗೆ ಮುಂದಿನ ಸಂಪುಟ ಸಭೆಯಲ್ಲಿ ಪ್ರಸ್ತಾವಿಸುತ್ತೇನೆ' ಎಂದರು.

ಮನ್ ಕೀ ಬಾತ್- ನರ್ಸ್ ಸೇವೆಗೆ ಮೆಚ್ಚುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆ.ಸಿ.ಜನರಲ್ ಆಸ್ಪತ್ರೆಯ ಹಿರಿಯ ಶುಶ್ರೂಷಕಿ ಸುರೇಖಾ ಹೆಸರನ್ನು ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಮನ್ ಕೀ ಬಾತ್ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ.

'ನೀವೂ ಸೇರಿದಂತೆ ಎಲ್ಲ ಶುಶ್ರೂಷಕರು ಹಾಗೂ ಆರೋಗ್ಯ ಸಿಬ್ಬಂದಿ ಈ ಕಠಿಣ ಪರಿಸ್ಥಿತಿಯಲ್ಲಿ ಉತ್ತಮ ಕೆಲಸ ಮಾಡಿದ್ದೀರಿ. ಇದಕ್ಕೆ ದೇಶದ ಜನ ನಿಮಗೆ ಧನ್ಯರಾಗಿದ್ದಾರೆ' ಎಂದು ಮೋದಿ ಅಭಿನಂದಿಸಿದರು.



ಸುರೇಖಾ

'ದೇಶದ ನಾಗರಿಕರಿಗೆ ಈ ಪರಿಸ್ಥಿತಿಯಲ್ಲಿ ನೀವು ನೀಡುವ ಸಂದೇಶವೇನು?' ಎಂದು ಪ್ರಧಾನಿ ಮೋದಿ ಅವರ ಪ್ರಶ್ನೆಗೆ ಉತ್ತರಿಸಿದ ಸುರೇಖಾ, 'ಈ ಸಂದರ್ಭದಲ್ಲಿ ಎಲ್ಲರೂ ನೆರೆಹೊರೆಯವರೊಂದಿಗೆ ವಿನಮ್ರವಾಗಿರಿ. ಶೀಘ್ರ ಪರೀಕ್ಷೆ ಹಾಗೂ ನಿಖರ ಟ್ರ್ಯಾಕಿಂಗ್‌ನಿಂದ ಮರಣ ಪ್ರಮಾಣ ಕಡಿಮೆ ಮಾಡಲು ನಮಗೆ ಸಹಕಾರಿಯಾಗಲಿದೆ'.

'ನಿಮಗೆ ಯಾವುದೇ ಸೋಂಕಿನ ಲಕ್ಷಣಗಳು ಕಂಡು ಬಂದ ಕೂಡಲೇ ಸ್ವಯಂಪ್ರೇರಿತವಾಗಿ ಐಸೊಲೇಟ್ ಆಗಿ. ಶೀಘ್ರವಾಗಿ ಸಮೀಪದ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ ಪಡೆದುಕೊಳ್ಳಿ. ಇಡೀ ಸಮುದಾಯ ಈ ಸೋಂಕಿನ ಬಗ್ಗೆ ಎಚ್ಚರವಾಗಿರಬೇಕು. ಪಾಸಿಟಿವ್ ವರದಿ ಬಂದ ಕೂಡಲೇ ಗಾಬರಿಯಾಗಬಾರದು'.

'ಯಾವುದೇ ಲಸಿಕೆ ಶೀಘ್ರವೇ ಶೇ 100ರಷ್ಟು ರಕ್ಷಣೆ ನೀಡುವುದಿಲ್ಲ. ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿಸಲು ಸಮಯ ತೆಗೆದುಕೊಳ್ಳುತ್ತದೆ. ಲಸಿಕೆ ಹಾಕಿಸಿಕೊಳ್ಳುವ ವಿಚಾರದಲ್ಲಿ ಭಯ ಪಡದಿರಿ. ಸ್ವಇಚ್ಛೆಯಿಂದ ಲಸಿಕೆ ಹಾಕಿಸಿಕೊಳ್ಳಿ. ಅನಾರೋಗ್ಯ ಸಮಸ್ಯೆ ಕಾಣಿಸಿಕೊಂಡವರಿಂದ ದೂರವಿರಿ. ಕೊರೊನಾ ಸೇವೆಯಲ್ಲಿ ತೊಡಗಿರುವ ಮುಂಚೂಣಿ ಕಾರ್ಮಿಕರು ಹಾಗೂ ಅಧಿಕಾರಿಗಳ ಮೇಲೆ ಕರುಣೆ ಇರಲಿ. ಈ ಪರಿಸ್ಥಿತಿಯ ವಿರುದ್ಧ ಹೋರಾಡಲು ನಿಮ್ಮೆಲ್ಲರ ಸಹಕಾರ ಅಗತ್ಯ' ಎಂದು ಅವರು ಮನವಿ ಮಾಡಿದರು.

ವಿಪತ್ತು ನಿರ್ವಹಣಾ ಕಾಯ್ದೆಯಡಿ 16 ಎಫ್‌ಐಆರ್

ಬೆಂಗಳೂರು: ವಾರಾಂತ್ಯದ ಕರ್ಫ್ಯೂ ಜಾರಿ ವೇಳೆ ನಿಯಮ ಉಲ್ಲಂಘಿಸಿದ್ದವರ ವಿರುದ್ಧ ವಿಪತ್ತು ನಿರ್ವಹಣಾ ಕಾಯ್ದೆಯಡಿ 16 ಎಫ್‌ಐಆರ್ ದಾಖಲಾಗಿವೆ.

'ಕರ್ಫ್ಯೂ ಜಾರಿ ಸಂದರ್ಭದಲ್ಲೇ ಕೆಲವರು ನಿಯಮ ಉಲ್ಲಂಘಿಸಿದ್ದಾರೆ. ಅಂಥವರ ವಿರುದ್ಧ ನಗರದ ವಿವಿಧ ಠಾಣೆಗಳಲ್ಲಿ 16 ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

886 ವಾಹನ ಜಪ್ತಿ: ಶನಿವಾರವಷ್ಟೇ ನಿಯಮ ಉಲ್ಲಂಘಿಸಿದ್ದಕ್ಕಾಗಿ 1,149 ವಾಹನಗಳನ್ನು ಜಪ್ತಿ ಮಾಡಿದ್ದ ಪೊಲೀಸರು, ಭಾನುವಾರವೂ 886 ವಾಹನಗಳನ್ನು ಜಪ್ತಿ ಮಾಡಿದ್ದಾರೆ.

'ಅನಗತ್ಯವಾಗಿ ರಸ್ತೆಯಲ್ಲಿ ಓಡಾಡುತ್ತಿದ್ದವರನ್ನು ತಡೆದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಹೋಟೆಲ್ ಮುಚ್ಚಿಸಿದ ಪೊಲೀಸರು: ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊರೊನಾ ತಡೆಗಾಗಿ ಜಾರಿಯಾಗಿರುವ ಕರ್ಫ್ಯೂ ಅವಧಿಯಲ್ಲಿ ಅಗತ್ಯ ಸೇವೆಯಡಿ ಹೋಟೆಲ್‌ಗಳಲ್ಲಿ ಪಾರ್ಸೆಲ್‌ಗೆ ಅವಕಾಶ ಕಲ್ಪಿಸಲಾಗಿದೆ. ಆದರೆ, ನಿಯಮ ತಿಳಿಯದ ಕೆಲ ಪೊಲೀಸರು ಹೋಟೆಲ್‌ಗಳನ್ನು ಬಲವಂತವಾಗಿ ಮುಚ್ಚಿಸುತ್ತಿದ್ದಾರೆ' ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘ ಆಕ್ಷೇಪ ವ್ಯಕ್ತಪಡಿಸಿದೆ.

'ಕೊರೊನಾ ಎರಡನೇ ಅಲೆ ನಿಯಂತ್ರಣಕ್ಕಾಗಿ ವಾರಾಂತ್ಯದ ಕರ್ಫ್ಯೂ ಜಾರಿಯಲ್ಲಿದೆ. ಈ ವೇಳೆ ಅಗತ್ಯ ಸೇವೆಗಳಿಗೆ ಸರ್ಕಾರವೇ ಅನುಮತಿ ನೀಡಿದೆ. ಹೋಟೆಲ್‌ಗಳನ್ನೂ ಅಗತ್ಯ ಸೇವೆಯಡಿ ಪರಿಗಣಿಸಿ, ಪಾರ್ಸೆಲ್‌ಗೆ ಮಾತ್ರ ಅವಕಾಶ ನೀಡಿದೆ. ಆದರೂ, ಶನಿವಾರ ಹಾಗೂ ಭಾನುವಾರ ನಗರದ ವಿವಿಧೆಡೆ ಪೊಲೀಸರು ಹೋಟೆಲ್‌ಗಳನ್ನು ಬಲವಂತವಾಗಿ ಮುಚ್ಚಿಸಿ ಅಡ್ಡಿಪಡಿಸಿದ್ದಾರೆ' ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಪಿ.ಸಿ.ರಾವ್ ತಿಳಿಸಿದರು.

'ವಿಮಾನ ನಿಲ್ದಾಣ ರಸ್ತೆ, ಎನ್.ಆರ್.ಕಾಲೊನಿ, ನಾಗರಬಾವಿ ಸೇರಿದಂತೆ ಹಲವು ಭಾಗಗಳಲ್ಲಿ ಹೋಟೆಲ್‌ಗಳನ್ನು ಮುಚ್ಚಿಸಿದ್ದಾರೆ. ಸರ್ಕಾರದ ಸೂಚನೆಗಳನ್ನು ಅರಿತಿಲ್ಲದ ಪೊಲೀಸರು ಈ ರೀತಿ ಮಾಡಿದ್ದಾರೆ. ಈಗ ವ್ಯಾಪಾರ ನಡೆಸುವುದೇ ಹೋಟೆಲ್‌ಗಳ ಉದ್ದೇಶವಲ್ಲ. ಜನರಿಗೆ ಆಹಾರದ ಅಗತ್ಯವಿದೆ. ಅದಕ್ಕೆ ಅವಕಾಶವಿದ್ದರೂ ಅಡ್ಡಿಪಡಿಸುವುದು ಸರಿಯಲ್ಲ' ಎಂದರು.

'ಹೋಂ ಕ್ವಾರಂಟೈನ್‌ನಲ್ಲಿರುವ ಹಲವು ರೋಗಿಗಳಿಗೆ ಹೋಟೆಲ್‌ಗಳಿಂದಲೇ ಆಹಾರ ಪೂರೈಕೆಯಾಗುತ್ತಿದೆ. ಹಲವಾರು ಮಂದಿ ಹೋಟೆಲ್‌ಗಳನ್ನು ಅವಲಂಬಿಸಿದ್ದಾರೆ. ಶನಿವಾರ ಹಲವೆಡೆ ಹೋಟೆಲ್ ಮುಚ್ಚಿಸಿದ್ದರಿಂದ ಭಾನುವಾರವೂ ಕೆಲ ಹೋಟೆಲ್‌ಗಳನ್ನು ಮುಚ್ಚಲಾಗಿತ್ತು. ಇದರಿಂದ ಆಹಾರಕ್ಕೆ ಹೆಚ್ಚು ಸಮಸ್ಯೆಯಾಯಿತು. ಕೊರೊನಾ ಪರಿಸ್ಥಿತಿಯಲ್ಲಿ ಪೊಲೀಸರು ಹೋಟೆಲ್‌ಗಳಿಗೆ ಸಹಕಾರ ನೀಡಬೇಕು' ಎಂದೂ ಮನವಿ ಮಾಡಿದರು.

ಕೇಂದ್ರದ ಸೂಚನೆ: ಪೋಸ್ಟ್ ಕೈಬಿಟ್ಟ ಜಾಲತಾಣಗಳು

ನವದೆಹಲಿ: ದೇಶದಲ್ಲಿ ಕೋವಿಡ್ ನಿರ್ವಹಣೆಗೆ ಸಂಬಂಧಿಸಿದಂತೆ ಟ್ವಿಟರ್ ಮತ್ತು ಇತರೆ ಸಾಮಾಜಿಕ ಜಾಲತಾಣಗಳಲ್ಲಿ ಮಾಡಲಾಗಿದ್ದ ಸುಮಾರು 100 ಪೋಸ್ಟ್‌ಗಳನ್ನು ಕೇಂದ್ರ ಸರ್ಕಾರದ ವಿನಂತಿ ಮೇರೆಗೆ ಆಯಾ ಜಾಲತಾಣ ವೇದಿಕೆಗಳಿಂದ ತೆಗೆಯಲಾಗಿದೆ.

ದೇಶದಲ್ಲಿ ಉದ್ಭವಿಸಿರುವ ವೈದ್ಯಕೀಯ ಬಿಕ್ಕಟ್ಟು ಅಥವಾ ನಕಲಿ ಸುದ್ದಿಗಳನ್ನು ತೆಗೆಯಲಾಗಿದೆ ಎಂದು ತಿಳಿಸಲಾಗಿದೆ. 'ಹೀಗೆ ತೆಗೆಯಲಾದ ಪೋಸ್ಟ್‌ಗಳ ಬಗ್ಗೆ ಆಯಾ ಖಾತೆದಾರರಿಗೆ, ಕಾನೂನ ಪ್ರಕಾರ ಸರ್ಕಾರದ ಕೋರಿಕೆಯಂತೆ ಈ ಕ್ರಮವಹಿಸಲಾಗಿದೆ ಎಂದು ಮಾಹಿತಿ ನೀಡಲಾಗಿದೆ' ಎಂದು ಟ್ವಿಟರ್ ತಿಳಿಸಿದೆ.

ಏರ್ ಇಂಡಿಯಾ ಸೇವೆ

ನವದೆಹಲಿ (ಪಿಟಿಐ): ಖಾಸಗಿ ಸಂಸ್ಥೆಗಳಿಗಾಗಿ ಏರ್ ಇಂಡಿಯಾವು ಅಮೆರಿಕದಿಂದ ಮುಂದಿನ ಎರಡು ದಿನಗಳಲ್ಲಿ 600 ಆಕ್ಸಿಜನ್ ಪೂರೈಕೆ ಪರಿಕರಗಳನ್ನು ಹೊತ್ತು ತರಲಿದೆ ಎಂದು ಮೂಲಗಳು ತಿಳಿಸಿವೆ.

ದೇಶದ ವಿವಿಧ ಆಸ್ಪತ್ರೆಗಳು ವೈದ್ಯಕೀಯ ಆಮ್ಲಜನಕದ ಕೊರತೆ ಎದುರಿಸುತ್ತಿವೆ. ಏರ್ ಇಂಡಿಯಾ ಬರುವ ದಿನಗಳಲ್ಲಿ ಸುಮಾರು 10 ಸಾವಿರ ಆಕ್ಸಿಜನ್ ಪರಿಕರಗಳನ್ನು (ಕಾನ್‌ಸೆಂಟ್ರೇಟರ್ಸ್) ತರುವ ಗುರಿ ಹೊಂದಿದೆ ಎಂದು ಮೂಲಗಳು ತಿಳಿಸಿವೆ.

'ಜ್ಞಾನವಿದ್ದಲ್ಲಿ ಸಂಪತ್ತು ನೆಲೆಸಿರುತ್ತದೆ'

ಶಿಕ್ಷಕರಿಗೆ 'ಗುರುದಕ್ಷಿಣೆ' ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜ್ಞಾನವಿದ್ದಲ್ಲಿ ಸಂಪತ್ತು ನೆಲೆಸಿರುತ್ತದೆ. ಜ್ಞಾನ ಯಜ್ಞದಲ್ಲಿ ಶಿಕ್ಷಕರು ವಿದ್ಯೆಯನ್ನು ದಾನ ಮಾಡುತ್ತಾರೆ' ಎಂದು ಶಿಕ್ಷಣ ತಜ್ಞ ಗುರುರಾಜ ಕರಜಗಿ ತಿಳಿಸಿದರು.

ರೋಟರಿ ಬೆಂಗಳೂರು ಜಂಕ್ಷನ್, ರೋಟರಿ ಬೆಂಗಳೂರು ಹಲಸೂರು, ರೋಟರಿ ಬೆಂಗಳೂರು ಬಸವನಗುಡಿ, 'ಪ್ರಜಾವಾಣಿ' ಪ್ರಾಯೋಜಕತ್ವದಲ್ಲಿ ರೋಟರಿ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 3190 ಭಾನುವಾರ ಆನ್‌ಲೈನ್ ಮೂಲಕ ಆಯೋಜಿಸಿದ್ದ 'ಗುರುದಕ್ಷಿಣೆ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಜ್ಞಾನವನ್ನು ಉಚಿತವಾಗಿ ಪಸರಿಸುವ ಏಕೈಕ ಕ್ಷೇತ್ರ ಶಿಕ್ಷಣ. ಕೋವಿಡ್ ಕಾಲಘಟ್ಟದಲ್ಲಿ ಶಿಕ್ಷಕರು ಅನೇಕ ಸವಾಲುಗಳನ್ನು ಎದುರಿಸಿದರು. ಭೌತಿಕ ತರಗತಿಗಳಿಗೆ ಅವಕಾಶವಿಲ್ಲವೆಂದು ಸುಮ್ಮನಾಗಲಿಲ್ಲ. ಹೋದ ವರ್ಷದ ಏಪ್ರಿಲ್‌ನಿಂದ ಆನ್‌ಲೈನ್ ತರಗತಿಗಳನ್ನು ಹಮ್ಮಿಕೊಂಡು ಮಕ್ಕಳು ಕಲಿಕೆಯಲ್ಲಿ ತೊಡಗಿಕೊಳ್ಳುವಂತೆ ಮಾಡಿದರು. ಇಂತಹ ಶಿಕ್ಷಕರನ್ನು ಗುರುತಿಸಿ ಗೌರವಿಸುತ್ತಿರುವ ರೋಟರಿ ಸಂಸ್ಥೆಯ ಕಾರ್ಯ ಮೆಚ್ಚುವಂತಹದ್ದು' ಎಂದರು.

ಪ್ರಶಸ್ತಿ ಪುರಸ್ಕೃತರ ವಿವರ

ಹೆಸರು	ವಿಭಾಗ	ಶಾಲೆ/ಸಂಸ್ಥೆ
ಅನುರಾಧ ಸಾಯಿನಾಥನ್	ಪೂರ್ವ ಪ್ರಾಥಮಿಕ ಶಾಲೆ	ಹಾರ್ವೆಸ್ಟ್ ಇಂಟರ್‌ನ್ಯಾಷನಲ್ ಸ್ಕೂಲ್, ಬೆಂಗಳೂರು.
ರೆಂಜಿಮಾ ಮನೋಜ್	ಪ್ರಾಥಮಿಕ ಶಾಲೆ	ಡೀನ್ಸ್ ಅಕಾಡೆಮಿ, ವೈಟ್‌ಫೀಲ್ಡ್
ಬಿ.ಜಿ.ರಾಮಚಂದ್ರ ಭಟ್	ಪ್ರೌಢಶಾಲೆ	ಸರ್ಕಾರಿ ಪ್ರೌಢಶಾಲೆ, ಬ್ಯಾಟರಾಯನಪುರ
ಗೀತಾ ಸಿಂಧೆ ಬೆಣಗಿ	ಕಾಲೇಜು	ಬಿಇಎಲ್ ಪದವಿಪೂರ್ವ ಕಾಲೇಜು, ಬೆಂಗಳೂರು
ಜಯಶ್ರೀ ರವಿ	ಕಲೆ ಮತ್ತು ಸಂಗೀತ ಶಿಕ್ಷಣ	ಲಯಾಭಿನಯ ಸಾಂಸ್ಕೃತಿಕ ಪ್ರತಿಷ್ಠಾನ
ಎಚ್.ರುದ್ರೇಶ್	ಕ್ರೀಡೆ	ಶ್ರೀ ಜಯಭಾರತಿ ಕೋ-ಆಪರೇಟಿವ್ ಪ್ರೌಢಶಾಲೆ, ಅತ್ತಿಬೆಲೆ.
ರಾಧಾಕೃಷ್ಣ ಉರಾಳ	ಸಾಂಪ್ರದಾಯಿಕ ಜ್ಞಾನ ಶಿಕ್ಷಣ	ಕಲಾ ಕದಂಬ ಆರ್ಟ್ ಸೆಂಟರ್
ಸೈಯದ್ ಮನ್ಸೂರ್	ವಿಶೇಷ ಮಕ್ಕಳ ಶಿಕ್ಷಣ	ಮಿತ್ರ ಜ್ಯೋತಿ ಸ್ವಯಂ ಸೇವಾ ಸಂಘ

ಈ ಪ್ರಶಸ್ತಿ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿದೆ. ಇನ್ನಷ್ಟು ಉತ್ತಮ ಕೆಲಸ ಮಾಡಲು ಪ್ರೇರಣೆಯಾಗಿದೆ. ಜೊತೆಗೆ ಸಂತಸವೂ ನೀಡಿದೆ

ರಾಮಚಂದ್ರ ಭಟ್, ಪ್ರಶಸ್ತಿ ಪುರಸ್ಕೃತರು

ಸಾಮಾಜಿಕ ಹೊಣೆಗಾರಿಕೆಯನ್ನು ಮಕ್ಕಳಿಗೆ ಹೇಳಿಕೊಟ್ಟರೆ ಅವರು ಅಡ್ಡದಾರಿ ಹಿಡಿಯುವುದಿಲ್ಲ. ಆ ಕೆಲಸವನ್ನು ನಾವೆಲ್ಲ ಮಾಡಬೇಕು

ಗೀತಾ ಸಿಂಧೆ, ಪ್ರಶಸ್ತಿ ಪುರಸ್ಕೃತರು

ರೋಟರಿ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 3190 ಜಿಲ್ಲಾ ಗವರ್ನರ್ ಬಿ.ಎಲ್.ನಾಗೇಂದ್ರ ಪ್ರಸಾದ್ 'ಇಂತಹ ಕಾರ್ಯಕ್ರಮಗಳನ್ನು ಗ್ರಾಮೀಣ ಭಾಗಗಳಲ್ಲಿ ಹೆಚ್ಚಾಗಿ ಆಯೋಜಿಸಬೇಕು. ರಾಜ್ಯದಲ್ಲಿ ಐದು ರೋಟರಿ ಡಿಸ್ಟ್ರಿಕ್ಟ್ ಇವೆ. ಎಲ್ಲಾ ಸಂಸ್ಥೆಗಳು ಒಟ್ಟಾಗಿ ಕೆಲಸ ಮಾಡಬೇಕು. ತೆರೆಮರೆಯಲ್ಲಿರುವ ಶಿಕ್ಷಕರನ್ನು ಗುರುತಿಸಿ ಗೌರವಿಸಿರುವುದು ಖುಷಿಯ ವಿಚಾರ. ಆ ಕೆಲಸ ನಮ್ಮಿಂದ ಆಗಿದೆ. ಈ ಕಾರ್ಯಕ್ಕೆ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಕೂಡ ಕೈಜೋಡಿಸಿವೆ. ಈ ಪತ್ರಿಕೆಗಳು ಅಗತ್ಯ ಸಲಹೆ ಸಹಕಾರ ನೀಡಿ ಪ್ರೋತ್ಸಾಹಿಸುತ್ತಿವೆ' ಎಂದು ತಿಳಿಸಿದರು.

'ಪ್ರಜಾವಾಣಿ'ಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಇದ್ದರು.

ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿದ್ದವರು: ಗುರುರಾಜ ಕರಜಗಿ (ಶಿಕ್ಷಣ ತಜ್ಞ), ಅಶೋಕ್ ಕಾಮತ್ (ಮುಖ್ಯಸ್ಥರು, ಅಕ್ಷರ ಫೌಂಡೇಷನ್), ಮಾಯಾ ಮೆನನ್ (ಸಂಸ್ಥಾಪಕ ನಿರ್ದೇಶಕಿ, ದಿ ಟೀಚರ್ ಫೌಂಡೇಷನ್), ಜಿ.ಕೆ. ವಿಶ್ವನಾಥ್ (ಮ್ಯಾಚ್ ಪಾಯಿಂಟ್ ಟೇಬಲ್ ಟೆನಿಸ್ ಅಕಾಡೆಮಿಯ ಸಂಸ್ಥಾಪಕ), ಜ್ಯೋತ್ಸ್ನಾ ಬಾಪಟ್ (ಡೀನ್, ಐಐಟಿ ಬೆಂಗಳೂರು).

ಆರೋಗ್ಯಯುತ ಬೆಂಗಳೂರು ನಗರ: ಬದಲಾವಣೆಯ ಹೆಜ್ಜೆಗೆ ಸಜ್ಜಾಗಲು ಸಕಾಲ

• ಪ್ರವೀಣ್ ಕುಮಾರ್ ಪಿ.ವಿ.


ಬೆಂಗಳೂರು: ಗುಣಮಟ್ಟದ ಆರೋಗ್ಯಸೇವೆಗೆ ಹೆಸರಾಗಿದ್ದ ಹಾಗೂ ಆರೋಗ್ಯ ಪ್ರವಾಸೋದ್ಯಮಕ್ಕಾಗಿ ದೇಶ ವಿದೇಶಗಳಲ್ಲಿ ಹೆಸರುವಾಸಿಯಾಗಿದ್ದ ಬೆಂಗಳೂರು ಈಗ ಆಮ್ಲಜನಕ ಸಿಗದೆ ಸಾಯುವವರ ಸಂಖ್ಯೆಯ ಕಾರಣಕ್ಕಾಗಿ ಏಕಾಏಕಿ ಕುಖ್ಯಾತಿ ಪಡೆದಿದೆ. ದೇಶದಲ್ಲೇ ಅತಿ ಹೆಚ್ಚಿನ ಸಂಖ್ಯೆಯಲ್ಲಿ (1,80,542) ಕೊರೊನ ಸೋಂಕಿತರು ಇರುವ ನಗರ ಬೆಂಗಳೂರು.

ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿರುವ, ದೇಶದ ತಂತ್ರಜ್ಞಾನದ ರಾಜಧಾನಿ ಎಂಬ ಹೆಗ್ಗಳಿಗೆ ಪಡೆದ ಈ ನಗರದಲ್ಲಿ ಕೋವಿಡ್ ರೋಗಿಗಳು ಚಿಕಿತ್ಸೆಗೆ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಕೊರತೆ, ತೀವ್ರ ನಿಗಾ ಘಟಕದ (ಐಸಿಯು), ವೆಂಟಿಲೇಟರ್ ಸೌಕರ್ಯಗಳಿರುವ ಹಾಸಿಗೆಗಳ ಅಲಭ್ಯತೆಯಿಂದ ಪಡಿಪಾಟಲು ಅನುಭವಿಸುವ ಕರಾಳ ಸನ್ನಿವೇಶ ಸೃಷ್ಟಿಯಾಗಿದ್ದಾದರೂ ಹೇಗೆ?

ಆಧುನಿಕ ಆರೋಗ್ಯ ಸೇವೆಯ ಅವಶ್ಯಕತೆ ಮನಗಂಡು ನಮ್ಮ ಪೂರ್ವಜರು 1987ರಲ್ಲೇ ವಿಕ್ಟೋರಿಯಾ ಆಸ್ಪತ್ರೆಗೆ ಅಡಿಗಲ್ಲು ಹಾಕಿಸಿದ್ದರು. 1901ರಲ್ಲಿ ಈ ಆಸ್ಪತ್ರೆ ಸಾರ್ವಜನಿಕ ಸೇವೆಗೆ ಲಭ್ಯವಾಗಿತ್ತು. ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ ಸ್ಥಾಪನೆಯಾಗಿದ್ದು 1916ರಲ್ಲಿ. ನೂರು ವರ್ಷಗಳ ಹಿಂದೆಯೇ ಸಾರ್ವಜನಿಕ ಆರೋಗ್ಯ ಸೇವೆಯಲ್ಲಿ ಸಾಕಷ್ಟು ಮುಂಚೂಣಿಯಲ್ಲಿದ್ದ ಬೆಂಗಳೂರು ಎಡವಿದ್ದೆಲ್ಲಿ ಎಂಬುದು ಯಕ್ಷಪ್ರಶ್ನೆ.

2013ರ ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದ ವರದಿ ಬೆಂಗಳೂರು ಸೇರಿದಂತೆ ರಾಷ್ಟ್ರದ ಪ್ರಮುಖ ಮಹಾನಗರಗಳಲ್ಲಿ ಆರೋಗ್ಯ ಮೂಲಸೌಕರ್ಯಕ್ಕೆ ಸಂಬಂಧಿಸಿದ ಕುಂದುಕೊರತೆಗಳ ಬಗ್ಗೆ ಬೆಳಕು ಚೆಲ್ಲಿತ್ತು. ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವೇ ರೂಪಿಸಿದ್ದ ಈ ವರದಿಯ ಶಿಫಾರಸುಗಳು ಜಾರಿಯಾಗಿದ್ದೇ ಆದರೆ, ಜನರು ಈಗ ಜೀವ ಉಳಿಸಿಕೊಳ್ಳಲು ಖಾಸಗಿ ಆಸ್ಪತ್ರೆಯಿಂದ ಮತ್ತೊಂದು ಖಾಸಗಿ ಆಸ್ಪತ್ರೆಗೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ.

ಸೋಂಕು ತಗುಲಿದ ಬಳಿಕ ರೋಗಿಯನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡುವುದು ನಂತರದ ಮಾತು. ಆದರೆ, ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡಾಗ ಸೋಂಕಿತರನ್ನು ಪ್ರತ್ಯೇಕಿಸಿ, ಅವರ ಜೊತೆ ನೇರ ಮತ್ತು ಪರೋಕ್ಷ ಸಂಪರ್ಕ ಹೊಂದಿದವರನ್ನು ಪತ್ತೆ ಹಚ್ಚಿ ಪ್ರತ್ಯೇಕ ವಾಸಕ್ಕೆ ಒಳಪಡಿಸುವ ಕಾರ್ಯದ ವೈಫಲ್ಯ ಸೋಂಕು ಹಬ್ಬುವಿಕೆಗೆ ಕಾರಣ ಎನ್ನುತ್ತಾರೆ ಆರೋಗ್ಯ ತಜ್ಞರು. ತಳ ಹಂತದಲ್ಲಿ ನಡೆಯುವ ಈ ಪ್ರಕ್ರಿಯೆಯನ್ನು ಪರಿಣಾಮಕಾರಿಯಾಗಿ ನಡೆಸಲು ನೆರವಿಗೆ ಬರುವುದು ಪ್ರಾಥಮಿಕ ಆರೋಗ್ಯ ಕೇಂದ್ರಗಳು (ಪಿಎಚ್‌ಸಿ).


ಆಡುಗೋಡಿಯಲ್ಲಿರುವ ಆರೋಗ್ಯ ಪ್ರಾಥಮಿಕ ಕೇಂದ್ರ. ಪ್ರಜಾವಾಣಿ ಚಿತ್ರ/ ಅನೂಪ್ ರಾಘ.ಟಿ.

ಈ ಮಹಾನಗರದಲ್ಲಿ ವಾರ್ಡ್‌ಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವೂ ಇಲ್ಲ ಎಂಬುದು ಅರಗಿಸಿಕೊಳ್ಳಲು ಕಷ್ಟವಾದರೂ, ವಾಸ್ತವ. ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದ ಪ್ರಕಾರ ಪ್ರತಿ 50 ಸಾವಿರ ಜನಸಂಖ್ಯೆಗೆ ಒಂದರಂತೆ ಪ್ರಾಥಮಿಕ ಆರೋಗ್ಯ ಕೇಂದ್ರ ಇರಬೇಕು. 1.25 ಕೋಟಿಗೂ ಅಧಿಕ ಜನಸಂಖ್ಯೆಯನ್ನು ಹೊಂದಿರುವ ಬೆಂಗಳೂರಿಗೆ ಕನಿಷ್ಠ ಪಕ್ಷ 225 ಪ್ರಾಥಮಿಕ ಆರೋಗ್ಯ ಕೇಂದ್ರಗಳಾದರೂ ಇರಬೇಕಿತ್ತು. ಆದರೆ, ಇದರ ಅರ್ಧದಷ್ಟು ಪಿಎಚ್‌ಸಿಗಳು ಮಾತ್ರ ನಗರದಲ್ಲಿವೆ.

ಕಳೆದ ವರ್ಷ ಕೋವಿಡ್ ಹರಡುವಿಕೆ ವ್ಯಾಪಕವಾಗಿದ್ದಾಗ ನಗರದ ಆರೋಗ್ಯ ಮೂಲಸೌಕರ್ಯಗಳ ಬಗ್ಗೆ ಬಿಬಿಎಂಪಿ ಪರಾಮರ್ಶೆ ನಡೆಸಿತ್ತು. ಒಟ್ಟು 198 ವಾರ್ಡ್‌ಗಳಲ್ಲಿ ಬಿಬಿಎಂಪಿ ಅಧೀನದಲ್ಲಿ 133 ಪ್ರಾಥಮಿಕ ಆರೋಗ್ಯ ಕೇಂದ್ರಗಳು (ಪಿಎಚ್‌ಸಿ) ಮಾತ್ರ ಕಾರ್ಯನಿರ್ವಹಿಸುತ್ತಿದ್ದುದು ಹಾಗೂ 65 ವಾರ್ಡ್‌ಗಳಲ್ಲಿ ಪಿಎಚ್‌ಸಿಗಳೇ ಇಲ್ಲದಿದ್ದುದು ಗಮನಕ್ಕೆ ಬಂದಿತ್ತು. ಪಿಎಚ್‌ಸಿಗಳಿಲ್ಲದ ವಾರ್ಡ್‌ಗಳಲ್ಲಿ ಪಕ್ಕದ ವಾರ್ಡ್‌ಗಳ ಪಿಎಚ್‌ಸಿಗಳ ಸಿಬ್ಬಂದಿಯ ನೆರವಿನಿಂದ ಆರೋಗ್ಯ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕಾಗಿತ್ತು. ಈ ಕೊರತೆಯೇ ಕೋವಿಡ್ ನಿಯಂತ್ರಣದ ಮೇಲೂ ಪರಿಣಾಮ ಬೀರಿದೆ.

ಹೊರ ವಲಯದ ವಾರ್ಡ್‌ಗಳಲ್ಲಿ ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ (ಎನ್‌ಯುಎಚ್‌ಎಂ) ಅಡಿಯ 35 ಪಿಎಚ್‌ಸಿಗಳು, ಎನ್‌ಯುಎಚ್‌ಎಂ ವ್ಯಾಪ್ತಿಗೆ ಬಾರದ 14 ಪಿಎಚ್‌ಸಿಗಳು ಹಾಗೂ ಎರಡು ಸಮುದಾಯ ಆರೋಗ್ಯ ಕೇಂದ್ರಗಳು ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿದ್ದವು. ಅವುಗಳ ಸಿಬ್ಬಂದಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿದ್ದರು. ಈ ಆರೋಗ್ಯ ಕೇಂದ್ರಗಳನ್ನು ಹಾಗೂ ಅವುಗಳ ಸಿಬ್ಬಂದಿಯನ್ನೂ ಬಿಬಿಎಂಪಿ ತೆಕ್ಕೆಗೆ ಸೇರಿಸಿಕೊಳ್ಳಲಾಗಿದೆ. ಹಾಗಾಗಿ ಪ್ರಸ್ತುತ ನಗರದಲ್ಲಿ 141 ಪಿಎಚ್‌ಸಿಗಳು ಬಿಬಿಎಂಪಿ ಅಧೀನದಲ್ಲಿವೆ. 57 ವಾರ್ಡ್‌ಗಳಲ್ಲಿ ಈಗಲೂ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಲ್ಲ. ಹಾಗಾಗಿಯೇ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಹಾಗೂ ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಪಿಎಚ್‌ಸಿಗಳಿಗೆ ಬಂದ ಜನ ಗುಂಪುಗೂಡುತ್ತಿರುವ ದೃಶ್ಯಗಳು ನಗರದಲ್ಲಿ ಮಾಮೂಲಿ ಎಂಬಂತಾಗಿವೆ.

ಪ್ರಾಥಮಿಕ ಆರೋಗ್ಯ ಕೊರತೆ ನೀಗಿಸಲು ಈ 57 ವಾರ್ಡ್‌ಗಳಿಗೂ ಪಿಎಚ್‌ಸಿಗಳನ್ನು ಮಂಜೂರು ಮಾಡಬೇಕು ಎಂದು ಬಿಬಿಎಂಪಿ 2020ರ ಜು.29ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಪ್ರತಿ ಪಿಎಚ್‌ಸಿಯ ಸಿಬ್ಬಂದಿಯ ವೇತನ, ಕಟ್ಟಡದ ಬಾಡಿಗೆ, ಪೀಠೋಪಕರಣ, ಕಚೇರಿ ವೆಚ್ಚ, ಔಷಧಿ ಮತ್ತು ರಿ–ಏಜೆಂಟ್‌ಗಳಿಗಾಗಿ ವರ್ಷಕ್ಕೆ ತಲಾ ₹ 40.25 ಲಕ್ಷ ಬೇಕಾಗುತ್ತದೆ. 57 ಪಿಎಚ್‌ಸಿಗಳ ನಿರ್ವಹಣೆಗೆ ವರ್ಷಕ್ಕೆ ₹ 22.94 ಕೋಟಿ ಬೇಕಾಗುತ್ತದೆ, ಇಷ್ಟು ಅನುದಾನವನ್ನು ಬಜೆಟ್‌ನಲ್ಲಿ ಬಿಡುಗಡೆ ಮಾಡುವಂತೆ ಕೋರಿಕೆ ಸಲ್ಲಿಸಿತ್ತು. ಆದರೆ, ರಾಜ್ಯ ಸರ್ಕಾರ 2021–22ನ ಸಾಲಿನ ಬಜೆಟ್‌ನಲ್ಲಿ ಬಿಬಿಎಂಪಿಯ 57 ವಾರ್ಡ್‌ಗಳಲ್ಲಿ ಆರೋಗ್ಯ ಇಲಾಖೆ ಮೂಲಕ ಜನಾರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು ಕೇವಲ ₹ 10 ಕೋಟಿ ಅನುದಾನ ನಿಗದಿಪಡಿಸಿದೆ.

ಕೊರೊನಾ ನಿಯಂತ್ರಣ ಕೈಮೀರಿದೆ. ತಳ ಹಂತದ ಆರೋಗ್ಯ ಸೇವೆಗೆ ಅಗತ್ಯ ಮೂಲಸೌಕರ್ಯ ಒದಗಿಸಲು ಕ್ರಮ ಕೈಗೊಳ್ಳದಿದ್ದಲ್ಲಿ ಭವಿಷ್ಯದಲ್ಲೂ ಇಂತಹ ಸಾಂಕ್ರಾಮಿಕ ರೋಗಗಳು ಹರಡದಂತೆ ತಡೆಯುವುದು ಸವಾಲಾಗಿಯೇ ಉಳಿಯಲಿದೆ. ಹಾಗಾಗಿ ಆರೋಗ್ಯ ಮೂಲಸೌಕರ್ಯ ಬಲಪಡಿಸುವತ್ತ ಸರ್ಕಾರ ಹಾಗೂ ಬಿಬಿಎಂಪಿ ಸೇರಿ ಹೆಜ್ಜೆ ಇಡಬೇಕಿದೆ ಎನ್ನುತ್ತಾರೆ ಆರೋಗ್ಯ ತಜ್ಞರು.

‘ವಿಧಾನಸಭಾ ಕ್ಷೇತ್ರಕ್ಕೊಂದು ಸರ್ಕಾರಿ ಆಸ್ಪತ್ರೆ ಬೇಕು’

‘ನಗರದಲ್ಲಿ ಕೋವಿಡ್ ರೋಗಿಗಳ ಚಿಕಿತ್ಸೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವುದು ಖಾಸಗಿ ಆಸ್ಪತ್ರೆಗಳು. ಮೂರು–ನಾಲ್ಕು ದಶಕಗಳ ಹಿಂದಿನ ಪರಿಸ್ಥಿತಿಗೆ ಹೋಲಿಸಿದರೆ ಇತ್ತೀಚೆಗಂತೂ ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂಗಳ ಸಂಖ್ಯೆ ವಿಪರೀತ ಹೆಚ್ಚಳವಾಗಿದೆ. ಒಂದು ದಶಕದ ಈಚೆಗಂತೂ ಯಾವುದೇ ದೊಡ್ಡ ಪ್ರಮಾಣದ ಸರ್ಕಾರಿ ಆಸ್ಪತ್ರೆ ನಿರ್ಮಾಣವಾಗಿಲ್ಲ. ಈಗಲೂ ಬಡವರು ಅವಲಂಬಿಸಿರುವುದ ನೂರು ವರ್ಷಗಳ ಹಿಂದೆ ನಿರ್ಮಾಣವಾದ ವಿಕ್ಟೋರಿಯಾ, ಬೌರಿಂಗ್, ಲೇಡಿ ಕರ್ಜನ್ ಆಸ್ಪತ್ರೆಗಳನ್ನು. ಸದ್ಯದ ಪರಿಸ್ಥಿತಿಯಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಕನಿಷ್ಠ 100 ಹಾಸಿಗೆ ಸಾಮರ್ಥ್ಯದ ಒಂದು ಸರ್ಕಾರಿ ಆಸ್ಪತ್ರೆಯನ್ನು ನಿರ್ಮಿಸಬೇಕಾದ ಅಗತ್ಯ ತುಂಬಾ ಇದೆ’ ಎಂದು ಬಿಬಿಎಂಪಿಯ ಆರೋಗ್ಯ ವಿಭಾಗದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ನಗರದಲ್ಲಿರುವ ಪ್ರಮುಖ ಸರ್ಕಾರಿ ಆಸ್ಪತ್ರೆಗಳು

- ಜಯದೇವ ಹೃದ್ರೋಗ ಸಂಸ್ಥೆ, ಬನ್ನೇರುಘಟ್ಟ ರಸ್ತೆ
- ನಿಮ್ಹಾನ್ಸ್, ವಿಲ್ಸನ್‌ಗಾರ್ಡನ್
- ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಸಂಸ್ಥೆ, ಡೇರಿ ಬಳಿ
- ಸಂಜಯ ಗಾಂಧಿ ತುರ್ತು ಮತ್ತು ಮೂಳೆ ಆಸ್ಪತ್ರೆ, ಬೈರಸಂದ್ರ
- ನೆಫ್ರೋ ಯೂರಾಲಜಿ ಸಂಸ್ಥೆ, ವಿಕ್ಟೋರಿಯಾ ಆವರಣ
- ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ಶಿವಾಜಿನಗರ
- ವಿಕ್ಟೋರಿಯಾ ಆಸ್ಪತ್ರೆ, ಕೆ.ಆರ್.ಮಾರುಕಟ್ಟೆ ಬಳಿ
- ಜಯನಗರ ಜನರಲ್ ಆಸ್ಪತ್ರೆ, ತಿಲಕನಗರ
- ಕೆ.ಸಿ.ಜನರಲ್ ಆಸ್ಪತ್ರೆ, ಮಲ್ಲೇಶ್ವರ
- ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ
- ಮಿಂಟೊ ಕಣ್ಣಿನ ಆಸ್ಪತ್ರೆ, ಚಾಮರಾಜಪೇಟೆ
- ರಾಜೀವ ಗಾಂಧಿ ಎದೆರೋಗಗಳ ಆಸ್ಪತ್ರೆ, ಹೊಂಬೇಗೌಡ ನಗರ
- ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ತರಗುಪೇಟೆ
- ಸರ್ಕಾರಿ ದಂತ ವೈದ್ಯ ಕಾಲೇಜು ಆಸ್ಪತ್ರೆ, ವಿಕ್ಟೋರಿಯಾ ಆವರಣ
- ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು, ಧನ್ವಂತರಿ ರಸ್ತೆ

33 ಬಿಬಿಎಂಪಿ ನಡೆಸುತ್ತಿರುವ ರೆಫರಲ್ ಹಾಗೂ ಹೆರಿಗೆ ಆಸ್ಪತ್ರೆಗಳು

141 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು

ಪಿಎಚ್‌ಸಿ ನಿರ್ವಹಣೆಗೆ ತಗಲುವ ವಾರ್ಷಿಕ ವೆಚ್ಚ

(ಬಿಬಿಎಂಪಿ ಸರ್ಕಾರಕ್ಕೆ ಕಳುಹಿಸಿದ್ದ ಪ್ರಸ್ತಾವನೆ ಪ್ರಕಾರ)

ವಿಷಯ	ತಿಂಗಳ ವೆಚ್ಚ (₹ಗಳಲ್ಲಿ)	ಪ್ರತಿ ಕೇಂದ್ರಕ್ಕೆ ವಾರ್ಷಿಕ ವೆಚ್ಚ (₹ ಲಕ್ಷ)	57 ಕೇಂದ್ರಗಳಿಗೆ ವಾರ್ಷಿಕ ವೆಚ್ಚ (₹ ಕೋಟಿ)
ವೈದ್ಯಾಧಿಕಾರಿ	50ಸಾವಿರ	6	3.42
ಪ್ರಯೋಗಾಲಯ ತಂತ್ರಜ್ಞ	15,750	1.89	1.08
ಫಾರ್ಮಸಿಸ್ಟ್	15,750	1.89	1.08
ಸ್ಟಾಫ್ ನರ್ಸ್ (ಮೂವರು)	15,750	5.67	3.23
ಮಹಿಳಾ ಎಎನ್‌ಎಂ	15 ಸಾವಿರ	1.80	1.03
ಪುರುಷ ಎಎನ್‌ಎಂ	15 ಸಾವಿರ	1.80	1.03
ಕಂಪ್ಯೂಟರ್ ನಿರ್ವಾಹಕರು	15 ಸಾವಿರ	1.80	1.03
ಗ್ರೂಪ್ ಡಿ ಸಿಬ್ಬಂದಿ	10 ಸಾವಿರ	1.2	0.68
ಭದ್ರತಾ ಸಿಬ್ಬಂದಿ (ಇಬ್ಬರು)	20 ಸಾವಿರ	2.4	1.36
ಕಟ್ಟಡದ ಬಾಡಿಗೆಗೆ	50 ಸಾವಿರ	6	3.42
ಪೀಠೋಪಕರಣ	–	2	1.14
ಕಚೇರಿ ವೆಚ್ಚ	5 ಸಾವಿರ	0.6	0.34
ಔಷಧ ವೆಚ್ಚ	60 ಸಾವಿರ	7.2	4.10

‘ಪ್ರಾಥಮಿಕ ಹಂತದ ಆರೋಗ್ಯ ವ್ಯವಸ್ಥೆ ಬಲಪಡಿಸಿ’



ಸಾಂಕ್ರಾಮಿಕ ರೋಗಗ ಹತ್ತಿಕ್ಕಬೇಕಾದರೆ ಸೋಂಕು ಒಬ್ಬ ವ್ಯಕ್ತಿಯಿಂದ ಇನ್ನೊಬ್ಬ ವ್ಯಕ್ತಿಗೆ, ನಗರದಿಂದ ಇನ್ನೊಂದು ನಗರಕ್ಕೆ ಹರಡುವುದನ್ನು ತಡೆಯಬೇಕು. ಇದಕ್ಕೆ ಪ್ರಾಥಮಿಕ ಹಂತದ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸುವುದು ಬಲು ಮುಖ್ಯ. ಕೋವಿಡ್ ಪರೀಕ್ಷೆ, ಸೊಂಕಿತರ ಸಂಪರ್ಕ ಹೊಂದಿದವರ ಪತ್ತೆ ಮಾಡಿ ಅವರನ್ನು ಪ್ರತ್ಯೇಕಿಸುವ ಕಾರ್ಯ ಸಮರ್ಪಕವಾಗಿ ನಡೆಯಬೇಕು. ಜನರಲ್ಲಿ ಆರೋಗ್ಯ ಸುರಕ್ಷತಾ ಕ್ರಮಗಳ ಜಾಗೃತಿ ಮೂಡಿಸಬೇಕು. ತೈವಾನ್, ದಕ್ಷಿಣ ಕೊರಿಯಾದಂತಹ ದೇಶಗಳು ಇದನ್ನು ಚೆನ್ನಾಗಿ ನಿರ್ವಹಿಸಿವೆ.

ಲಾಕ್‌ಡೌನ್ ಜಾರಿಗೊಳಿಸಿದರೆ ಸಾಲದು, ರೋಗಿಯು ಚಿಕಿತ್ಸೆಗಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಪ್ರಯಾಣಿಸುವ ಅಗತ್ಯ ಬೀಳಬಾರದು. ರೋಗಿಗಳಿರುವ ಸ್ಥಳಕ್ಕೇ ವೈದ್ಯರನ್ನು ಕಳುಹಿಸುವ ಹಾಗೂ ವೈದ್ಯಕೀಯ ಸೌಲಭ್ಯ ತಲುಪಿಸುವ ಮೂಲಕ ಮೂಲಕ ಚೀನಾ ಸೋಂಕು ಹರಡುವಿಕೆಯನ್ನು ಪರಿಣಾಮಕಾರಿಯಾಗಿ ತಡೆಯಿತು.

ಸಾಂಕ್ರಾಮಿಕ ರೋಗಗಳು ಕಾಣಿಸಿಕೊಳ್ಳುತ್ತಿರುವುದು ಇದೇ ಮೊದಲಲ್ಲ. ಹಿಂದಿನ ಅನುಭವಗಳು ನಮ್ಮ ಮುಂದಿವೆ. ಈ ಬಗ್ಗೆ ಅಧ್ಯಯನಗಳು ನಡೆದಿವೆ. ಅವುಗಳ ಆಧಾರದಲ್ಲಿ ನಾವು ವ್ಯವಸ್ಥೆಯಲ್ಲಿ ಸುಧಾರಣೆ ತರಬೇಕಿದೆ. ವೈದ್ಯರ ಹಾಗೂ ಇತರ ವೈದ್ಯಕೀಯ ಸಿಬ್ಬಂದಿ, ಶುಷ್ರೂಷಕರ ಗುಣಮಟ್ಟದಲ್ಲೂ ಸುಧಾರಣೆ ಆಗಬೇಕು. ಸಾಂಕ್ರಮಿಕ ರೋಗಗಳಿಲ್ಲದ ಕಾಲದಲ್ಲೇ ಇದಕ್ಕೆ ಸಿದ್ಧತೆ ನಡೆಸಬೇಕು. ಪ್ರಾಥಮಿಕ ಆರೋಗ್ಯ ಸೇವೆ ಸರ್ಕಾರದ ಜವಾಬ್ದಾರಿ. ಇದಕ್ಕೆ ಸಾಕಷ್ಟು ಅನುದಾನವನ್ನು ಸರ್ಕಾರ ಒದಗಿಸಬೇಕು

ಡಾ.ಗುಣಶೇಖರ್ ವುಪ್ಪಲಪತಿ
ಜಿವಿಜಿ ಇನ್‌ವಿವೊ ಆಸ್ಪತ್ರೆ, ಜೆ.ಪಿ.ನಗರ

‘ಸಾಂಕ್ರಾಮಿಕ ನಿರ್ವಹಣೆಗೆ ಸನ್ನದ್ಧತೆ ಅಗತ್ಯ’



ಕೋವಿಡ್‌ನಂತಹ ಸಾಂಕ್ರಾಮಿಕ ರೋಗಗಳನ್ನು ನಿರ್ವಹಣೆ ಮಾಡುವುದಕ್ಕೆ ಸಾಕಷ್ಟು ಮುಂದಾಲೋಚನೆ ಹಾಗೂ ಸನ್ನದ್ಧತೆ ಅಗತ್ಯವಿದೆ. ಕೋವಿಡ್ ಮೊದಲ ಅಲೆಯಲ್ಲಿ ನಮ್ಮ ಆರೋಗ್ಯ ಮೂಲಸೌಕರ್ಯ ವ್ಯವಸ್ಥೆಯ ಲೋಪಗಳು ಬಹಿರಂಗವಾದವು. ಅದನ್ನು ಮೆಟ್ಟಿ ನಿಂತು ಮೂಲಸೌಕರ್ಯ ರೂಪಿಸುವಲ್ಲಿ ಸೋತಿದ್ದೇವೆ.

ಆಸ್ಪತ್ರೆಗಳಲ್ಲಿ ತೀವ್ರ ನಿಗಾ ಘಟಕ (ಐಸಿಯು) ಹಾಗೂ ಆಮ್ಲಜನಕ ಪೂರಣ ವ್ಯವಸ್ಥೆ ಹೊಂದುವುದಕ್ಕೆ ದುಬಾರಿ ವೆಚ್ಚವಾಗುತ್ತದೆ. ಅವುಗಳ ನಿರ್ವಹಣೆಯೂ ದುಬಾರಿ. ಐಸಿಯು ನಿರ್ವಹಣೆಗೆ ಪ್ರತ್ಯೇಕ ವೈದ್ಯರು ಹಾಗೂ ಶುಶ್ರೂಷಕಿಯರನ್ನು ನೇಮಿಸಿ ಕೊಳ್ಳಬೇಕಾಗುತ್ತದೆ. ಅವರಿಗೆ ವರ್ಷ ಪೂರ್ತಿ ವೇತನ ನೀಡಬೇಕಾಗುತ್ತದೆ. ರೋಗಿಗಳ ಸಂಖ್ಯೆ ಕಡಿಮೆ ಇರುವಾಗಿ ಖಾಸಗಿ ಆಸ್ಪತ್ರೆಗಳು ಅವುಗಳನ್ನು ನಿರ್ವಹಿಸುವುದು ಭಾರಿ ಕಷ್ಟ. ಅವುಗಳ ಪರಿಕರಗಳ ನಿರ್ವಹಣೆಯಲ್ಲಿ ವ್ಯತ್ಯಾಸವಾದರೆ ರೋಗಿಗೆ ದ್ವಿತೀಯ ಹಂತ ಸೋಂಕು ತಗಲುವ ಅಪಾಯವಿದೆ.

ಕೋವಿಡ್ ವ್ಯಾಪಿಸಿರುವುದರಿಂದ ಎದುರಾದ ಪರಿಸ್ಥಿತಿ ಎಲ್ಲ ಆಸ್ಪತ್ರೆಗಳು ಐಸಿಯು ಹೊಂದಬೇಕದ ಮಹತ್ವನ್ನು ತೋರಿಸಿಕೊಟ್ಟಿದೆ. ಆಸ್ಪತ್ರೆಗಳು ಕಡ್ಡಾಯವಾಗಿ ಐಸಿಯು ಹೊಂದುವ ಬಗ್ಗೆ ಸರ್ಕಾರ ಸೂಕ್ತ ನೀತಿ ರೂಪಿಸಬೇಕು.

ಡಾ.ಸೂರಿರಾಜು ವಿ. ರೀಗಲ್ ಆಸ್ಪತ್ರೆ ಥಣಿಸಂದ್ರ

ಮಹಾನಗರದ ಆರೋಗ್ಯ ವ್ಯವಸ್ಥೆ ಹೇಗಿರಬೇಕು?

- ಪ್ರತಿ 5 ಲಕ್ಷ ಜನಸಂಖ್ಯೆಗೆ:ನಗರ ಸಮುದಾಯ ಆರೋಗ್ಯ ಕೇಂದ್ರ/ ರೆಫರಲ್ ಆಸ್ಪತ್ರೆ
- ಪ್ರತಿ 50 ಸಾವಿರ ಜನಸಂಖ್ಯೆಗೆ:ನಗರ ಪ್ರಾಥಮಿಕ ಆರೋಗ್ಯ ಕೇಂದ್ರ
- ಪ್ರತಿ 10 ಸಾವಿರ ಜನಸಮಖ್ಯೆಗೆ: ಒಬ್ಬ ಆರೋಗ್ಯ ಸಹಾಯಕಿ
- 1ಸಾವಿರದಿಂದ 2500 ಜನಸಂಖ್ಯೆಗೆ: ಒಬ್ಬ ಆಶಾ ಕಾರ್ಯಕರ್ತೆ/ ಸಂಪರ್ಕ ಕಾರ್ಯಕರ್ತೆ
- 50ರಿಂದ 100 ಕುಟುಂಬಕ್ಕೆ:ಮಹಿಳಾ ಆರೋಗ್ಯ ಸಮಿತಿ

(ಮಾಹಿತಿ: ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದ ವರದಿ)

ತುರ್ತಾಗಿ ಆಗಬೇಕಾದುದೇನು?

‘ಆರೋಗ್ಯ ಸೇವೆ ಬಲಪಡಿಸಬೇಕಾದರೆ ಬಿಬಿಎಂಪಿ ವ್ಯಾಪ್ತಿಯಲ್ಲೂ ಪ್ರತಿ 50 ಸಾವಿರ ಜನಸಂಖ್ಯೆಗೆ ಒಂದು ಪಿಎಚ್‌ಸಿ ಹೊಂದಬೇಕಿದೆ. ಕೊವಿಡ್ ನಿರ್ವಹಣೆಗೆ ಸರ್ಕಾರ ಕಳೆದವಾರ ₹ 300 ಕೋಟಿ ಬಿಡುಗಡೆ ಮಾಡಿದೆ. 2021–22ನೇ ಸಾಲಿನ ಬಿಬಿಎಂಪಿ ಬಜೆಟ್‌ನಲ್ಲಿ ಸಾರ್ವಜನಿಕ ಆರೋಗ್ಯ ಮತ್ತು ಕ್ಲಿನಿಕಲ್ ವಿಭಾಗಕ್ಕೆ ₹ 337 ಕೋಟಿ ಮೀಸಲಿಡಲಾಗಿದೆ. ಕೋವಿಡ್ ಹರಡುವಿಕೆ ಈಗಾಗಲೇ ಕೈಮೀರಿರುವುದರಿಂದ ಈ ಅನುದಾನ ಸೋಂಕಿತರ ಚಿಕಿತ್ಸೆ ಹಾಗೂ ಸೋಂಕು ನಿಯಂತ್ರಣಕ ಕಾರ್ಯಕ್ಕೆ ಬೇಕಾಗಬಹುದು. ತದನಂತರವಾದರೂ ಬೇರೆ ಕಾಮಗಾರಿಗಳನ್ನು ಬದಿಗಿಟ್ಟು ಸಮರೋಪಾದಿಯಲ್ಲಿ ಆರೋಗ್ಯ ಮೂಲಸೌಕರ್ಯ ವರ್ಧನೆಗೆ ಬಿಬಿಎಂಪಿ ಹಾಗೂ ಸರ್ಕಾರ ಕ್ರಮ ಕೈಗೊಳ್ಳಬೇಕು’ ಎಂದು ಬಿಬಿಎಂಪಿಯ ಹಿರಿಯ ಅಧಿಕಾರಿ ಒಬ್ಬರು ಒತ್ತಾಯಿಸಿದರು.

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಮನೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ಮೇಲೆ ನಿಗಾ ಇಡುವುದೇ ಸವಾಲು

ಆರೈಕೆ ಕೇಂದ್ರಗಳಲ್ಲಿ ಆಕ್ಸಿಜನ್ ಹಾಸಿಗೆ ಕೊರತೆ

• ಗುರು ಪಿ.ಎಸ್.

ಬೆಂಗಳೂರು: ನಗರದಲ್ಲಿನ ಕೋವಿಡ್ ಆರೈಕೆ ಕೇಂದ್ರಗಳಲ್ಲಿಯೂ (ಸಿಸಿಸಿ) ಹೆಚ್ಚಿನ ಸಂಖ್ಯೆಯಲ್ಲಿ ಆಮ್ಲಜನಕ ಸಹಿತ ಹಾಸಿಗೆಗಳು ಇಲ್ಲದಿರುವುದು ರೋಗಿಗಳನ್ನು ಸಂಕಷ್ಟಕ್ಕೆ ಈಡು ಮಾಡಿದೆ.

ಸದ್ಯ 12 ಕೋವಿಡ್ ಆರೈಕೆ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಬಹುತೇಕರು ಹೋಂ ಐಸೊಲೇಷನ್ ಆಯ್ಕೆ ಮಾಡಿಕೊಳ್ಳುತ್ತಿರುವುದರಿಂದ ಈ ಕೇಂದ್ರಗಳಲ್ಲಿನ ಹಾಸಿಗೆಗಳು ಖಾಲಿ ಇವೆ. ಆಕ್ಸಿಜನ್ ಅಗತ್ಯವಿದ್ದವರು ಈ ಕೇಂದ್ರಗಳತ್ತ ಬರುತ್ತಿದ್ದಾರೆ. ಆದರೆ, ಎಲ್ಲರಿಗೂ ಈ ಸೌಲಭ್ಯವಿರುವ ಹಾಸಿಗೆಗಳನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ.

‘ಆರ್ಥಿಕವಾಗಿ ಸಬಲರಾಗಿರುವವರು ಖಾಸಗಿ ಆಸ್ಪತ್ರೆಗಳಲ್ಲಾದರೂ ದಾಖಲಾಗುತ್ತಾರೆ. ಮನೆಯಲ್ಲಿ ಪ್ರತ್ಯೇಕ ಕೋಣೆ ಇಲ್ಲದ ನಮ್ಮಂಥವರು ಆರೈಕೆ ಕೇಂದ್ರಗಳಿಗೆ ಬರಬೇಕಾಗುತ್ತದೆ’ ಎಂದು ರೋಗಿಯ ಸಂಬಂಧಿಕರೊಬ್ಬರು ಹೇಳಿದರು.

‘ಈ ಆರೈಕೆ ಕೇಂದ್ರಗಳಲ್ಲಿ ಆಕ್ಸಿಜನ್ ಸಹಿತ ಹಾಸಿಗೆಗಳನ್ನು ಅಳವಡಿಸಿದರೆ ಅನುಕೂಲ. ಉಸಿರಾಟದ ಸಮಸ್ಯೆ ಸಹಜ ಸ್ಥಿತಿಗೆ ಬಂದ ನಂತರ ಆಸ್ಪತ್ರೆಗೆ ದಾಖಲಾಗಬಹುದು. ಮೊದಲೇ ಆಕ್ಸಿಜನ್ ಸಿಗದಿದ್ದರೆ ಸಮಸ್ಯೆ ಬಿಗಡಾಯಿಸುವ ಅಪಾಯ ಇರುತ್ತದೆ’ ಎಂದು ಅವರು ಹೇಳಿದರು.

ಸಣ್ಣ ಕೇಂದ್ರಗಳ ಸ್ಥಾಪನೆ: ‘ನಗರದಲ್ಲಿ ಕೋವಿಡ್ ರೋಗಿಗಳ ಪೈಕಿ ಶೇ 90ರಿಂದ ಶೇ 92ರಷ್ಟು ಜನ ಹೋಂ ಐಸೊಲೇಶನ್ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಅವರ ನಿಗಾ ಇಡುವುದು ದೊಡ್ಡ ಸವಾಲು. ಹೀಗಾಗಿ, ನಗರದ ಅಲ್ಲಲ್ಲಿ ಇಂತಹ ಸಣ್ಣ ಸಿಸಿಸಿ ಅಥವಾ ವೈದ್ಯಕೀಯ ಕೇಂದ್ರಗಳನ್ನು ತೆರೆಯಲಾಗುತ್ತಿದೆ’ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಪಿ. ರಾಜೇಂದ್ರ ಚೋಳನ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಇಂತಹ ಕೇಂದ್ರಗಳಲ್ಲಿ ಆಕ್ಸಿಜನ್ ವ್ಯವಸ್ಥೆ ಕಲ್ಪಿಸಬೇಕಾಗಿದೆ. ಮುಖ್ಯ ಕಾರ್ಯದರ್ಶಿಯವರ ಸೂಚನೆಯಂತೆ ಪ್ರತಿ ಸಿಸಿಸಿಯಲ್ಲಿ ಶೇ 10ರಷ್ಟು ಆಮ್ಲಜನಕ ವ್ಯವಸ್ಥೆಯ ಹಾಸಿಗೆಗಳನ್ನು ಅಳವಡಿಸಲಾಗುತ್ತಿದೆ’ ಎಂದು ಹೇಳಿದರು.

‘ಉಸಿರಾಟ ಸಮಸ್ಯೆ ಇರುವವರು ತಕ್ಷಣಕ್ಕೆ ಈ ಕೇಂದ್ರಕ್ಕೆ ದಾಖಲಾಗಬಹುದು. ನಂತರ ಕೋವಿಡ್ ಆಸ್ಪತ್ರೆಗಳಲ್ಲಿ ಹಾಸಿಗೆ ಖಾಲಿಯಾದ ನಂತರ ಅಲ್ಲಿಗೆ ಸ್ಥಳಾಂತರಿಸಲಾಗುವುದು’ ಎಂದರು.

ಕೇಂದ್ರದಲ್ಲಿ ಏನೇನಿರುತ್ತದೆ ?: ಆಕ್ಸಿಮೀಟರ್, ಥರ್ಮಾಮೀಟರ್ ಸೇರಿದಂತೆ ರೋಗಿಗಳ ಆರೋಗ್ಯ ತಪಾಸಣೆಗೆ ಬೇಕಾದ ಎಲ್ಲ ಸೌಲಭ್ಯಗಳು ಇಲ್ಲಿರುತ್ತವೆ. ವೈದ್ಯರು ಮತ್ತು ಶುಶ್ರೂಷಕರನ್ನು ನಿಯೋಜಿಸಲಾಗಿರುತ್ತದೆ. ಆಕ್ಸಿಜನ್‌ಸಹಿತ ಹಾಸಿಗೆಗಳ ಸಂಖ್ಯೆಯನ್ನು ಕ್ರಮೇಣ ಹೆಚ್ಚಿಸಲಾಗುತ್ತಿದೆ.

‘ಸರ್ಕಾರಿ ಕಟ್ಟಡಗಳಲ್ಲಿ ಸಿಸಿಸಿ ತೆರೆದರೆ ಹೆಚ್ಚು ಖರ್ಚು ಬರುವುದಿಲ್ಲ. ಒಬ್ಬರಿಗೆ ಮೂರು ಹೊತ್ತು ಊಟಕ್ಕೆ ₹220, ವೈದ್ಯರು, ಶುಶ್ರೂಷಕರ ವೇತನ, ಸ್ವಚ್ಛತಾ ಕೆಲಸಗಾರರು ಮತ್ತು ವೈದ್ಯಕೀಯ ತ್ಯಾಜ್ಯ ವಿಲೇವಾರಿ ವೆಚ್ಚ ಬರುತ್ತದೆ. ಖಾಸಗಿ ಮಾಲೀಕತ್ವದ ಸ್ಥಳಗಳಲ್ಲಿ ತೆರೆದರೆ ಈ ವೆಚ್ಚದಲ್ಲಿ ಹೆಚ್ಚಳವಾಗುತ್ತದೆ’ ಎಂದು ಚೋಳನ್ ಮಾಹಿತಿ ನೀಡಿದರು.

ಪ್ರಜಾವಾಣಿ ವಿಶೇಷ

ನಗರದ ಕೋವಿಡ್ ಪ್ರಕರಣಗಳು

6,53,656 ಒಟ್ಟು ಸೋಂಕಿತರು

4,67,313 ಗುಣಮುಖರಾದವರು

1,80,542 ಸಕ್ರಿಯ ಪ್ರಕರಣ

5,800 ಸಾವು

ಭಾನುವಾರದ ಏರಿಕೆ

20,733 ದೃಢಪಟ್ಟ ಪ್ರಕರಣ

2,285 ಗುಣಮುಖ

77 ಸಾವು

‘ಹಜ್‌ಭವನದಲ್ಲಿ ಸಂಪೂರ್ಣ ಆಮ್ಲಜನಕ ವ್ಯವಸ್ಥೆ’

‘ನಗರದ ಸಿಸಿಸಿಗಳ ಪೈಕಿ ಹಜ್‌ಭವನದಲ್ಲಿರುವ ಆರೈಕೆ ಕೇಂದ್ರವನ್ನು ಸಂಪೂರ್ಣ ಆಮ್ಲಜನಕಸಹಿತ ಹಾಸಿಗೆಗಳ ಕೇಂದ್ರವನ್ನಾಗಿ ಪರಿವರ್ತಿಸಲಾಗುತ್ತಿದೆ. ಸೋಮವಾರದಿಂದಲೇ ಈ ಕಾರ್ಯ ಪ್ರಾರಂಭವಾಗುತ್ತಿದ್ದು, ಒಂದು ವಾರದಲ್ಲಿ ಸಿದ್ಧವಾಗಲಿದೆ’ ಎಂದು ಬಿಬಿಎಂಪಿ ಜಂಟಿ ಆಯುಕ್ತ ಸರ್ಫರಾಜ್ ಖಾನ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಇದು 400 ಹಾಸಿಗೆ ಸಾಮರ್ಥ್ಯ ಇರುವ ಕೇಂದ್ರ. ಪ್ರಾರಂಭದಲ್ಲಿ 120 ಹಾಸಿಗೆಗಳಿಗೆ ಆಮ್ಲಜನಕ ವ್ಯವಸ್ಥೆ ಅಳವಡಿಸಲಾಗುವುದು. ಕ್ರಮೇಣ ಇವುಗಳ ಸಂಖ್ಯೆ ಹೆಚ್ಚಿಸಿ, ಸಂಪೂರ್ಣ ಆಮ್ಲಜನಕಸಹಿತ ವ್ಯವಸ್ಥೆಯ ಕೇಂದ್ರವನ್ನಾಗಿ ಮಾಡಲಾಗುವುದು’ ಎಂದು ಅವರು ತಿಳಿಸಿದರು.

‘ಬಿಐಇಸಿ ಕೇಂದ್ರ ಮುಚ್ಚಿದ್ದು ಮೂರ್ಖತನ’

‘ಕಳೆದ ಬಾರಿ ಬೆಂಗಳೂರು ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರದ (ಬಿಐಇಸಿ) ಆವರಣದಲ್ಲಿ ನಿರ್ಮಿಸಲಾಗಿದ್ದ 10 ಸಾವಿರ ಹಾಸಿಗೆ ಸಾಮರ್ಥ್ಯದ ಆರೈಕೆ ಕೇಂದ್ರವನ್ನು ಮುಚ್ಚಿಸಿದ್ದು ಮೂರ್ಖತನದ ನಿರ್ಧಾರ’ ಎಂದು ಸಿಪಿಐ (ಎಂ) ಪಕ್ಷದ ಮುಖಂಡ ಕೆ.ಎನ್. ಉಮೇಶ್ ದೂರಿದರು.

₹11.09 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದ್ದ ಈ ಕೇಂದ್ರವನ್ನು ಐವತ್ತೇ ದಿನಗಳಲ್ಲಿ ಮುಚ್ಚಲಾಯಿತು. ಇದು ದೇಶದ ಅತಿದೊಡ್ಡ ಆರೈಕೆ ಕೇಂದ್ರ ಎಂದು ಸರ್ಕಾರ ಹೇಳಿಕೊಂಡಿತ್ತು. ಆದರೆ, ಇಲ್ಲಿ ಅಳವಡಿಸಿದ್ದು 6,500 ಹಾಸಿಗೆಗಳನ್ನು ಮಾತ್ರ.

‘ಈ ಕೇಂದ್ರಕ್ಕೆ ತಿಂಗಳಿಗೆ ₹3 ಕೋಟಿ ವೆಚ್ಚವಾಗುತ್ತದೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿದವು. ಆದರೆ, ಅಷ್ಟು ಖರ್ಚಾಗುತ್ತಿರಲಿಲ್ಲ. ಒಂದು ವೇಳೆ ತಿಂಗಳಿಗೆ ₹3 ಕೋಟಿಯೇ ವೆಚ್ಚವಾಗುತ್ತಿದ್ದರೂ ಮುಚ್ಚುವ ಅಗತ್ಯವಿರಲಿಲ್ಲ. ಮೂರು ತಿಂಗಳಿಗೆ ₹9 ಕೋಟಿ ಸರ್ಕಾರಕ್ಕೆ ಹೊರೆ ಏನು ಆಗುತ್ತಿರಲಿಲ್ಲ’ ಎಂದು ಅಧಿಕಾರಿಯೊಬ್ಬರು ಹೇಳಿದರು.

‘ಆ ಕೇಂದ್ರ ಇದ್ದಿದ್ದರೆ ಈಗ 2000 ದಿಂದ 3000 ಜನರಿಗೆ ಆಮ್ಲಜನಿಕ ಸಹಿತ ಹಾಸಿಗೆ ಒದಗಿಸಬಹುದಾಗಿತ್ತು. ಏಕಕಾಲಕ್ಕೆ 6 ಸಾವಿರ ಜನರಿಗೆ ಚಿಕಿತ್ಸೆ ನೀಡಬಹುದಿತ್ತು. ಬೇರೆ ಬೇರೆ ಕಡೆಗೆ ಕೇಂದ್ರಗಳನ್ನು ತೆರೆಯುವ ಬದಲು ಈ ಒಂದು ಕೇಂದ್ರದಲ್ಲಿಯೇ ಎಲ್ಲ ವ್ಯವಸ್ಥೆ ಮಾಡುವ ಅವಕಾಶವಿತ್ತು’ ಎಂದು ಅವರು ಹೇಳಿದರು.

ಕೇಂದ್ರದ ಉಕ್ಕಿನ ಮಂಚಗಳು, ಹಾಸಿಗೆಗಳು, ಫ್ಯಾನ್‌ಗಳು ಕಸದ ಬುಟ್ಟಿಗಳು, ಬಕೆಟ್‌ಗಳು, ಮಗ್‌ಗಳು, ನೀರು ಪೂರೈಸುವ ಪರಿಕರಗಳು ಹಾಗೂ ಇತರ ಪೀಠೋಪಕರಣಗಳನ್ನು ಸರ್ಕಾರಿ ಹಾಸ್ಟೆಲ್‌ಗಳಿಗೆ ಹಾಗೂ ಆಸ್ಪತ್ರೆಗಳಿಗೆ ನೀಡಲಾಯಿತು ಎಂದು ಸರ್ಕಾರ ಹೇಳಿದೆ. ಆದರೆ, ಇದರಲ್ಲಿ ಬಹುತೇಕ ಹಾಸಿಗೆಗಳನ್ನು ಖಾಸಗಿ ಆಸ್ಪತ್ರೆಗಳಿಗೆ ತೆಗೆದುಕೊಂಡು ಹೋಗಲಾಯಿತು ಎಂದು ಈ ಕೇಂದ್ರದಲ್ಲಿ ಕಾರ್ಯನಿರ್ವಹಿಸಿದ್ದ ಸಿಬ್ಬಂದಿಯೊಬ್ಬರು ಹೇಳಿದರು.

‘ಬಿಐಇಸಿಯಲ್ಲಿ ಮತ್ತೆ ಸಿಸಿಸಿ ಮಾಡುವ ಯೋಚನೆ ಸರ್ಕಾರದ ಮುಂದೆ ಇಲ್ಲ. ಈಗ ಆರೈಕೆ ಕೇಂದ್ರಗಳ ಅಗತ್ಯವೂ ಹೆಚ್ಚಾಗಿಲ್ಲ’ ಎಂದು ರಾಜೇಂದ್ರ ಚೋಳನ್ ಹೇಳಿದರು.

ನಗರದಲ್ಲಿರುವ ಸಿಸಿಸಿಗಳ ವಿವರ

ಕೇಂದ್ರದ ಹೆಸರು	ಹಾಸಿಗೆ ಸಾಮರ್ಥ್ಯ
ಆಡುಗೋಡಿ ಬಾಷ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್	80
ಕೋರಮಂಗಲ ಒಳಾಂಗಣ ಕ್ರೀಡಾಂಗಣ	100
ಸರ್ಕಾರಿ ಆಯುರ್ವೇದ ಮತ್ತು ವೈದ್ಯಕೀಯ ಕಾಲೇಜು	201
ಮಂಗಳ ರೈತ ಭವನ, ಹೆಬ್ಬಾಳ	60
ಸರ್ಕಾರಿ ಮೆಟ್ರಿಕ್‌ಪೂರ್ವ ಬಾಲಕಿಯರ ಹಾಸ್ಟೆಲ್	50
ಹಜ್ ಭವನ	400
ನವ್ಯಾ ಇಂಟರ್‌ನ್ಯಾಷನಲ್	112
ಎಚ್‌ಎಎಲ್	178
ಎನ್‌ಆರ್‌ಇಜಿಎಸ್ ಜ್ಞಾನಭಾರತಿ ಕ್ಯಾಂಪಸ್	370
ವಿಂಟೇಜ್ ಬ್ಲಾಸಮ್	50

ಎಲ್ಲರಿಗೂ ಉಚಿತವಾಗಿ ಲಸಿಕೆ ನೀಡಿ– ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹ

‘ಮೋದಿ ಮನೆ ಮುಂದೆ ಧರಣಿ ಕೂರಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲಸಿಕೆ ಪಡೆಯುವುದನ್ನು ಪ್ರೋತ್ಸಾಹಿಸಬೇಕಾದ ಕೇಂದ್ರ ಸರ್ಕಾರ, ಅದರ ಬೆಲೆ ಏರಿಸಿ ಜನತೆ ಅದನ್ನು ಪಡೆಯದಂತೆ ಮಾಡಲು ಹೊರಟಿದೆ. ಪ್ರಧಾನಿ ಅವರೇ, ‘ಟೀಕಾ ಉತ್ಸವ್’ನಂಥ ಬಾಯಿ ಬಡಾಯಿ ಬಿಟ್ಟಾಕಿ, ಮೊದಲು ಎಲ್ಲರಿಗೂ ಉಚಿತವಾಗಿ ಲಸಿಕೆ ನೀಡಿ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.


ಸಿದ್ದರಾಮಯ್ಯ

ಸರಣಿ ಟ್ವೀಟ್ ಮಾಡಿರುವ ಅವರು, ‘ಔಷಧಿ, ಆಮ್ಲಜನಕ, ವೆಂಟಿಲೇಟರ್ ಕೊಡಿ ಎಂದು ಪ್ರಧಾನಿಯನ್ನು ಬೇಡುತ್ತಿರುವುದು ಕಂಡಾಗ ಕನಿಕರ ಮೂಡುತ್ತಿದೆ. ಬಿಜೆಪಿಯ 25 ಸಂಸದರು ಎಲ್ಲಿ ಅಡಗಿ ಕುಳಿತಿದ್ದಾರೆ? ಅವರನ್ನು ದೆಹಲಿಗೆ ಅಟ್ಟಿ ರಾಜ್ಯದ ನ್ಯಾಯಬದ್ಧ ಪಾಲಿಗಾಗಿ ಪ್ರಧಾನಿ ಮನೆ ಮುಂದೆ ಧರಣಿ ಕುಳಿತುಕೊಳ್ಳುವಂತೆ ಮಾಡಿ’ ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಸಲಹೆ ನೀಡಿದ್ದಾರೆ.

‘ಅನ್ನಭಾಗ್ಯ ಯೋಜನೆ ಎಂದರೆ ಉರ್ಕೊಳ್ಳುತ್ತಿದ್ದ ಮತ್ತು ಆ ಯೋಜನೆಗೆ ಕಲ್ಲು ಹಾಕಲು ಪ್ರಯತ್ನಿಸುತ್ತಿರುವ ರಾಜ್ಯದ ಬಿಜೆಪಿ ನಾಯಕರು, ಈಗ ಪ್ರಧಾನಿ ಘೋಷಿಸಿರುವ ಎರಡು ತಿಂಗಳ ಕಾಲ ಐದು ಕಿಲೋ ಅಕ್ಕಿ ನೀಡುವ ಯೋಜನೆಯನ್ನು ಕೊಂಡಾಡುತ್ತಿರುವುದು ತಮಾಷೆಯಾಗಿದೆ’ ಎಂದೂ ವ್ಯಂಗ್ಯವಾಡಿದ್ದಾರೆ.

‘ಕೊರೊನಾದಿಂದ ತೀವ್ರ ಸಂಕಷ್ಟಕ್ಕೀಡಾಗಿರುವ ಜನರಿಗೆ ಪ್ರತಿ ತಿಂಗಳು ಉಚಿತವಾಗಿ ಹತ್ತು ಕಿಲೋ ಅಕ್ಕಿ ನೀಡಬೇಕೆಂದು ಆರಂಭದಿಂದಲೂ ಒತ್ತಾಯಿಸುತ್ತಾ ಬಂದಿದ್ದೇನೆ. ಪ್ರಧಾನಿ ಈಗಲಾದರೂ ಎಚ್ಚೆತ್ತುಕೊಳ್ಳಿ. ಕೊರೊನಾ ಕಷ್ಟ ಕೊನೆಯಾಗುವವರೆಗಾದರೂ ಹತ್ತು ಕಿಲೋ ಅಕ್ಕಿ ನೀಡಿ ಪುಣ್ಯ ಕಟ್ಕೊಳ್ಳಿ’.

‘ಅನ್ನಭಾಗ್ಯ ಯೋಜನೆಯನ್ನು ನಿಲ್ಲಿಸಲು ಶತಪ್ರಯತ್ನ ಮಾಡುತ್ತಿರುವ ರಾಜ್ಯ ಸರ್ಕಾರ ಹಲವು ಜಿಲ್ಲೆಗಳಲ್ಲಿ ತಿಂಗಳಿಗೆ ಐದು ಕಿಲೋ ಅಕ್ಕಿ ಬದಲಿಗೆ ಎರಡು ಕಿಲೋ ಅಕ್ಕಿ ನೀಡುತ್ತಿದೆ. ಈ ಅನ್ಯಾಯವನ್ನು ತಕ್ಷಣ ಸರಿಪಡಿಸಿ, ಬಡವರ ಶಾಪಕ್ಕೆ ಈಡಾಗಬೇಡಿ’ ಎಂದೂ ಕುಟುಕಿದ್ದಾರೆ.

ಕೇಂದ್ರದ ಉಚಿತ ಪಡಿತರ: ಸಂಕೇಶ್ವರ ಅಸಮಾಧಾನ

ಹುಬ್ಬಳ್ಳಿ: ‘ಕೇಂದ್ರ ಸರ್ಕಾರ ದೇಶದ ಜನತೆಗೆ ಉಚಿತ ಪಡಿತರ ವ್ಯವಸ್ಥೆ ಮಾಡಿರುವುದು ಸರಿಯಲ್ಲ. ಇದು ದೇಶಕ್ಕೆ ಗಂಡಾಂತರವಾಗಿದ್ದು, ಉತ್ಪಾದನೆ ಮೇಲೆ ಗಂಭೀರ ಪರಿಣಾಮ ಬೀರಲಿದೆ’ ಎಂದು ಉದ್ಯಮಿ ವಿಜಯ ಸಂಕೇಶ್ವರ ಅಸಮಾಧಾನ ವ್ಯಕ್ತಪಡಿಸಿದರು.

‘ಕೇಂದ್ರ ಸರ್ಕಾರ ಪದೇ ಪದೇ ತಪ್ಪು ಮಾಡುತ್ತಿದೆ. ಕೊರೊನಾ ಮೊದಲ ಅಲೆಯ ಲಾಕ್‌ಡೌನ್ ಸಂದರ್ಭ ಹಾಗೂ ನಂತರದ ಮೂರು ತಿಂಗಳು ಬಡವರಿಗೆ ಉಚಿತ ಪಡಿತರ ನೀಡಿತ್ತು. ಎರಡನೇ ಅಲೆ ಎದ್ದಿರುವ ಈ ಸಂದರ್ಭದಲ್ಲೂ ದೇಶದ 80 ಕೋಟಿ ಮಂದಿಗೆ ಉಚಿತ ಪಡಿತರ ನೀಡಲು ನಿರ್ಧರಿಸಿದೆ. ಇದರಿಂದ ಕಾರ್ಮಿಕರು ಕೆಲಸಕ್ಕೆ ಬರದೆ ಮನೆಯಲ್ಲೇ ಉಳಿಯುತ್ತಾರೆ. ಇದು ಕೈಗಾರಿಕಾ ಕ್ಷೇತ್ರದ ಮೇಲೆ ಗಂಭೀರ ಪರಿಣಾಮ ಉಂಟು ಮಾಡುತ್ತದೆ’ ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಜನರಿಗೆ ಮಾಡಲು ಸಾಕಷ್ಟು ಕೆಲಸಗಳಿವೆ. ಆದರೆ, ಉಚಿತ ಪಡಿತರ ವ್ಯವಸ್ಥೆಯಿಂದಾಗಿ ಅವರು ಕಾರ್ಯಕ್ಷೇತ್ರಗಳನ್ನು ಬಿಟ್ಟು ಮನೆಗಳಿಗೆ ತೆರಳುತ್ತಾರೆ. ಕೈಗಾರಿಕಾ ಕ್ಷೇತ್ರದಲ್ಲಿನ ಉತ್ಪಾದನೆಯಲ್ಲಿ ಕುಂಠಿತವಾಗುತ್ತದೆ. ನಮ್ಮಂತ ವಿಚಿತ್ರ ದೇಶದಲ್ಲಿ ಇಂತಹ ಸೌಲಭ್ಯ ನೀಡುವುದು ಸರಿಯಲ್ಲ’ ಎಂದರು.

ಶವ ಸಂಸ್ಕಾರಕ್ಕೆ 5 ಮಂದಿಗಷ್ಟೇ ಅವಕಾಶ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರವು ಜನರು ಗುಂಪು ಸೇರುವುದಕ್ಕೆ ಕೆಲ ನಿರ್ಬಂಧಗಳನ್ನು ವಿಧಿಸಿದೆ. ಅಂತ್ಯಕ್ರಿಯೆಯಲ್ಲಿ 5 ಮಂದಿಯಷ್ಟೇ ಭಾಗವಹಿಸಬೇಕೆಂದು ಆದೇಶಿಸಿದೆ.

‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಮುಖ್ಯ ಆಯುಕ್ತರು, ಪೊಲೀಸ್ ಆಯುಕ್ತರು, ವಿವಿಧ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ಇತರ ಇಲಾಖೆಯ ಮುಖ್ಯಸ್ಥರು ಮತ್ತು ಅಧಿಕಾರಿಗಳು ಇದನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕು’ ಎಂದು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎನ್.ಮಂಜುನಾಥ್ ಪ್ರಸಾದ್ ಸುತ್ತೋಲೆ ಹೊರಡಿಸಿದ್ದಾರೆ.

‘ಮದ್ಯ ಅತ್ಯಾವಶ್ಯಕ ವಸ್ತುವೇ?’

ಧಾರವಾಡ: ‘ಮದ್ಯ ಅತ್ಯಾವಶ್ಯಕ ವಸ್ತುವೇ, ಮದ್ಯ ಯಾವಾಗಿನಿಂದ ಅವಶ್ಯಕವಾಯಿತು’ ಎಂದು ಶಾಸಕ ಅರವಿಂದ ಬೆಲ್ಲದ ಪ್ರಶ್ನಿಸಿದ್ದಾರೆ.

ಭಾನುವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕರ್ಫ್ಯೂ ವೇಳೆಯಲ್ಲಿ ಮದ್ಯದ ಅಂಗಡಿಗಳಿಗೆ ಅವಕಾಶ ನೀಡಿದ ಸರ್ಕಾರ ಅಗತ್ಯ ವಸ್ತುಗಳ ಅಂಗಡಿ ತೆರೆಯಲಿ. ಮದ್ಯದ ಅಂಗಡಿ ತೆರೆಯೋದು ಎಷ್ಟು ಸರಿ? ಆಡಳಿತದ ಈ ನಿರ್ಧಾರಕ್ಕೆ ನನ್ನ ವಿರೋಧವಿದೆ. ಮುಖ್ಯಮಂತ್ರಿ ಯಡಿಯೂರಪ್ಪ ಅವರು ಈ ಬಗ್ಗೆ ಕ್ರಮ ಕೈಗೊಳ್ಳಲು ನಾನು ಒತ್ತಾಯಿಸುತ್ತೇನೆ’ ಎಂದರು.


ಸುದ್ದಿ 2 ನಿಮಿಷ

ಹಣಕ್ಕಾಗಿ ಸಾಯಬೇಡಿ, ನೊಂದವರ ಪೀಡಿಸಬೇಡಿ: ಜಗ್ಗೇಶ್ ಆಕ್ರೋಶ

ಬೆಂಗಳೂರು: ಕೋವಿಡ್‌ನಿಂದ ಮೃತಪಟ್ಟವರ ಕುಟುಂಬದವರಿಂದ ಆಸ್ಪತ್ರೆಯಲ್ಲಿ, ಆಂಬುಲೆನ್ಸ್, ಚಿತಾಗಾರದವರು ಹಣ ವಸೂಲಿ ಮಾಡುತ್ತಿರುವ ಹಲವು ಘಟನೆಗಳು ವರದಿಯಾಗುತ್ತಿರುವ ಬೆನ್ನಲ್ಲೇ ಈ ಕುರಿತು ನಟ ಜಗ್ಗೇಶ್ ಅವರು ಆಕ್ರೋಶ ಹೊರಹಾಕಿದ್ದಾರೆ.

‘ಕೋವಿಡ್ ಸಂತ್ರಸ್ತರು ನೊಂದು ಟಿ.ವಿಯಲ್ಲಿ ಮಾತಾಡಿದ್ದು ನೋಡಿ ಸಂಕಟವಾಯ್ತು. ನೊಂದವರಿಗೆ ಭುಜ ಕೊಟ್ಟು ಸಹಾಯಮಾಡಿ’ ಎಂದು ಟ್ವೀಟ್ ಮೂಲಕ ಜಗ್ಗೇಶ್ ಹೇಳಿದ್ದಾರೆ.

‘ಇಂತಹ ಸಂದರ್ಭದಲ್ಲೂ ಕೂಡ ನೊಂದವರಿಂದ ದುಡ್ಡನ್ನು ಪೀಕುತ್ತಿದ್ದಾರೆಂದರೆ ಇನ್ನೆಂತ ಕ್ರೂರಿಗಳು.! ಚೇ’ ಎಂದು ಉಲ್ಲೇಖಿಸಿ ಮೇಘರಾಜ್ ಎನ್ನುವವರು ಮಾಡಿರುವ ಟ್ವೀಟ್‌ಗೆ ಪ್ರತಿಕ್ರಿಯೆ ನೀಡಿರುವ ಜಗ್ಗೇಶ್, ‘ಈ ಕ್ರೂರ ವರ್ತನೆಯಿಂದ. ನನಗೆ ಅರಿಯದಂತೆ ಕೆಟ್ಟಬೈಗುಳ, ಕೋಪ ಅನಾವಶ್ಯಕವಾಗಿ ಬರುತ್ತಿದೆ. ತಪ್ಪು ಎಂದು ನನ್ನ ನಾನೆ ಸರಿಪಡಿಸಿಕೊಳ್ಳುತ್ತಿರುವೆ. ಇಂಥ ದಿನಗಳನ್ನು ಎಣಿಸಲಿಲ್ಲಾ ನಾನು, ಆಘಾತವಾಗಿದೆ’ ಎಂದಿದ್ದಾರೆ.



‘ನಾನು ಕಾಯವಾಚಮನ ದೇವರು ಮೆಚ್ಚುವಂತೆ ಐದು ಜನ ಕೋವಿಡ್ ಬಂದವರಿಗೆ ತನುಮನಧನ ಅರ್ಪಿಸಿ ಸೇವೆಮಾಡುತ್ತಿರುವೆ. ದಯಮಾಡಿ ನೀವು ನಿಮ್ಮವರಿಗೆ ಸಹಾಯ ಮಾಡಿ. ಆಗದಿದ್ದರೆ ಮೌನವಾಗಿ ಇದ್ದುಬಿಡಿ. ಟ್ವಿಟರ್‌ನಲ್ಲಿ ಸಂಬಂಧವಿಲ್ಲದ ಪ್ರಶ್ನೆ, ತೀಟೆ, ಅಣಕಕ್ಕೆ ಈ ಕೆಟ್ಟ ಪರಿಸ್ಥಿತಿ ಬಳಕೆ ಮಾಡಬೇಡಿ’ ಎಂದೂ ಜಗ್ಗೇಶ್ ಟ್ವೀಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಆಕ್ಸಿಜನ್ ಉತ್ಪಾದಿಸಲಿರುವ ವೈಟಿಪಿಎಸ್

ಶಕ್ತಿನಗರ (ರಾಯಚೂರು ಜಿಲ್ಲೆ): ರಾಜ್ಯ ಸರ್ಕಾರದ ಆದೇಶದ ಮೇರೆಗೆ ಇಲ್ಲಿನ ಯರಮರಸ್ ಶಾಖೋತ್ಪನ್ನ ವಿದ್ಯುತ್ ಸ್ಥಾವರವು (ವೈಟಿಪಿಎಸ್) ಆಕ್ಸಿಜನ್ ಉತ್ಪಾದನೆಗೆ ಮುಂದಾಗಿದೆ.

ಈ ಸ್ಥಾವರವು ಓಝೋನ್ ಜೆನರೇಷನ್ ಉತ್ಪಾದನಾ ತಂತ್ರಜ್ಞಾನ ಹೊಂದಿದೆ. ಆದ್ದರಿಂದ ಇಲ್ಲಿ ಆಕ್ಸಿಜನ್ ಸಂಗ್ರಹಿಸಲು ಅವಕಾಶ ಇದೆ.

‘ವೈಟಿಪಿಎಸ್‌ನಲ್ಲಿ 7 ಕ್ಯುಬಿಕ್ ಮೀಟರ್ ವ್ಯಾಸದ ಸಿಲಿಂಡರ್‌ನಲ್ಲಿ 7,000 ಲೀಟರ್ ಆಕ್ಸಿಜನ್ ಸಂಗ್ರಹಿಸಬಹುದು’ ಎಂದು ವೈಟಿಪಿಎಸ್ ಮುಖ್ಯ ಕಾರ್ಯನಿರ್ವಾಹಕ ನಿರ್ದೇಶಕ ಶಶಿಕಾಂತ ತಿಳಿಸಿದರು.

‘ಕರ್ನಾಟಕ ವಿದ್ಯುತ್ ನಿಗಮದ ಆಡಳಿತ ಮಂಡಳಿಯ ಬೆಂಗಳೂರಿನ ತಂಡ ವೈಟಿಪಿಎಸ್‌ಗೆ ಬಂದು ಆಕ್ಸಿಜನ್ ಸಂಗ್ರಹಕ್ಕೆ ಅಗತ್ಯ ವ್ಯವಸ್ಥೆ ಮಾಡಿಕೊಟ್ಟರೆ, ಇಲ್ಲಿಂದಲೂ ಆಕ್ಸಿಜನ್ ಪೂರೈಸಬಹುದು’ ಎಂದರು.

ಮಾಸ್ಕ್ ಧರಿಸದ ವಧುವಿಗೆ ದಂಡ

ಕೊಣನೂರು: ಮದುವೆಯಲ್ಲಿ ಮಾಸ್ಕ್ ಧರಿಸದ ವಧುವಿಗೆ ತಹಶೀಲ್ದಾರ್ ದಂಡ ವಿಧಿಸಿದರು.

ರಾಮನಾಥಪುರದ ಸ್ವಾಗತ್ ಕನ್ವೆನ್ಷನ್ ಹಾಲ್‌ನಲ್ಲಿ ಭಾನುವಾರ ನಡೆಯುತ್ತಿದ್ದ ಮದುವೆ ಕಾರ್ಯಕ್ರಮಕ್ಕೆ ತಹಶೀಲ್ದಾರ್ ವೈ.ಎಂ. ರೇಣುಕುಮಾರ್ ಭೇಟಿ ನೀಡಿದರು. ವಧು ಮಾಸ್ಕ್ ಧರಿಸದಿದ್ದುದನ್ನು ಕಂಡು, ದಂಡ ವಿಧಿಸಿ ಮಾಸ್ಕ್ ಹಾಕಿಸಿ ರಶೀದಿ ನೀಡಿದರು.

ಪೋರ್ಟೇಬಲ್ ಆಕ್ಸಿಜನ್ ಪೂರೈಕೆ: ಸುಧಾಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ರೋಗಿಗಳಿಗೆ ಬೆಂಗಳೂರಿನಲ್ಲಿ 5 ಸಾವಿರ, ಇತರ ಜಿಲ್ಲೆಗಳಿಗೆ ತಲಾ ಒಂದು ಸಾವಿರದಂತೆ ‘ಪೋರ್ಟೇಬಲ್ ಆಕ್ಸಿಜನ್’ ನೀಡಲಾಗುವುದು’ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿ ಕೋವಿಡ್ ರೋಗಿಗಳಿಗಾಗಿ ನಿರ್ಮಿಸಲಾಗುವ ಮೇಕ್ ಶಿಫ್ಟ್ ಆಸ್ಪತ್ರೆಗೆ ಸ್ಥಳ ಪರಿಶೀಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಆಕ್ಸಿಜನ್ ಬೇಕಾದವರು ಮಾತ್ರ ಈ ಸೌಲಭ್ಯ ಬಳಸಿಕೊಳ್ಳಬಹುದು’ ಎಂದರು.

‘ವಿಕ್ಟೋರಿಯಾ ಆವರಣದಲ್ಲಿ ಒಂದು ಕಟ್ಟಡದಲ್ಲಿ 85 ಹಾಸಿಗೆ, ಪಿಎಂಎಸ್‌ಎಸ್‌ವೈನಲ್ಲಿ 180 ಹಾಸಿಗೆಯನ್ನು ಸಂಪೂರ್ಣ ಕೋವಿಡ್‌ಗೆ ಮೀಸಲಿಡಲಾಗುವುದು. ಜೊತೆಗೆ 100ರಿಂದ 150 ಐಸಿಯು ಹಾಸಿಗೆ ಇರುವ ಆಸ್ಪತ್ರೆ ನಿರ್ಮಿಸಲಾಗುವುದು’ ಎಂದರು.



‘ಬೆಂಗಳೂರಿನಲ್ಲಿ ಎರಡರಿಂದ ಎರಡೂವರೆ ಸಾವಿರ ಮೇಕ್ ಶಿಫ್ಟ್ ಆಸ್ಪತ್ರೆ ನಿರ್ಮಿಸಲಾಗುವುದು. ಒಂದು ಘಟಕವು 200-250 ಹಾಸಿಗೆಗಳನ್ನು ಹೊಂದಿರುತ್ತದೆ. ಆಸ್ಪತ್ರೆಗಳ ಆವರಣದಲ್ಲೇ ಇದನ್ನು ಅಭಿವೃದ್ಧಿಪಡಿಸಲಾಗುವುದು’ ಎಂದೂ ತಿಳಿಸಿದರು.

ಪೊಲೀಸ್ ವಾಹನದ ಮೇಲೆ ಕಲ್ಲು ತೂರಾಟ

ಚಿತ್ರದುರ್ಗ: ತಾಲ್ಲೂಕಿನ ಬ್ಯಾಲಹಾಳು ಗ್ರಾಮದ ಮದುವೆ ಮನೆಯಲ್ಲಿ ಸೇರಿದ್ದ ಅಪಾರ ಜನರಿಗೆ ಬುದ್ಧಿಹೇಳಲು ಹೋಗಿದ್ದ ಪೊಲೀಸರ ವಾಹನದ ಮೇಲೆ ಕಲ್ಲುತೂರಾಟ ನಡೆಸಲಾಗಿದೆ. ಕರ್ಫ್ಯೂ ನಿಯಮ ಉಲ್ಲಂಘಿಸಿದ ಹಾಗೂ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದ ಮೇರೆಗೆ ವರನ ಸಹೋದರ ಸೇರಿ ಹತ್ತು ಜನರನ್ನು ಪೊಲೀಸರು ಬಂಧಿಸಿದ್ದಾರೆ.

ಅನುಮತಿ ಪಡೆಯದೇ ನಡೆಯುತ್ತಿದ್ದ ಮದುವೆ ಮನೆ ಪತ್ತೆಹಚ್ಚಿ ಮಾರ್ಗಸೂಚಿ ಉಲ್ಲಂಘಿಸಿದವರ ವಿರುದ್ಧ ಕ್ರಮಕ್ಕೆ ಮುಂದಾದಾಗ ಈ ಘಟನೆ ನಡೆದಿದೆ. ಬಂಧಿತರನ್ನು ಭಾನುವಾರ ಸಂಜೆ ಜೈಲಿಗೆ ಕಳುಹಿಸಲಾಗಿದೆ.

ಸರ್ಕಾರಿ ಗೌರವದೊಂದಿಗೆ ನಡೆದ ಶಾಂತನಗೌಡರ ಅಂತ್ಯಕ್ರಿಯೆ

ಬೆಂಗಳೂರು: ಗುರುಗ್ರಾಮದ ಮೇದಾಂತಾ ಆಸ್ಪತ್ರೆಯಲ್ಲಿ ಶನಿವಾರ ರಾತ್ರಿ ನಿಧನರಾದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಮೋಹನ ಶಾಂತನಗೌಡರ ಅವರ ಅಂತ್ಯಕ್ರಿಯೆಯನ್ನು ಬೆಂಗಳೂರಿನ ಚಾಮರಾಜಪೇಟೆಯ ಸ್ಮಶಾನದಲ್ಲಿ ಸರ್ಕಾರಿ ಗೌರವಗಳೊಂದಿಗೆ ಭಾನುವಾರ ನೆರವೇರಿಸಲಾಯಿತು.

ಶಾಂತನಗೌಡರ ಪಾರ್ಥಿವ ಶರೀರವನ್ನು ರಾಜಾಜಿನಗರದಲ್ಲಿರುವ ಸ್ವಗೃಹದಲ್ಲಿ ಅಂತಿಮ ದರ್ಶನಕ್ಕೆ ಇರಿಸಲಾಗಿತ್ತು. ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ, ಸಚಿವರಾದ ಬಸವರಾಜ ಬೊಮ್ಮಾಯಿ, ಬಿ.ಸಿ.ಪಾಟೀಲ, ವಿ.ಸೋಮಣ್ಣ ಸೇರಿದಂತೆ ಹಲವರು ಅಂತಿಮ ದರ್ಶನ ಪಡೆದು ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

1958ರ ಮೇ 5ರಂದು ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಚಿಕ್ಕೇರೂರು ಗ್ರಾಮದಲ್ಲಿ ಜನಿಸಿದ್ದ ಮೋಹನ ಶಾಂತನಗೌಡರ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಪಡೆದಿದ್ದರು. 1980ರಲ್ಲಿ ವಕೀಲ ವೃತ್ತಿ ಆರಂಭಿಸಿದ್ದರು.



2003ರಲ್ಲಿ ರಾಜ್ಯ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರಲ್ಲದೆ, 2004ರಲ್ಲಿ ನ್ಯಾಯಮೂರ್ತಿಯಾಗಿ ಸೇವೆ ಆರಂಭಿಸಿದ್ದರು. 2016ರಿಂದ ಒಂದು ವರ್ಷ ಕೇರಳ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದ್ದ ಅವರು, 2017ರಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು. 2023ರ ಮೇ 4ರವರೆಗೆ ಅವರ ಸೇವಾ ಅವಧಿ ಇತ್ತು.

ನಗರಸಭಾ ಸದಸ್ಯ ಬಂಧನ

ಹಿರಿಯೂರು: ನಗರದ ಪುಷ್ಪಾಂಜಲಿ ಚಿತ್ರಮಂದಿರ ಸಮೀಪದ ಕುವೆಂಪು ಬಡಾವಣೆಯ ಮನೆಯೊಂದಲ್ಲಿ ಶನಿವಾರ ಐಪಿಎಲ್ ಕ್ರಿಕೆಟ್ ಬೆಟ್ಟಿಂಗ್ ದಂಧೆಯಲ್ಲಿ ತೊಡಗಿದ್ದ ನಗರಸಭೆ ಸದಸ್ಯ ಜಗದೀಶ್ ಅವರನ್ನೂ ಸೇರಿ ನಾಲ್ಕು ಜನರನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತ ಜಗದೀಶ್ ಈಚೆಗೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ವಿಜೇತರಾಗಿದ್ದರು. ರವಿಕಿರಣ್, ಮಾರುತಿ, ರವಿ ಇತರೆ ಮೂವರು ಆರೋಪಿಗಳು. ಬಂಧಿತರಿಂದ ₹ 2.4 ಲಕ್ಷ ನಗದು ಹಾಗೂ 11 ಮೊಬೈಲ್‌ಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಡಿವೈಎಸ್‌ಪಿ ರೋಷನ್ ಜಮೀರ್ ಮಾರ್ಗದರ್ಶನದಲ್ಲಿ ಸಿಪಿಐ ರಾಘವೇಂದ್ರ, ನಗರ ಠಾಣೆ ಇನ್‌ಸ್ಪೆಕ್ಟರ್ ಶಿವಕುಮಾರ್, ಎಸ್‌ಐ ಅನುಸೂಯಮ್ಮ, ಕಾನ್‌ಸ್ಟೆಬಲ್‌ಗಳಾದ ಮಹಾಂತೇಶ್, ರಾಮಯ್ಯ, ಶಿವಮೂರ್ತಿ, ಮಹಮದ್ ಹನೀಫ್, ಹಡಗಲಿ, ತಿಮ್ಮರಾಯಪ್ಪ ಹಾಗೂ ವಸಂತಕುಮಾರ್ ದಾಳಿಯ ನೇತೃತ್ವ ವಹಿಸಿದ್ದರು.


ಹಿರಿಯೂರು ಪೊಲೀಸರ ಕಾರ್ಯಾಚರಣೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ. ರಾಧಿಕಾ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಶನಿವಾರ ರಾತ್ರಿ ಮುಂಬೈ ಇಂಡಿಯನ್ಸ್ ಹಾಗೂ ರಾಜಸ್ಥಾನ ರಾಯಲ್ಸ್ ತಂಡಗಳ ನಡುವೆ ಐಪಿಎಲ್ ಪಂದ್ಯ ನಡೆದಿತ್ತು.

ಸಂಗೀತ ಪೂಜೆ ನಿಂತಿದೆ; ನಾದನದಿ ಸ್ತಬ್ಧವಾಗಿದೆ!

● ಉಮಾ ಅನಂತ್

ನುಡಿ ನಮನ


ರಾಜನ್ ಮಿಶ್ರಾ

‘ಮ್ಯೂಸಿಕ್ ಈಸ್ ವರ್ಶಿಪ್ ಫಾರ್ ಅಸ್...’ ಸಹೋದರ ಪಂ. ಸಾಜನ್ ಮಿಶ್ರಾ ಅವರೊಂದಿಗೆ ಜುಗಲ್‌ಬಂದಿ ಕಛೇರಿ ಎಲ್ಲಿಯೇ ಯಾವ ಸಮಯದಲ್ಲೇ ನಡೆಯಲಿ, ಪಂ. ರಾಜನ್ ಮಿಶ್ರಾ ಕಛೇರಿ ಆರಂಭಿಸುತ್ತಿದ್ದುದೇ ಈ ವ್ಯಾಖ್ಯಾನದೊಂದಿಗೆ. ಹಿಂದೂಸ್ತಾನಿ ಸಂಗೀತದ ಬನಾರಸ್ ಘರಾಣೆಯಲ್ಲಿ ಹಾಡುತ್ತಿದ್ದ ವಿಶ್ವವಿಖ್ಯಾತ ಸಂಗೀತ ವಿದ್ವಾಂಸ ಪಂ. ರಾಜನ್ ಮಿಶ್ರಾ ಅವರಿಗೆ ಪ್ರತೀ ಕಛೇರಿಯೂ ಪೂಜೆಯೇ. ತಂಬೂರಿಯ ನಾದಕ್ಕೆ ತಮ್ಮ ಶಾರೀರವನ್ನು ಸೇರಿಸುತ್ತಿದ್ದುದು ಈ ಮಾತಿನ ಬಳಿಕವೇ.

ಅದು ರಾಗ ಬಿಹಾಗ್ ಆಗಿರಲಿ, ಬಿಲಾಸ್‌ಖಾನಿ ತೋಡಿಯೇ ಆಗಿರಲಿ ರಾಗ ವಿಸ್ತರಣೆ, ಮಂದ್ರದಿಂದ ಅತಿತಾರಕ ಸ್ಥಾಯಿಯವರೆಗೆ ಲೀಲಾಜಾಲವಾಗಿ ಸ್ವರಸಂಚಾರ ಮಾಡುತ್ತಿದ್ದ ರೀತಿ ಕೇಳುಗರಿಗೆ ಆಪ್ಯಾಯಮಾನವಾಗಿರುತ್ತಿತ್ತು. ಹೀಗಾಗಿ ಪಂ. ರಾಜನ್ ಮಿಶ್ರಾ ಸಹೋದರರ ಸಂಗೀತ ಕಛೇರಿ ಯಾವಾಗಲೂ ಸಂಗೀತರಸಿಕರಿಂದ ಕಿಕ್ಕಿರಿದು ತುಂಬಿರುತ್ತಿದ್ದುದು.

ವಾರಾಣಸಿಯಲ್ಲಿ, ತಾತ ಬಡೇ ರಾಮದಾಸ್ ಮಿಶ್ರಾ ಅವರಿಂದ ಸಂಗೀತದ ಆರಂಭಿಕ ಶಿಕ್ಷಣ ಪಡೆದರು. ತಂದೆ ಹನುಮಾನ್ ಪ್ರಸಾದ್ ಮಿಶ್ರಾ ಹಾಗೂ ಚಿಕ್ಕಪ್ಪ ಗೋಪಾಲ ಪ್ರಸಾದ್ ಮಿಶ್ರಾ ಅವರಿಂದ ಹೆಚ್ಚಿನ ಮಾರ್ಗದರ್ಶನ ಸಿಕ್ಕಿತು. ದೇಶದ ಉದ್ದಗಲಕ್ಕೂ ನಾದ ಪಯಣ ನಡೆಸಿದರು. 1977ರಲ್ಲಿ ದೆಹಲಿಗೆ ಹೋಗಿ ನೆಲೆಸಿದ ಸಹೋದರರು, ಹದಿಹರೆಯದಲ್ಲೇ ಹಲವಾರು ಕಛೇರಿ ನೀಡಿ ಪ್ರಸಿದ್ಧಿ ಪಡೆದವರು. 1978ರಲ್ಲಿ ಶ್ರೀಲಂಕಾದಲ್ಲಿ ಮೊದಲ ವಿದೇಶಿ ಕಛೇರಿ. ಅಲ್ಲಿಂದ ಮುಂದೆ ಜರ್ಮನಿ, ಫ್ರಾನ್ಸ್, ಸ್ವಿಟ್ಜರ್ಲೆಂಡ್, ಅಮೆರಿಕ, ಇಂಗ್ಲೆಂಡ್, ರಷ್ಯಾ, ನೆದರ್ಲೆಂಡ್.. ಹೀಗೆ ಸುಮಾರು 60 ದೇಶಗಳಲ್ಲಿ ಜುಗಲ್‌ಬಂದಿ ಕಛೇರಿಗಳನ್ನು ನಡೆಸಿದ ಶ್ರೇಯಸ್ಸು ಅವರದು.

ಸಂಗೀತದೊಂದಿಗೆ ವಿಶ್ವಪರ್ಯಟನೆ: ವಿಶ್ವಶಾಂತಿಗಾಗಿ 2014ರಲ್ಲಿ ವಿಶ್ವಮಟ್ಟದಲ್ಲಿ ಸಂಗೀತ ಯಾತ್ರೆ ನಡೆಸಿದ್ದು ಈ ಮೇರುಗಾಯಕರ ಸಾಧನೆಯ ಮತ್ತೊಂದು ಮೈಲಿಗಲ್ಲು. ‘ಭೈರವ್ ಸೆ ಭೈರವಿ ಥಕ್..’ ಶೀರ್ಷಿಕೆಯಲ್ಲಿ ನಡೆಸಿದ ಈ ಸಂಗೀತ ಯಾತ್ರೆ ತಮ್ಮ ಜನ್ಮಸ್ಥಳವಾದ ವಾರಾಣಸಿಯಿಂದ ಪ್ರಾರಂಭವಾಗಿ ಹಲವು ದೇಶಗಳಲ್ಲಿ ಸಂಚರಿಸಿತ್ತು.

‘ಸಂಗೀತವನ್ನು ವಿಶ್ವಮಟ್ಟದಲ್ಲಿ ಜನರೊಂದಿಗೆ ಬೆಸೆಯುವ ಪ್ರಯತ್ನ ಮಾಡುತ್ತಿದ್ದೇವೆ. ಎರಡು ಸುಮಧುರ ರಾಗಗಳ ನಡುವೆ ಬಂದು ಹೋಗುವ ಎಲ್ಲ ರಾಗಗಳನ್ನು ಹಾಡುವ ಮೂಲಕ ವಿಶ್ವಶಾಂತಿ ನೆಲೆಸುವಂತೆ ಮಾಡುವುದು ನಮ್ಮ ಉದ್ದೇಶ. ಇಂದಿನ ಪರಿಸ್ಥಿತಿಯಲ್ಲಿ ದೇಶ ವಿದೇಶದಾದ್ಯಂತ ನೆಲೆಸಿರುವ ಅಶಾಂತಿ, ಕೋಮು ಸಂಘರ್ಷ, ಮನುಷ್ಯ–ಮನುಷ್ಯರ ನಡುವಿನ ಬಾಂಧವ್ಯದ ಕೊರತೆ.. ಇವೆಲ್ಲವನ್ನು ದೂರ ಮಾಡಲು ಸಂಗೀತದಿಂದ ಖಂಡಿತ ಸಾಧ್ಯ ಎಂಬುದನ್ನು ನಾವು ಸಾಬೀತುಪಡಿಸುತ್ತಿದ್ದೇವೆ’ ಎಂದು ಆ ಸಂದರ್ಭದಲ್ಲಿ ಪಂ. ರಾಜನ್ ಮಿಶ್ರಾ ‘ಪ್ರಜಾವಾಣಿ’ಗೆ ನೀಡಿದ್ದ ಸಂದರ್ಶನದಲ್ಲಿ ಹೇಳಿಕೊಂಡಿದ್ದರು.

ಇದೇ ವರ್ಷ ನ್ಯೂಯಾರ್ಕ್‌ನಲ್ಲಿ ನಡೆದ ಅಹೋರಾತ್ರಿ ಸಂಗೀತೋತ್ಸವದಲ್ಲಿ ನಾಲ್ಕು ಗಂಟೆಗಳ ಕಾಲ ನಿರಂತರ ಸಂಗೀತ ಕಛೇರಿ ನೀಡಿದ್ದು ಕೂಡ ಸಂಗೀತಲೋಕದಲ್ಲಿ ದಾಖಲೆಯ ಭಾಷ್ಯ ಬರೆದಿತ್ತು.

ಚಿನ್ನಕ್ಕೆ ಒಡವೆಯ ಆಕಾರ ಕೊಡಬೇಕಾದರೆ ಬೆಂಕಿಯಲ್ಲಿ ಇಟ್ಟು ಕಾಯಿಸಿ ಕರಗಿಸಿ ನಾಜೂಕಾಗಿ ಮಾಡಬೇಕು. ಇದಕ್ಕೆ ಕಲೆಗಾರಿಕೆ, ಕೈಚಳಕ, ಕೌಶಲ್ಯದ ಅಗತ್ಯವಿದೆ. ಸಂಗೀತವೂ ಹಾಗೆ. ಸೃಜನಶೀಲತೆ, ಕಲಾತ್ಮಕತೆ, ಅಪಾರ ಪರಿಶ್ರಮ ವಹಿಸುವ ವಿದ್ಯೆ ಇದು ಎಂದು ಯಾವಾಗಲೂ ಹೇಳುತ್ತಿದ್ದರು.


ಆಕರ್ಷಕ ಗಾಯನಶೈಲಿ: ಕಛೇರಿಗಳಲ್ಲಿ ರಾಗದ ವಿಲಂಬಿತ್ ಹಂತದಿಂದ ಮೆಲ್ಲಮೆಲ್ಲನೆ ಸ್ವರಗಳನ್ನು ಏರಿಸುತ್ತಾ, ಜಾರಿಸುತ್ತಾ ವಾದಿ ಸಂವಾದಿ ಸ್ವರಗಳೊಂದಿಗೆ ಆಟವಾಡುತ್ತಾ ಧೃತ್‌ಗೆ ಬರುತ್ತಿದ್ದ ರೀತಿ ಅನನ್ಯ. ಆಕರ್ಷಕವಾದ ಸ್ವರಗಳು, ತಾನ್‌ಗಳು, ಆಕಾರ್‌ಗಳು ಮೊಳಮೊಳಗುತ್ತಾ ಸಾಗಿದಾಗ ವಿಶೇಷವಾದ ಸಂಚಲನ ಉಂಟು ಮಾಡುತ್ತಿತ್ತು. ಗಾಯನದ ಉತ್ತುಂಗಕ್ಕೇರಿದ ಬಳಿಕ ಹದವರಿತ ರಾಗದ ಛಾಯೆಯನ್ನು ಹಾಗೇ ಸುಂದರವಾದ ‘ತರಾನ’ದೊಂದಿಗೆ ಮಿಳಿತಗೊಳಿಸುತ್ತಿದ್ದ ಪರಿ ಅನನ್ಯ.

ಡೆಹ್ರಾಡೂನ್‌ನಲ್ಲಿ ಸಂಗೀತ ಗುರುಕುಲ ಸ್ಥಾಪಿಸಿದ್ದರು. ಬೆಂಗಳೂರಿನ ಹಿಂದೂಸ್ತಾನಿ ಗಾಯಕ ಹೆಗ್ಗಾರ ಅನಂತ ಹೆಗಡೆ ಸೇರಿದಂತೆ ಹಲವಾರು ಶಿಷ್ಯಂದಿರ ಅಚ್ಚುಮೆಚ್ಚಿನ ‘ಗುರೂಜಿ’ ಆಗಿದ್ದರು. ಸುಮಾರು 300 ವರ್ಷಗಳ ಸಂಗೀತ ಪರಂಪರೆಯ ಕೊಂಡಿಯಂತಿದ್ದ, ಹಲವು ಪ್ರತಿಷ್ಠಿತ ಪ್ರಶಸ್ತಿಗಳಿಗೆ ಭಾಜನರಾಗಿದ್ದ ಪಂ. ರಾಜನ್ ಮಿಶ್ರಾ ಇನ್ನು ನೆನಪು ಮಾತ್ರ.

ನಿಧನ ವಾರ್ತೆ

ಅರ್ಚಕ ಕೃಷ್ಣ ಭಟ್

ಹೊಸಪೇಟೆ (ವಿಜಯನಗರ): ನಾಲ್ಕು ದಶಕಗಳಿಂದ, ಹಂಪಿಯ ಪ್ರಸಿದ್ಧ ‘ಬಡವಿ ಲಿಂಗ’ದ ಅರ್ಚಕರಾಗಿದ್ದ ಕೃಷ್ಣ ಭಟ್ (87) ಅವರು ವಯೋಸಹಜ ಕಾಯಿಲೆಯಿಂದ ಭಾನುವಾರ ಅವರ ಮನೆಯಲ್ಲಿ ನಿಧನರಾದರು.



ಅವರಿಗೆ ಮೂವರು ಪುತ್ರರು, ಪುತ್ರಿ ಇದ್ದಾರೆ. ಭಾನುವಾರ ಮಧ್ಯಾಹ್ನ ಹಂಪಿಯಲ್ಲಿ ಅವರ ಅಂತ್ಯಸಂಸ್ಕಾರ ನೆರವೇರಿತು.

ಕೃಷ್ಣ ಭಟ್ ಅವರು ಮೂಲತಃ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಕಾಸರವಳ್ಳಿಯವರು. 1979ರಲ್ಲಿ ಹಂಪಿಗೆ ಬಂದು ನೆಲೆಸಿದ್ದರು. ಅಂದಿನಿಂದ ಸತತವಾಗಿ 2020ರ ನವೆಂಬರ್ ವರೆಗೆ ಒಂದು ದಿನವೂ ತಪ್ಪಿಸದೇ ‘ಬಡವಿಲಿಂಗ’ಕ್ಕೆ ಪೂಜೆ ನೆರವೇರಿಸಿದ್ದರು. ನಡೆಯಲಿಕ್ಕಾಗದೇ ಹಾಸಿಗೆ ಹಿಡಿದ ಕಾರಣ ಅವರ ಮಗ ರಾಘವ ಭಟ್ ಅವರು ಪೂಜೆ ಮುಂದುವರೆಸಿದ್ದಾರೆ.

ಸಾಹಿತಿ ಗೋಗೇರಿ

ಹುಬ್ಬಳ್ಳಿ: ಹಾಸ್ಯ ಕವಿ, ಹಾಸ್ಯ ಭಾಷಣಕಾರ ಎಂ.ಡಿ. ಗೋಗೇರಿ (79) ಭಾನುವಾರ ಇಲ್ಲಿನ ನವ ಅಯೋಧ್ಯಾನಗರದ ನಿವಾಸದಲ್ಲಿ ನಿಧನರಾದರು.

ಅವರಿಗೆ ಇಬ್ಬರು ಪುತ್ರರು ಇದ್ದಾರೆ.

ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಗೋಗೇರಿ ಗ್ರಾಮದವರಾದ ಅವರು, ಎಂಎ, ಬಿಇಡಿ ಶಿಕ್ಷಣದ ಬಳಿಕ 38 ವರ್ಷ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದರು. ಹತ್ತು ವರ್ಷಗಳಿಂದ ಹುಬ್ಬಳ್ಳಿಯಲ್ಲಿ ವಾಸಿಸುತ್ತಿದ್ದರು.

‘ಜೀವ ಜೇನು’, ‘ಇದೋ ಕರ್ನಾಟಕ’, ‘ತಾಯಿಯ ಉಡಿ’ಯಲ್ಲಿ ಸೇರಿದಂತೆ 10 ಕವನ ಸಂಕಲನಗಳು, ಐದು ಮಕ್ಕಳ ಸಾಹಿತ್ಯ ಪುಸ್ತಕ, ಒಂದು ನಾಟಕ, ಆರು ಲಲಿತ ಪ್ರಬಂಧ, ನಾಲ್ಕು ವ್ಯಕ್ತಿ ಚಿತ್ರಣ ಹೀಗೆ 30ಕ್ಕೂ ಹೆಚ್ಚು ವಿವಿಧ ಪ್ರಕಾರದ ಸಾಹಿತ್ಯ ರಚಿಸಿದ್ದರು. ‘ಸ್ವಂತ ಕವಿತಾ ಓದು’ ಸಿಡಿಗೆ ಬೆಂಗಳೂರಿನ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ‘ಸೌಹಾರ್ದ’ ಹೊತ್ತಿಗೆಯನ್ನು ಅಭಿಮಾನಿಗಳು ಅವರಿಗೆ ಅರ್ಪಿಸಿದ್ದಾರೆ. ‘ಹಳ್ಳಿಯಿಂದ ಹೂಬಳ್ಳಿಗೆ’ ಆತ್ಮಚರಿತ್ರೆ ಬರೆದಿದ್ದ ಅವರು, ಹಾಸ್ಯ, ವಿನೋದ, ವ್ಯಂಗ್ಯ, ವಿಡಂಬನೆಗಳ ಲೇಖನಗಳನ್ನೇ ಹೆಚ್ಚು ಬರೆಯುತ್ತಿದ್ದರು.



2013ರ ಹುಬ್ಬಳ್ಳಿ ತಾಲ್ಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಡಾ. ಡಿ.ಎಸ್. ಕರ್ಕಿ ಸಾಹಿತ್ಯ ವೇದಿಕೆಯ ಮಾರ್ಗದರ್ಶಕರಾಗಿದ್ದ ಅವರು ಜನಪದ ಸಂಗೀತಗಾರರು ಹಾಗೂ ಜಾಗೃತ ಭಾವೈಕ್ಯ ಒಕ್ಕೂಟದ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ರಾಜ್ಯೋತ್ಸವ ಪ್ರಶಸ್ತಿ, ಹರ್ಡೇಕರ ಮಂಜಪ್ಪ ಪ್ರಶಸ್ತಿ, ಧಾರವಾಡ ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಒಳನೋಟ

ಮಲಿನ ನೀರು ನದಿಗಳಿಗೆ

ಬೆಂಗಳೂರು:‘ನಗರ ತ್ಯಾಜ್ಯವೇ ನೀರಿಗೆ ಕಂಟಕ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಭಾನುವಾರ (ಏ.25) ಪ್ರಕಟವಾದ ‘ಒಳನೋಟ’ ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಜಲರಕ್ಷಣೆಯ ಅರಿವು ಮೂಡಬೇಕು


ಈ ಹಿಂದೆ ನದಿಗಳೆಂದರೆ ಪೂಜನೀಯ ಭಾವ. ನದಿಗಳು ಅಷ್ಟೇ ಪರಿಶುದ್ಧವಾಗಿದ್ದವು. ಆದರೆ, ಮಾನವ ಇಂದು ನದಿಗಳ ಮೇಲೆ ದಾಳಿ ಮುಂದುವರಿಸಿದ್ದಾನೆ. ನದಿ ಹರಿವುಗಳ ಸಮೀಪ ವಸತಿ ಸಮುಚ್ಚಯಗಳು ತಲೆ ಎತ್ತುತ್ತಿವೆ. ಜನರ ಚಟುವಟಿಕೆಗಳಿಂದ ಕೆರೆಗಳೆಲ್ಲ ಕಲುಷಿತಗೊಳ್ಳುತ್ತಿವೆ. ಮತ್ತೊಂದೆಡೆ ಕೈಗಾರಿಕೆಗಳ ತ್ಯಾಜ್ಯ ಸೇರ್ಪಡೆಯಾಗುತ್ತಿದೆ. ಜಲಮೂಲಗಳ ರಕ್ಷಣೆಗೆ ಜನರಲ್ಲಿ ಅರಿವು ಮೂಡಿಸಲು ಆಂದೋಲನವೇ ನಡೆಯಬೇಕು.



ಗೌರಿ, ಶಿವಮೊಗ್ಗ

‘ಜಲಮೂಲ ಕಸದ ಬುಟ್ಟಿಯಲ್ಲ’

ಸಾಮಾನ್ಯವಾಗಿ ನಗರ ಪ್ರದೇಶಗಳಲ್ಲಿನ ಕೆಲ ಮನೆಗಳಲ್ಲಿ ಈಗಲೂ ಹಳೆಯ ಬಾವಿಗಳನ್ನು ಕಾಣಬಹುದು. ಆದರೆ, ಬಾವಿಗಳಲ್ಲಿ ಶುದ್ಧ ನೀರಿನ ಬದಲಿಗೆ ತ್ಯಾಜ್ಯ ಸಂಗ್ರಹಗೊಂಡಿರುತ್ತವೆ. ನಗರ ನಿವಾಸಿಗಳಿಗೆ ಇದೊಂದು ಬೃಹತ್ ಕಸದ ಬುಟ್ಟಿ ಎಂದರೆ ತಪ್ಪಾಗದು. ನಗರೀಕರಣದಿಂದ ಜಲಮೂಲಗಳೆಲ್ಲ ಕಣ್ಮರೆಯಾಗುತ್ತಿವೆ. ಈಗಿರುವ ಜಲಮೂಲಗಳೆಲ್ಲ ತ್ಯಾಜ್ಯದಿಂದ ಕಲುಷಿತಗೊಂಡಿವೆ. ನಗರದ ತ್ಯಾಜ್ಯ ಜಲಮೂಲ ಸೇರದಂತೆ ಬಿಗಿ ಕ್ರಮಗಳನ್ನು ಕೈಗೊಳ್ಳಬೇಕಿದೆ. ತ್ಯಾಜ್ಯ ವಿಲೇವಾರಿಗೂ ವ್ಯವಸ್ಥೆ ಮಾಡಬೇಕು.



ರಾಜು ಶಂಕರಪ್ಪ, ಹಾವೇರಿ

ಕಸಮುಕ್ತವಾಗಲಿ ಜಲ

ನೀರಿಗೆ ಕಂಟಕವಾಗುತ್ತಿರುವ ನಗರ ತ್ಯಾಜ್ಯವು ನಗರದ ಹೊರವಲಯದ ಕೃಷಿಯ ಮೇಲೂ ಪರಿಣಾಮ ಬೀರುತ್ತಿದೆ. ಹೊರಭಾಗದ ಜಲಮೂಲಗಳಿಗೆ ನಗರ ಭಾಗದಿಂದ ಸಂಪರ್ಕ ಇರುತ್ತದೆ. ಇಲ್ಲಿನ ಕಲುಷಿತ ನೀರು ಅಲ್ಲಿನ ಬೆಳೆಗಳಿಗೆ ಸೇರಿ ಪರೋಕ್ಷವಾಗಿ ಜನರ ಹೊಟ್ಟೆ ಸೇರುತ್ತಿದೆ. ನಗರ ಸಭೆಗಳು ನಗರ ತ್ಯಾಜ್ಯವನ್ನು ಸೂಕ್ತ ವಿಲೇವಾರಿ ಮಾಡಲು ಕ್ರಮ ಕೈಗೊಂಡು ರಕ್ಷಿಸಬೇಕು.



ಸುರೇಶ್, ಗಂಗಾವತಿ

ಜಲ ಸೇರದಿರಲಿ ಕಸ

ಮಿತಿಮೀರಿದ ನಗರೀಕರಣದಿಂದ ಜನರ ಬದುಕು ಅಸ್ತವ್ಯಸ್ತವಾಗಿದೆ. ದಿನನಿತ್ಯ ಬಿಸಾಡುವ ಕಸ ಹಾಗೂ ಕೈಗಾರಿಕೆಗಳಿಂದ ಹೊರಬರುವ ತ್ಯಾಜ್ಯ ಪರಿಸರದ ಅಸಮತೋಲನಕ್ಕೆ ಕಾರಣವಾಗಿದೆ. ಸರ್ಕಾರ ತ್ಯಾಜ್ಯದ ಸಂಗ್ರಹಣೆ ಹಾಗೂ ನಿರ್ವಹಣೆಗೆ ಹೆಚ್ಚಿನ ಒತ್ತು ನೀಡಬೇಕು. ಕಸ ಚರಂಡಿಯ ಮೂಲಕ ಜಲಮೂಲಗಳನ್ನು ಸೇರದಂತೆ ತಡೆಯಬೇಕು.



ದಿವ್ಯಾ, ಚಿಕ್ಕಮಗಳೂರು

ತ್ಯಾಜ್ಯ ನೀರು ಸಂಸ್ಕರಿಸಿ


ಆಪತ್ತು ನಮ್ಮ ಮೇಲೆ ಎರಗುವ ಮೊದಲು ನಾವೇ ಎಚ್ಚೆತ್ತುಕೊಳ್ಳಬೇಕು. ನದಿ ಮಾರ್ಗಗಳಲ್ಲಿನ ವಸತಿ ಸಮುಚ್ಚಯಗಳು, ಕೈಗಾರಿಕೆಗಳು ಇತ್ಯಾದಿಗಳಿಂದ ಬರುವ ಮಲಿನ ನೀರನ್ನು ಸಂಸ್ಕರಿಸಿ, ಶುದ್ಧಗೊಳಿಸಿ ಬಳಿಕವೇ ನದಿಗಳಿಗೆ ಬಿಡಬೇಕು. ಇಲ್ಲವಾದರೆ, ನಮ್ಮ ಅಳಿವಿಗೆ ನಾವೇ ಕಾರಣವಾಗುತ್ತೇವೆ. ಪರಿಶುದ್ಧವಾದ ಅನೇಕ ನದಿಗಳು ಇಂದು ಕಲ್ಮಶಗೊಂಡು, ಅನೇಕ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಿದೆ.



ಪ್ರಕಾಶ್, ದಾವಣಗೆರೆ

ಹಲ್ಲಿಲ್ಲದ ಹಾವಾಗದಿರಿ

ಜಲಮೂಲಗಳು ಅಪಾಯದಲ್ಲಿರುವ ಕುರಿತು ಬೆಳಕು ಚೆಲ್ಲಿರುವ ‘ಪ್ರಜಾವಾಣಿ’ಗೆ ಧನ್ಯವಾದ. ಇಷ್ಟೆಲ್ಲ ಅವಾಂತರಗಳು ನಡೆದಿದ್ದರೂ ಮಾಲಿನ್ಯ ನಿಯಂತ್ರಣ ಮಂಡಳಿ ಯಾಕೆ ಕೈಕಟ್ಟಿ ಕುಳಿತಿದೆ? ಇದು ಕೇವಲ ನಗರಗಳ ಸಮಸ್ಯೆ ಮಾತ್ರ. ತಾಲ್ಲೂಕು ಮಟ್ಟದಲ್ಲೂ ಇಂತಹ ಸಮಸ್ಯೆ ತಾಂಡವವಾಡುತ್ತಿದೆ. ನಮ್ಮ ಚಟುವಟಿಕೆಗಳಿಂದ ಅಪಾಯವನ್ನು ನಾವೇ ಆಹ್ವಾನಿಸಿಕೊಳ್ಳುತ್ತಿದ್ದೇವೆ. ಜನ ಈಗಲಾದರೂ ಎಚ್ಚೆತ್ತುಕೊಳ್ಳಬೇಕು. ಮಾಲಿನ್ಯ ನಿಯಂತ್ರಣ ಮಂಡಳಿ ಹಲ್ಲಿಲ್ಲದ ಹಾವಿನಂತಿರಬಾರದು.



ಮಂಜುನಾಥ್, ಹೊಸಪೇಟೆ

ಕೋವಿಡ್: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆಯ ಸೇವೆ

ಅನಾಥ ಶವಗಳಿಗೆ ಮುಸ್ಲಿಂ ಯುವಕರ ಹೆಗಲು

● ಎಂ.ರಾಮಕೃಷ್ಣಪ್ಪ

ಚಿಂತಾಮಣಿ: ಕೋವಿಡ್‌ನಿಂದಾಗಿ ಗೌರವಯುತ ಅಂತ್ಯಸಂಸ್ಕಾರ ಕಾಣದ ಅನಾಥ ಶವಗಳಿಗೆ ಮುಸ್ಲಿಂ ಯುವಕರ ತಂಡವೊಂದು ಯಾವುದೇ ಬೇಧಭಾವ ಇಲ್ಲದೆ ಮುಕ್ತಿ ಕಲ್ಪಿಸುತ್ತಿದೆ.

ಕೊರೊನಾ ವಿಷಮ ಪರಿಸ್ಥಿತಿಯಲ್ಲಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆಯ ಸದಸ್ಯರು ಯಾವುದೇ ಜಾತಿ, ಮತ, ಧರ್ಮದ ಬೇಧ ಭಾವಗಳಿಲ್ಲದೆ ಅವರವರ ಧರ್ಮ, ಸಂಪ್ರದಾಯಕ್ಕೆ ಅನುಗುಣವಾಗಿ ಅಂತ್ಯಸಂಸ್ಕಾರ ಮಾಡುತ್ತಿದ್ದಾರೆ.

ಚಿಕ್ಕಬಳ್ಳಾಪುರದ ಕೋವಿಡ್ ಆಸ್ಪತ್ರೆಯಲ್ಲಿ ಭಾನುವಾರ ಮೃತಪಟ್ಟ ಚಿಂತಾಮಣಿ ತಾಲ್ಲೂಕಿನ ನಿಮ್ಮಕಾಯಲಹಳ್ಳಿ ಗ್ರಾಮದ 40 ವರ್ಷದ ಮಹಿಳೆ ಸೇರಿದಂತೆ ಕೋವಿಡ್‌ನಿಂದ ಮೃತಪಟ್ಟ 14 ಜನರಿಗೆ ಇದುವರೆಗೂ ಗೌರವಯುತವಾಗಿ ಅಂತಿಮ ವಿದಾಯ ಹೇಳಿದ್ದಾರೆ.

ಕೇವಲ ಅನಾಥ ಶವಗಳಿಗೆ ಮಾತ್ರ ಮುಕ್ತಿ ಕಾಣಿಸುವ ಕೆಲಸ ಮಾಡುತ್ತಿಲ್ಲ. ಕೋವಿಡ್‌ನಿಂದ ಯಾರೇ ಮೃತಪಟ್ಟರೂ ಅವರ ಧರ್ಮದ ವಿಧಿ, ವಿಧಾನ ಮತ್ತು ಸಂಪ್ರದಾಯದಂತೆ ಅಂತ್ಯಸಂಸ್ಕಾರ ನೆರವೇರಿಸುತ್ತಾರೆ.

ಜಿಲ್ಲೆಯ ಯಾವ ಭಾಗದಿಂದ ಕರೆ ಬಂದರೂ ಸ್ವಂತ ಖರ್ಚಿನಲ್ಲೇ ಹೋಗಿ ಅಂತ್ಯಸಂಸ್ಕಾರ ನೆರವೇರಿಸುತ್ತಾರೆ. ತಾವೇ ಗ್ಲೌಸ್, ಪಿಪಿಇ ಕಿಟ್, ಬ್ಲೀಚಿಂಗ್ ಮತ್ತು ಡಿಡಿಟಿ ಪೌಡರ್, ಸ್ಯಾನಿಟೈಸರ್ ತರುತ್ತಾರೆ. ಈ ಕೆಲಸಕ್ಕಾಗಿ ಯಾರಿಂದಲೂ ಚಿಕ್ಕಾಸನ್ನೂ ಪಡೆಯುವುದಿಲ್ಲ.

ಅನಾಥ ಶವಗಳನ್ನು ಕಂಡವರು ಅಥವಾ ಮೃತರ ಸಂಬಂಧಿಗಳು ಒಂದು ಕರೆ ಮಾಡಿದರೆ ಸಾಕು (ದೂರವಾಣಿ ಸಂಖ್ಯೆ 9986889172) ಅನ್ಸರ್ ಪಾಷಾ, ಮಶ್ಕೂರ್, ವಾಸೀಂ, ಮನ್ಸೂರ್, ಕಲೀಂ, ಏಜಾಜ್, ತೌಸಿಫ್, ಸಾಧಿಕ್, ಅಫ್ರೋಜ್, ಮೌಲಾ, ನಬಿ ಅವರ ತಂಡ ಸ್ಥಳದಲ್ಲಿ ಹಾಜರಿರುತ್ತದೆ.

ಮನಕರಗಿತು..

ಕೋವಿಡ್-19ನಿಂದ ಮೃತಪಟ್ಟ ಶವಗಳನ್ನು ಆಸ್ಪತ್ರೆಯವರು ತಂದು ಇಟ್ಟು ಹೋಗುವುದು, ಸಂಬಂಧಿಕರು ಶವಸಂಸ್ಕಾರ ಮಾಡಲಾಗದೆ ಪರಿತಪಿಸುವುದನ್ನು ಕಂಡು ಮನಕರಗಿತು. ಸ್ನೇಹಿತರೊಡನೆ ಚರ್ಚಿಸಿ ಅಂಥ ಶವಗಳ ಅಂತ್ಯಕ್ರಿಯೆ ನೆರವೇರಿಸುವ ತೀರ್ಮಾನ ಕೈಗೊಂಡೆವು. ಮಾನವೀಯತೆಯಿಂದ ಕೆಲಸ ಮಾಡುವುದಷ್ಟೇ ನಮ್ಮ ಕರ್ತವ್ಯ. ಉಳಿದಿದ್ದು ದೇವರಿಗೆ ಬಿಟ್ಟಿದ್ದು. ಪಿಎಫ್‌ಐ ಸಂಘಟನೆ ನಮ್ಮ ಈ ಕಾರ್ಯವನ್ನು ಬೆಂಬಲಿಸಿ, ಪ್ರೋತ್ಸಾಹ ನೀಡಿತು

ಅನ್ಸರ್ ಪಾಷಾ, ತಂಡದ ಸದಸ್ಯ


ಚಿಂತಾಮಣಿ ತಾಲ್ಲೂಕಿನ ನಿಮ್ಮಕಾಯಲಹಳ್ಳಿ ಗ್ರಾಮದಲ್ಲಿ ಭಾನುವಾರ ಕೊರೊನಾದಿಂದ ಮೃತಪಟ್ಟ ಮಹಿಳೆಯ ಅಂತ್ಯಸಂಸ್ಕಾರ ನೆರವೇರಿಸಿದ ಮುಸ್ಲಿಂ ಯುವಕರ ತಂಡ



ವಾರಾಂತ್ಯದ ಕರ್ಫ್ಯೂ ಹಿನ್ನೆಲೆಯಲ್ಲಿ ಬೆಂಗಳೂರಿನ ಶ್ರೀನಗರನಲ್ಲಿ ಪೊಲೀಸರು ವಾಹನ ತಪಾಸಣೆ ನಡೆಸುತ್ತಿರುವ ದೃಶ್ಯ ಭಾನುವಾರ ಕಂಡುಬಂತು.



ಶ್ರೀನಗರದ ಮಾಂಸದ ಅಂಗಡಿಯೊಂದರ ಬಳಿ ಜನರು ಮಾಂಸ ಖರೀದಿಸಲು ಸಾಲುಗಟ್ಟಿ ನಿಂತಿದ್ದರು. ಪ್ರಜಾವಾಣಿ ಚಿತ್ರಗಳು : ಅನೂಪ್ ರಾಘ.ಟಿ.

ಕರ್ಫ್ಯೂ: ಅಂಗಡಿ ಮಾಲೀಕರಿಗೆ, ಕೆಲಸಗಾರರಿಗೆ ಲಾಠಿ ಏಟು

ಭಾನುವಾರವೂ ಉತ್ತಮ ಸ್ಪಂದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕು ಹರಡುವಿಕೆ ತಡೆಗಾಗಿ ಜಾರಿಗೆ ತರಲಾಗಿದ್ದ ವಾರಾಂತ್ಯದ ಕರ್ಫ್ಯೂಗೆ ಭಾನುವಾರವೂ ನಗರದ ಜನರಿಂದ ಉತ್ತಮ ಸ್ಪಂದನೆ ವ್ಯಕ್ತವಾಯಿತು.

ಶುಕ್ರವಾರ ರಾತ್ರಿಯಿಂದಲೇ ಜಾರಿಯಾಗಿದ್ದ ಕರ್ಫ್ಯೂನಿಂದಾಗಿ ವಾಣಿಜ್ಯ ಚಟುವಟಿಕೆ ಬಂದ್ ಮಾಡಲಾಗಿತ್ತು. ನಗರದ ಅಂಗಡಿ, ಮಳಿಗೆ, ಹೋಟೆಲ್, ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳು ಬಾಗಿಲು ಮುಚ್ಚಿದ್ದವು. ನಗರದಲ್ಲಿ ಸಾರ್ವಜನಿಕರ ಓಡಾಟವನ್ನೂ ನಿರ್ಬಂಧಿಸಲಾಗಿತ್ತು. ಶನಿವಾರವೂ ಅದೇ ಸ್ಥಿತಿ ಇತ್ತು.

ಭಾನುವಾರ ಬೆಳಿಗ್ಗೆ 6 ಗಂಟೆಯಿಂದ 10 ಗಂಟೆಯವರೆಗೆ ಅಗತ್ಯ ವಸ್ತುಗಳ ಖರೀದಿಗೆ ಅವಕಾಶ ನೀಡಲಾಗಿತ್ತು. ವಾರಾಂತ್ಯದಲ್ಲಿ ಬಾಡೂಟ ಸವಿಯುತ್ತಿದ್ದ ಬಹುತೇಕರು, ಮಾಂಸದಂಗಡಿ ಎದುರು ಸಾಲುಗಟ್ಟಿ ನಿಂತಿದ್ದು ಕಂಡುಬಂತು. ತರಕಾರಿ ಹಾಗೂ ಹಾಲು ಮಾರಾಟ ಮಳಿಗೆ ಎದುರು ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರಿದ್ದರು.

ಶ್ರೀರಾಮಪುರ, ಯಶವಂತಪುರ, ಶಿವಾಜಿನಗರ ಸೇರಿದಂತೆ ಕೆಲ ಪ್ರದೇಶಗಳಲ್ಲಿ ಬೆಳಿಗ್ಗೆ 10 ಗಂಟೆ ನಂತರವೂ ಅಂಗಡಿಗಳನ್ನು ತೆರೆಯಲಾಗಿತ್ತು. ಅಂಥ ಸ್ಥಳಗಳಲ್ಲಿ ಗಸ್ತು ತಿರುಗಿದ ಪೊಲೀಸರು, ಮಾಲೀಕರಿಗೆ ಹಾಗೂ ಕೆಲಸಗಾರರಿಗೆ ಲಾಠಿ ರುಚಿ ತೋರಿಸಿ ಅಂಗಡಿ ಮುಚ್ಚಿಸಿದರು.

ಶಿವಾಜಿನಗರದಲ್ಲಿ ಕೋಳಿ ಮಾಂಸ ಮಾರಾಟ ಮಳಿಗೆಗಳು ತೆರೆದಿದ್ದವು. ಪೊಲೀಸರು ಸ್ಥಳಕ್ಕೆ ಹೋದಾಗ, 'ಮಾರಾಟಕ್ಕೆ ಸಿದ್ಧಪಡಿಸಿದ್ದ ಮಾಂಸ ಉಳಿದಿದೆ. ಗ್ರಾಹಕರು ಇರುವುದರಿಂದ ಕತ್ತರಿಸಿ ಕೊಡುತ್ತಿದ್ದೇವೆ' ಎಂದು ಮಳಿಗೆ ಮಾಲೀಕರು ಹೇಳಿದರು. 'ಬೆಳಿಗ್ಗೆ 10ಕ್ಕೆ ಮಳಿಗೆ ಮುಚ್ಚಬೇಕು' ಎಂದು ಪೊಲೀಸರು ತಾಕೀತು ಮಾಡಿ ಗ್ರಾಹಕರನ್ನು ವಾಪಸು ಕಳುಹಿಸಿ ಅಂಗಡಿ ಬಂದ್ ಮಾಡಿದರು.

ಯಶವಂತಪುರದ ಮೀನು ಮಾರುಕಟ್ಟೆಯಲ್ಲೂ ನಿಗದಿತ ಸಮಯದ ನಂತರವೂ ಜನರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಪೊಲೀಸರು ಲಾಠಿ ಬೀಸಿ ಜನರನ್ನು ಚದುರಿಸಿದರು.

ಪ್ರಮುಖ ರಸ್ತೆ ಹಾಗೂ ಮೇಲ್ಸೇತುವೆಗಳನ್ನು ಬಂದ್ ಮಾಡಲಾಗಿತ್ತು. ಬಸ್‌ಗಳ ಸಂಚಾರಕ್ಕೆ ಅವಕಾಶವಿದ್ದರೂ ಮೆಜೆಸ್ಟಿಕ್ ನಿಲ್ದಾಣಗಳಲ್ಲಿ ಬಸ್ ಹಾಗೂ ಪ್ರಯಾಣಿಕರ ಸಂಖ್ಯೆ ತೀರಾ ಕಡಿಮೆ ಇತ್ತು.

ತುಮಕೂರು ರಸ್ತೆ, ಮೈಸೂರು ರಸ್ತೆ, ಕನಕಪುರ ರಸ್ತೆ, ಹಳೇ ಮದ್ರಾಸ್ ರಸ್ತೆಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸಿ ವಾಹನಗಳ ತಪಾಸಣೆ ನಡೆಸಲಾಯಿತು. ಕಾರುಗಳ ಸಂಚಾರವೂ ಕಂಡುಬಂತು. ಅನಗತ್ಯವಾಗಿ ಸಂಚರಿಸುತ್ತಿದ್ದ ವಾಹನಗಳನ್ನು ಪೊಲೀಸರು ಜಪ್ತಿ ಮಾಡಿದರು. ವಾಹನ ಜಪ್ತಿ ವೇಳೆಯಲ್ಲೇ ಪೊಲೀಸರು ಹಾಗೂ ಚಾಲಕರ ನಡುವೆ ವಾಗ್ವಾದವೂ ನಡೆಯಿತು.

ಬೈಕ್ ಸವಾರರಿಗೆ ಲಾಠಿ ಏಟು; ಭಾನುವಾರ ಅನಗತ್ಯವಾಗಿ ರಸ್ತೆಯಲ್ಲಿ ಓಡಾಡುವವರ ಸಂಖ್ಯೆಯೂ ಹೆಚ್ಚಿತ್ತು. ಬೈಕ್‌ನಲ್ಲಿ ಬಂದಿದ್ದ ಸವಾರರನ್ನು ತಡೆದ ಪೊಲೀಸರು, ಲಾಠಿ ಏಟು ನೀಡಿದರು.

ಬೈಕ್‌ಗಳನ್ನು ಜಪ್ತಿ ಮಾಡಿ ಸವಾರರ ವಿರುದ್ಧ ಪ್ರಕರಣ ದಾಖಲಿಸಿಕೊಂಡರು. ಜಪ್ತಿ ಮಾಡಲಾದ ವಾಹನಗಳ ಸವಾರರು, ಠಾಣೆಗೆ ಹೋಗಿ ವಾಹನಗಳನ್ನು ಬಿಡಿಸಿಕೊಳ್ಳಲು ಯತ್ನಿಸಿದ್ದರು. ಅಂಥವರಿಗೆ ಪೊಲೀಸರು ನೋಟಿಸ್ ಕೊಟ್ಟು ಕಳುಹಿಸಿದರು.

ಬೈಕ್‌ನಲ್ಲಿ ಮಧುಮಗ; ಆಮಂತ್ರಣ ಪತ್ರಿಕೆ ಕೇಳಿದ ಪೊಲೀಸರು

ಕರ್ಫ್ಯೂ ಸಮಯದಲ್ಲೇ ಬೈಕ್‌ನಲ್ಲಿ ಮದುವೆಗೆ ಹೊರಟಿದ್ದ ಮಧುಮಗ, ಪೊಲೀಸರ ಕೈಗೆ ಸಿಕ್ಕಿಬಿದ್ದು ವಿಚಾರಣೆ ಎದುರಿಸಬೇಕಾಯಿತು.

ಮಾಗಡಿ ರಸ್ತೆಯಲ್ಲಿ ಚೆಕ್‌ಪೋಸ್ಟ್ ತೆರೆದು ಪೊಲೀಸರು ವಾಹನಗಳ ತಪಾಸಣೆ ಮಾಡುತ್ತಿದ್ದರು. ಮಧುಮಗ, ಸ್ನೇಹಿತನ ಜೊತೆ ಬೈಕ್‌ನಲ್ಲಿ ಸ್ಥಳಕ್ಕೆ ಬಂದಿದ್ದರು.

ಬೈಕ್ ತಡೆದಿದ್ದ ಪೊಲೀಸರು, 'ಕರ್ಫ್ಯೂ ಇದೆ. ಏಕೆ ಹೊರಗೆ ಬಂದಿದ್ದೀರಾ' ಎಂದು ಪ್ರಶ್ನಿಸಿದರು. ಮಧುಮಗ, 'ಸರ್. ದೇವಸ್ಥಾನದಲ್ಲಿ ನನ್ನ ಮದುವೆ ಇದೆ. ಅದಕ್ಕಾಗಿ ಹೊರಟಿರುವೆ. ದಯವಿಟ್ಟು ಬಿಟ್ಟುಬಿಡಿ, ಮುಹೂರ್ತಕ್ಕೆ ತಡವಾಗಿದೆ' ಎಂದರು.

ಅದಕ್ಕೆ ಒಪ್ಪದ ಪೊಲೀಸರು, 'ಸುಳ್ಳು ಹೇಳುತ್ತಿದ್ದಿಯಾ? ಎಲ್ಲಿ ಮದುವೆ ಆಮಂತ್ರಣ ಪತ್ರ ತೋರಿಸು' ಎಂದರು. ಮಧುಮಗ ಆಮಂತ್ರಣ ಪತ್ರಿಕೆ ತೋರಿಸಿದರು. ನಂತರವೇ ಪೊಲೀಸರು, ಮದುವೆ ಶುಭಾಶಯ ಹೇಳಿ ಅವರನ್ನು ಬಿಟ್ಟು ಕಳುಹಿಸಿದರು.

ಮಧುಮಗ, 'ಸಂಬಂಧಿಕರು, ಸ್ನೇಹಿತರ ಸಮ್ಮುಖದಲ್ಲಿ ಮದುವೆ ಆಗುವ ಆಸೆ ಇತ್ತು. ಆದರೆ, ಕೊರೊನಾ ಬಂದು ಸಂಭ್ರಮವನ್ನೇ ಕಿತ್ತುಕೊಂಡಿದೆ. ದೇವಸ್ಥಾನದಲ್ಲಿ ಸರಳವಾಗಿ ಮದುವೆ ಮಾಡಿಕೊಳ್ಳುತ್ತಿದ್ದೇವೆ. ಕಾರಿನಲ್ಲಿ ಹೋಗುವ ಬದಲು ಬೈಕ್‌ನಲ್ಲಿ ತೆರಳುತ್ತಿದ್ದೇನೆ' ಎಂದೂ ಹೇಳಿದರು.

24 ಗಂಟೆ; 34 ಸಾವಿರ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ದಿನೇ ದಿನೇ ಉಲ್ಬಣಿಸುತ್ತಿದ್ದು, ಭಾನುವಾರ ಒಂದೇ ದಿನ 34,804 ಮಂದಿಯಲ್ಲಿ ಸೋಂಕು ಪತ್ತೆಯಾಗಿದೆ. ಮೃತರ ಸಂಖ್ಯೆ 143ಕ್ಕೆ ಇಳಿದಿರುವುದು ಕೊಂಚ ಸಮಾಧಾನ ತರಿಸಿದೆ.

ರಾಜ್ಯದಲ್ಲಿ ಕೋವಿಡ್ ಕಾಣಿಸಿಕೊಂಡ ನಂತರ 24 ಗಂಟೆಗಳಲ್ಲಿ ವರದಿಯಾದ ಅತಿ ಗರಿಷ್ಠ ಪ್ರಕರಣ ಇದಾಗಿದೆ. ಕೋವಿಡ್ ಹೆಚ್ಚಳದ ಹಿನ್ನೆಲೆಯಲ್ಲಿ ಪರೀಕ್ಷೆಗಳ ಸಂಖ್ಯೆಯನ್ನೂ ಏರಿಸಲಾಗಿದೆ. ಭಾನುವಾರ 1.76 ಲಕ್ಷ ಮಂದಿಯ ಮಾದರಿಗಳನ್ನು ಪರೀಕ್ಷಿಸಲಾಗಿದ್ದು ಸೋಂಕು ದೃಢ ಪ್ರಮಾಣ ಶೇ 19.70ಕ್ಕೆ ಹೆಚ್ಚಿದೆ. ಮರಣ ಪ್ರಮಾಣ ದರ ಶೇ 0.41ಕ್ಕೆ ತಗ್ಗಿದೆ.

ಗದಗ ಮತ್ತು ಹಾವೇರಿ ಬಿಟ್ಟು ಉಳಿದ ಎಲ್ಲಾ ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣ ಮೂರಂಕಿ ಮುಟ್ಟಿದೆ. ಬೆಂಗಳೂರಿನಲ್ಲಿ ಒಂದೇ ದಿನ 20,733 ಜನರಿಗೆ ಸೋಂಕು ತಗುಲಿರುವುದು ಖಚಿತಪಟ್ಟಿದೆ. ಕೊಡಗು (1,077) ಹಾಗೂ ತುಮಕೂರಿನಲ್ಲಿ (1,153) ಸೋಂಕಿತರ ಸಂಖ್ಯೆ ಸಾವಿರದ ಗಡಿ ದಾಟಿದೆ. ಬಳ್ಳಾರಿ (732), ಬೆಂಗಳೂರು ಗ್ರಾಮಾಂತರ (864), ದಕ್ಷಿಣ ಕನ್ನಡ (564), ಧಾರವಾಡ (546), ಹಾಸನ (768), ಕಲಬುರ್ಗಿ (626), ಕೋಲಾರ (782), ಮಂಡ್ಯ (814), ಮೈಸೂರು (700), ರಾಯಚೂರು (643) ಜಿಲ್ಲೆಗಳಲ್ಲೂ ಅಧಿಕ ಪ್ರಕರಣಗಳು ವರದಿಯಾಗಿವೆ. ರಾಜ್ಯದಲ್ಲಿ ಈವರೆಗೆ ಸೋಂಕಿಗೊಳಗಾದವರ ಸಂಖ್ಯೆ 13.39 ಲಕ್ಷಕ್ಕೆ ಹೆಚ್ಚಿದೆ.

ಕೋವಿಡ್ ಪೀಡಿತರ ಪೈಕಿ ಬೆಂಗಳೂರಿನಲ್ಲಿ 77 ಜನ ಸತ್ತಿದ್ದಾರೆ. ಬಳ್ಳಾರಿಯಲ್ಲಿ (16) ಮೃತರ ಸಂಖ್ಯೆ ಏರಿದೆ. ಧಾರವಾಡದಲ್ಲಿ ಆರು, ಕಲಬುರ್ಗಿಯಲ್ಲಿ ಏಳು, ಮೈಸೂರಿನಲ್ಲಿ ಒಂಬತ್ತು, ತುಮಕೂರಿನಲ್ಲಿ ಆರು, ಹಾಸನದಲ್ಲಿ ನಾಲ್ಕು, ಮಂಡ್ಯದಲ್ಲಿ ಮೂರು, ಬೀದರ್, ಹಾವೇರಿ, ಕೋಲಾರ, ವಿಜಯಪುರದಲ್ಲಿ ತಲಾ ಇಬ್ಬರು, ಚಾಮರಾಜನಗರ, ಚಿತ್ರದುರ್ಗ, ದಕ್ಷಿಣ ಕನ್ನಡ, ದಾವಣಗೆರೆ, ರಾಯಚೂರು, ಶಿವಮೊಗ್ಗ ಹಾಗೂ ಉತ್ತರ ಕನ್ನಡದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಕೋವಿಡ್ ರಾಜ್ಯಕ್ಕೆ ಕಾಲಿಟ್ಟ ದಿನದಿಂದ ಇದುವರೆಗೆ ಸತ್ತವರ ಸಂಖ್ಯೆ 14,426ಕ್ಕೆ ಏರಿಕೆಯಾಗಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 2.62 ಲಕ್ಷಕ್ಕೆ ಹೆಚ್ಚಿದ್ದು, ಒಟ್ಟು 1,492 ಮಂದಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಕೋವಿಡ್ ಪೀಡಿತರ ಪೈಕಿ 6,982 ಮಂದಿ ಗುಣಮುಖರಾಗಿದ್ದಾರೆ. ಇದರೊಂದಿಗೆ ಗುಣಮುಖರ ಸಂಖ್ಯೆ 10.62 ಲಕ್ಷಕ್ಕೆ ಏರಿದೆ.

ಕೊರೊನಾ ಸ್ಪಂದನ

ನಿಮ್ಮ ನೋವಿಗೆ ನಮ್ಮ ಧ್ವನಿ

ಕೊರೊನಾ ಕಾಲದಲ್ಲಿ ನೀವು ಅನುಭವಿಸುತ್ತಿರುವ ಸಂಕಷ್ಟ, ನೋವುಗಳಿಗೆ ನಿಮ್ಮೆಲ್ಲರ 'ಪ್ರಜಾವಾಣಿ' ಧ್ವನಿಯಾಗಲಿದೆ.

ಕೋವಿಡ್ ಕಾಲದಲ್ಲಿ ನೀವು ಅಥವಾ ನಿಮ್ಮ ಸಂಬಂಧಿಗಳು, ಸ್ನೇಹಿತರು ಹಾಸಿಗೆ ಸಿಗದೇ, ಆಕ್ಸಿಜನ್ ಸಿಗದೇ ಪರದಾಡಿದ್ದರೆ, ಆಂಬುಲೆನ್ಸ್‌ಗಾಗಿ ಗೋಳಾಡಿದ್ದರೆ, ಆಸ್ಪತ್ರೆಗೆ ದಾಖಲಾಗಿಯೂ ಚಿಕಿತ್ಸೆ, ಊಟ–ನೀರು ಸಿಗದೇ ಇದ್ದರೆ ನೋವಿನ ಕಥನವನ್ನು ನಮಗೆ ಬರೆದು ಕಳುಹಿಸಿ. ನೀವು ಉಂಡ ನೋವನ್ನು ಕಂಡಾದರೂ ಸರ್ಕಾರ ಉಳಿದವರಿಗೆ ಸೂಕ್ತ ವ್ಯವಸ್ಥೆ ಮಾಡಬಹುದು. ಆಸ್ಪತ್ರೆಗಳು ತಮ್ಮ ಕಾಯಕವೇ ಆಗಿರುವ ಕರುಣೆ–ಅನುಕಂಪ, ಚಿಕಿತ್ಸಕ ಸೇವೆಯನ್ನು ಒದಗಿಸಬಹುದು ಎಂಬ ವಿಶ್ವಾಸ ನಮ್ಮದು.

ನೀವು ಮಾಡಬೇಕಾಗಿರುವುದು ಇಷ್ಟೇ

ನಿಮ್ಮ ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ನಿಮ್ಮದೊಂದು ಭಾವಚಿತ್ರವನ್ನು ಕಳುಹಿಸಿ. ನಿಮ್ಮ ಬರಹ ಸ್ಪಷ್ಟ, ನಿಖರವಾಗಿ ಇರಲಿ. ಗರಿಷ್ಠ ಮಿತಿ 150 ಪದಗಳು. ದುರುದ್ದೇಶ ಅಥವಾ ಕಲ್ಪಿತ–ಕೇಳಿಸಿಕೊಂಡ ಆರೋಪಗಳು ಬೇಡ. ನಿಮ್ಮದೇ ಸ್ವಂತ ಅನುಭವ ಆಗಿದ್ದರೆ ಮಾತ್ರ ಬರೆದು ಕಳಿಸಿ.

ವಾಟ್ಸ್ ಆ್ಯಪ್ ಸಂಖ್ಯೆ: 9606038256

ಕೋವಿಡ್ ಸಹಾಯವಾಣಿ

ವಲಯ	ವಾರ್ ರೂಂ ಸಂಖ್ಯೆ	ನೋಡಲ್ ಅಧಿಕಾರಿ	ಮೊಬೈಲ್ ಸಂಖ್ಯೆ
ಯಲಹಂಕ	9480685964	ರಶ್ಮಿ	9632819836
ಮಹದೇವಪುರ	08023010101	ಪ್ರಗ್ಯಾನ್	9502322032
ಬೊಮ್ಮನಹಳ್ಳಿ	8884666670	ಕುಮಾರಸ್ವಾಮಿ	7349552658
ಆರ್.ಆರ್.ನಗರ	08028601050	ಮುರಳಿ	9482224474
ದಕ್ಷಿಣ	8431816718	ರೆಹಾನ್	9535586578
ಪೂರ್ವ	7411038024	ಆಕಾಶ್	9886959900
ಪಶ್ಚಿಮ	080682448454	ಯೋಗೇಶ್	9448550159
ದಾಸರಹಳ್ಳಿ	08028394909	–	7204869787

ಉಚಿತ ಆಕ್ಸಿಜನ್ ಸಿಲಿಂಡರ್

ನಾಸಿಹ್ ಎಜುಕೇಷನ್ ಟ್ರಸ್ಟ್, ಫ್ರೇಜರ್ ಟೌನ್	08025483641
ಮರ್ಸಿ ಮಿಷನ್, ಬಸವನಗುಡಿ	8660856709
ಮರ್ಸಿ ಮಿಷನ್, ಮೈಸೂರು ರಸ್ತೆ	8660856709
ಆಕ್ಸಿ ಹೆಲ್ಪ್ ಕ್ರೈಸಿಸ್ ಮ್ಯಾನೇಜ್‌ಮೆಂಟ್ ಟೀಮ್, ಜೆ.ಸಿ.ನಗರ	9945500113

ಆಂಬುಲೆನ್ಸ್ ಉಚಿತ ಸೇವೆ

ರಾಜ್ಯ ಸರ್ಕಾರ	108
ಜಾಮಿಯತ್‌ಉಲ್ ಉಲೆಮಾ	9845708752, 08025483641

ಶವ ಸಾಗಣೆ ವಾಹನ

ಲೈನ್ 1	08022493202
ಲೈನ್ 2	08022493203
ವಾಟ್ಸ್‌ಆ್ಯಪ್	8792162736

ಮೃತದೇಹ ದಹನ

ಮುಹೀಬ್	7760319646, 9632618786
ಜಾಮಿಯತ್‌ಉಲ್ ಉಲೆಮಾ	9845007680, 9845120379, 08025483641

ಲಸಿಕೆಯಿಂದ ಕಂಪನಿಗಳಿಗೆ ₹ 1.11 ಲಕ್ಷ ಕೋಟಿ ಲಾಭ–ಕಾಂಗ್ರೆಸ್

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಹೊಸ ಕೋವಿಡ್ ಲಸಿಕೆ ನೀತಿಯು ಸಂವೇದನಾರಹಿತ ಮತ್ತು ತಾರತಮ್ಯದಿಂದ ಕೂಡಿದೆ ಎಂದು ಕಾಂಗ್ರೆಸ್ ಭಾನುವಾರ ಆರೋಪಿಸಿದೆ. ಲಸಿಕೆ ತಯಾರಕರಿಗೆ ₹1.11 ಲಕ್ಷ ಕೋಟಿ ಲಾಭ ಮಾಡಿಕೊಳ್ಳಲು ಸರ್ಕಾರ ಅನುವು ಮಾಡಿಕೊಟ್ಟಿದೆ ಎಂದೂ ಹೇಳಿದೆ.

ದೇಶದ ಬಡವರಿಗೆ ಮತ್ತು ಯುವಜನರಿಗೆ ಉಚಿತ ಲಸಿಕೆ ನೀಡಬೇಕಾದ ತನ್ನ ಜವಾಬ್ದಾರಿಯಿಂದ ಸರ್ಕಾರವು ದೂರ ಸರಿದಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲ ಟೀಕಿಸಿದ್ದಾರೆ.

ಲಸಿಕೆಯಿಂದ ಲಾಭ ಪಡೆಯುವಂತಹ ಲಜ್ಜೆಗೆಟ್ಟ ನಡೆಗೆ ಸರ್ಕಾರ ಹೇಗೆ ಅನುಮತಿ ನೀಡಿದೆ? ಸಾಂಕ್ರಾಮಿಕ ರೋಗ ವ್ಯಾಪಿಸುತ್ತಿರುವ ಇಂತಹ ಸಂದರ್ಭದಲ್ಲಿ ಲಾಭ ಪಡೆಯಲು ಲಸಿಕೆ ಕಂಪನಿಗಳಿಗೆ ಸರ್ಕಾರ ಯಾಕೆ ಸಹಕರಿಸುತ್ತಿದೆ? ಇದಕ್ಕೆ ಪ್ರಧಾನಿ ಮೋದಿ ಅವರು ಉತ್ತರ ನೀಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಜೀವನ್ಮರಣದ ನಡುವೆ ಹೋರಾಡುತ್ತಿರುವ ರೋಗಿ

ಎಸ್‌ಆರ್‌ಎಫ್ ಐಡಿ ಸಿಗದೆ ಕಂಗಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ರೋಗಿಗಳ ಸಂಕಷ್ಟ ಮುಂದುವರಿದಿದೆ. ಎಸ್‌ಆರ್‌ಎಫ್ ಐಡಿ ಮತ್ತು ಬಿಯು ಸಂಖ್ಯೆ ಸಕಾಲಕ್ಕೆ ಸಿಗದೆ ರೋಗಿಗಳು ಜೀವನ್ಮರಣದ ನಡುವೆ ಹೋರಾಟ ನಡೆಸುತ್ತಿದ್ದಾರೆ.

ಖಾಸಗಿ ಲ್ಯಾಬ್‌ನವರು ಮಾಡಿದ ತಪ್ಪಿನಿಂದ ಸೋಂಕಿತರೊಬ್ಬರು ಚಿಕಿತ್ಸೆ ಸಿಗದೆ ಭಾನುವಾರ ಇಡೀ ದಿನ ಪರದಾಡಿದ್ದಾರೆ.

'ಬಿಬಿಎಂಪಿ ವಾರ್ಡ್ ಸಂಖ್ಯೆ 29ರಲ್ಲಿನ ಕಾಚರಕನಹಳ್ಳಿಯ ಖಾಸಗಿ ಆಸ್ಪತ್ರೆಯಲ್ಲಿ ನನ್ನ ಸಂಬಂಧಿ ಪಿ. ಜಾನ್ಸನ್ ಎಂಬುವರು ಏ.20ರಂದು ಗಂಟಲುದ್ರವದ ಮಾದರಿಯನ್ನು ನೀಡಿದ್ದರು. ಆಸ್ಪತ್ರೆಯವರು ನಗರದ ಕ್ವೀನ್ಸ್ ರಸ್ತೆಯಲ್ಲಿರುವ ಎಲ್ಬಿಟ್ ಪ್ರಯೋಗಾಲಯಕ್ಕೆ ಮಾದರಿಯನ್ನು ಕಳಿಸಿದ್ದಾರೆ. ಆದರೆ, ಆ ಲ್ಯಾಬ್‌ನವರು ಹೆಸರನ್ನು ತಪ್ಪಾಗಿ ನಮೂದಿಸಿದ್ದರಿಂದ ಬಿಯು ಸಂಖ್ಯೆ ಸಿಗಲಿಲ್ಲ' ಎಂದು ರೋಗಿಯ ಸಂಬಂಧಿಯೊಬ್ಬರು ಹೇಳಿದರು.

'ಕೋವಿಡ್ ಪಾಸಿಟಿವ್ ಎಂದು ಮುದ್ರಿತ ಪ್ರತಿಯಲ್ಲಿ ನೀಡಿದ್ದಾರೆ. ಆದರೆ, ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಪೋರ್ಟಲ್‌ಗೆ ಎಸ್‌ಆರ್‌ಎಫ್ ಐಡಿ (ಸ್ಪೆಸಿಮನ್ ರೆಫರಲ್ ಫಾರಂ) ದಾಖಲಿಸುವಾಗ ಜಾನ್ಸನ್ ಎಂಬ ಬದಲಿಗೆ ಬಸವರಾಜ ಎಂದು ನಮೂದಿಸಿದ್ದಾರೆ' ಎಂದು ಅವರು ದೂರಿದರು.

'ಎಸ್‌ಆರ್‌ಎಫ್ ಐಡಿ ದಾಖಲಿಸುತ್ತಿದ್ದಂತೆ ಸ್ವಯಂಚಾಲಿತವಾಗಿ ಅದು ಐಸಿಎಂಆರ್ ಪೋರ್ಟಲ್‌ಗೆ ಹೋಗುತ್ತದೆ. ವರದಿ ಪಾಸಿಟಿವ್ ಆಗಿದ್ದರೆ ಅದು ಕೂಡ ಸ್ವಯಂಚಾಲಿತವಾಗಿ ಬಿಬಿಎಂಪಿ ಪೋರ್ಟಲ್‌ಗೆ ಹೋಗಿ ಅಲ್ಲಿ ಬಿಯು ಸಂಖ್ಯೆ ಸೃಷ್ಟಿಯಾಗುತ್ತದೆ. ಆದರೆ, ಹೆಸರು ತಪ್ಪಾಗಿರುವುದರಿಂದ ಐಸಿಎಂಆರ್ ಪೋರ್ಟಲ್‌ನಲ್ಲಿ ಮಾಹಿತಿ ಅಪ್‌ಲೋಡ್ ಆಗಿಲ್ಲ ಎನ್ನುತ್ತಿದ್ದಾರೆ. ಇದರಿಂದ ಬಿಯು ಸಂಖ್ಯೆ ಕೂಡ ಸಿಕ್ಕಿಲ್ಲ' ಎಂದರು.

'ಆಮ್ಲಜನಕ ಮಟ್ಟ 72ಕ್ಕೆ ಕುಸಿದಿದೆ. ಯಾವ ಆಸ್ಪತ್ರೆಯಲ್ಲಿಯೂ ಚಿಕಿತ್ಸೆ ದೊರೆಯುತ್ತಿಲ್ಲ. ಖಾಸಗಿ ಆಸ್ಪತ್ರೆಯವರು ಬಿಯು ಸಂಖ್ಯೆ ಕೇಳುತ್ತಾರೆ. ನನ್ನ ಸಂಬಂಧಿ ತೀರಾ ಗಂಭೀರ ಪರಿಸ್ಥಿತಿಯಲ್ಲಿದ್ದಾರೆ' ಎಂದು ಅವರು ಅಳಲು ತೋಡಿಕೊಂಡರು.

'ಮೊದಲು 100–200 ಮಾದರಿಗಳು ಪರೀಕ್ಷೆಗೆ ಬರುತ್ತಿದ್ದವು. ಈಗ 800ರಿಂದ 1,000 ಮಾದರಿಗಳು ಬರುತ್ತಿವೆ. ಸಿಬ್ಬಂದಿಯು ತೀವ್ರ ಒತ್ತಡದಲ್ಲಿದ್ದಾರೆ. ಕಣ್ತಪ್ಪಿನಿಂದ ಈ ಪ್ರಮಾದ ಸಂಭವಿಸಿರಬಹುದು. ಅದಕ್ಕಾಗಿ ಕ್ಷಮೆ ಕೋರುತ್ತೇನೆ. ಈ ಬಗ್ಗೆ ಕೂಡಲೇ ಪರಿಶೀಲನೆ ನಡೆಸಲಾಗುವುದು' ಎಂದು ಎಲ್ಬಿಟ್ ಲ್ಯಾಬ್‌ನ ಮಾರುಕಟ್ಟೆ ವಿಭಾಗದ ರಾಜೇಂದ್ರ ಹೇಳಿದರು.

ಈ ಬಗ್ಗೆ ಪ್ರತಿಕ್ರಿಯೆಗೆ ಜಂಟಿ ಆಯುಕ್ತರಾದ ಪಲ್ಲವಿ ಅವರಿಗೆ ಕರೆ ಮಾಡಲಾಯಿತು. ಅವರು ಕರೆ ಸ್ವೀಕರಿಸಲಿಲ್ಲ.

ಕುರುಬರಹಳ್ಳಿ: ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಹೇಳಿಕೆ

ಚಿತಾಗಾರದಲ್ಲಿ 15 ಶವಗಳ ದಹನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚನ್ನೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕುರುಬರಹಳ್ಳಿಯಲ್ಲಿ ಆರಂಭಿಸಲಾಗಿರುವ ಚಿತಾಗಾರದಲ್ಲಿ ಭಾನುವಾರ ಒಟ್ಟು 15 ಶವಗಳ ಅಂತ್ಯ ಸಂಸ್ಕಾರ ನೆರವೇರಿಸಲಾಗಿದೆ.

ನಾಲ್ಕು ಎಕರೆ ವಿಸ್ತೀರ್ಣದ ಈ ಜಾಗದಲ್ಲಿ ಕೇವಲ ನಾಲ್ಕು ದಿನಗಳಲ್ಲಿ ಚಿತಾಗಾರ ನಿರ್ಮಿಸಲಾಗಿದ್ದು, ಕೋವಿಡ್‌ನಿಂದ ಮೃತಪಟ್ಟವರ ಚಿತೆಗೆ ಅಗ್ನಿಸ್ಪರ್ಶ ಮಾಡುವ ಅವಕಾಶ ಒದಗಿಸಲಾಗಿದೆ. ಜೊತೆಗೆ ಮೃತ ವ್ಯಕ್ತಿಗಳ ಚಿತಾಭಸ್ಮವನ್ನು ಮಡಿಕೆಯಲ್ಲಿ ತುಂಬಿ ಅವರ ಕುಟುಂಬದ ಸದಸ್ಯರಿಗೆ ಒದಗಿಸುವ ವ್ಯವಸ್ಥೆಯನ್ನೂ ಮಾಡಲಾಗಿದೆ.

ಈ ಕುರಿತು 'ಪ್ರಜಾವಾಣಿ' ಜೊತೆ ಮಾತನಾಡಿದ ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿ ಜೆ.ಮಂಜುನಾಥ್, 'ಮೊದಲ ದಿನವಾದ ಭಾನುವಾರ 15 ಶವಗಳನ್ನು ಸುಡಲಾಯಿತು. ಇಲ್ಲಿ 25 ಶವಗಳನ್ನು ಏಕಕಾಲದಲ್ಲಿ ದಹಿಸುವ ವ್ಯವಸ್ಥೆಯನ್ನು ಮಾಡಲಾಗಿದೆ. ಒಂದು ಶವ ಸುಡಲು ಕನಿಷ್ಠ 5 ಗಂಟೆ ಬೇಕಾಗುತ್ತದೆ. ದಿನದಲ್ಲಿ 50 ಶವಗಳನ್ನು ಸುಡಬಹುದು. 200 ಶವಗಳನ್ನು ಸುಡಲು ಬೇಕಿರುವಷ್ಟು ಕಟ್ಟಿಗೆಯನ್ನು ಈಗಾಗಲೇ ಸಂಗ್ರಹಿಸಿಡಲಾಗಿದೆ. ಕಟ್ಟಿಗೆಯ ಸಮಸ್ಯೆಯಂತೂ ಇಲ್ಲ. ಶವ ಸಂಸ್ಕಾರದಲ್ಲಿ ಒಟ್ಟು 25 ಮಂದಿಗೆ ಭಾಗವಹಿಸಲು ಅವಕಾಶವಿದೆ. ಶವದ ಪೂಜೆಗೆ, ಹಾಲು ಮತ್ತು ತುಪ್ಪ ಬಿಡಲು ಸಂಬಂಧಿಕರಿಗೆ ಅವಕಾಶ ನೀಡಲಾಗಿದೆ' ಎಂದು ತಿಳಿಸಿದರು.

'ಬಿಬಿಎಂಪಿ ಹಾಗೂ ಅರಣ್ಯ ಇಲಾಖೆಯವರು ಸಂಗ್ರಹಿಸಿಟ್ಟಿದ್ದ ಕಟ್ಟಿಗೆಗಳನ್ನು ಇದಕ್ಕೆ ಬಳಸಲಾಗುತ್ತಿದೆ. ಶವ ಸುಡಲು ಒಟ್ಟು 100 ಮಂದಿ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಅವರಿಗೆ ಹಾಸ್ಟೆಲ್‌ನಲ್ಲಿ ವಸತಿ ಮತ್ತು ಊಟದ ವ್ಯವಸ್ಥೆ ಮಾಡಲಾಗಿದೆ. ಅವರಿಗೆ ಪಿಪಿಇ ಕಿಟ್‌ಗಳನ್ನು ಒದಗಿಸಲಾಗಿದೆ. ಶವ ಸುಡುವ ವೇಳೆ ಅದನ್ನು ಕಡ್ಡಾಯವಾಗಿ ಧರಿಸಿಕೊಳ್ಳಬೇಕೆಂದು ಸೂಚಿಸಲಾಗಿದೆ. ನಾಲ್ಕು ಎಕರೆಯಲ್ಲಿ ಒಟ್ಟು ಮೂರು ಕಡೆ ಶವ ಸಂಸ್ಕಾರಕ್ಕೆ ವ್ಯವಸ್ಥೆ ಮಾಡಲಾಗಿದೆ. ಹೀಗಾಗಿ ಮಳೆ ಬಂದರೂ ಏನೂ ತೊಂದರೆಯಾಗುವುದಿಲ್ಲ' ಎಂದರು.

'ಎರಡು ಕಡೆ ಬೋರ್‌ವೆಲ್ ತೆಗೆಸಿ ನೀರಿನ ವ್ಯವಸ್ಥೆ ಮಾಡಲಾಗಿದೆ. ಜೊತೆಗೆ ಶಾಮಿಯಾನಗಳನ್ನೂ ಹಾಕಿಸಲಾಗಿದೆ. ಗಿಡ್ಡೇನಹಳ್ಳಿಯಲ್ಲಿರುವ ಚಿತಾಗಾರಕ್ಕೆ ಇನ್ನೆರಡು ದಿನಗಳಲ್ಲಿ ಚಾಲನೆ ನೀಡಲಾಗುತ್ತದೆ' ಎಂದು ಹೇಳಿದರು.

ಕಾಮಗಾರಿ ಪರಿಶೀಲಿಸಿದ ಅಶೋಕ್

ಕಂದಾಯ ಸಚಿವ ಆರ್. ಅಶೋಕ್ ಕುರುಬರಹಳ್ಳಿಯಲ್ಲಿ ನಿರ್ಮಿಸಿರುವ ಚಿತಾಗಾರಕ್ಕೆ ಭಾನುವಾರ ಭೇಟಿ ನೀಡಿ ಪರಿಶೀಲಿಸಿದರು.

ಬಳಿಕ ಮಾತನಾಡಿದ ಅವರು 'ನೂತನ ಚಿತಾಗಾರದಿಂದಾಗಿ ನಗರದಲ್ಲಿ ಈಗಾಗಲೇ ಉದ್ಭವಿಸಿರುವ ಸಮಸ್ಯೆ ಪರಿಹಾರವಾಗಲಿದೆ. ಅಂತ್ಯಕ್ರಿಯೆಗೆ ಗಂಟೆಗಟ್ಟಲೆ ಕಾಯುವುದೂ ತಪ್ಪಲಿದೆ' ಎಂದರು.


ಕುರುಬರಹಳ್ಳಿ ಸ್ಮಶಾನದಲ್ಲಿ ಭಾನುವಾರ ಶವಗಳನ್ನು ಸುಡಲಾಯಿತು

7 ಚಿತಾಗಾರಗಳು ಮೀಸಲು

ಬೆಂಗಳೂರು: ನಗರದಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ ಏರುತ್ತಿರುವ ಕಾರಣ ಶವಸಂಸ್ಕಾರಕ್ಕೂ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಸಮಸ್ಯೆ ಪರಿಹರಿಸಲು ಮುಂದಾಗಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಒಟ್ಟು ಏಳು ವಿದ್ಯುತ್ ಚಿತಾಗಾರಗಳನ್ನು ಮೀಸಲಿಟ್ಟಿದೆ.

'ಮೇಡಿ ಅಗ್ರಹಾರ, ಕೂಡ್ಲು, ಪಣತೂರು, ಕೆಂಗೇರಿ, ಸುಮನಹಳ್ಳಿ, ಪೀಣ್ಯ ಹಾಗೂ ಬನಶಂಕರಿ ಚಿತಾಗಾರಗಳನ್ನು ಕೋವಿಡ್‌ನಿಂದ ಮೃತಪಟ್ಟವರ ಅಂತ್ಯಸಂಸ್ಕಾರಕ್ಕೆ ಮೀಸಲಿಡಲಾಗಿದೆ. ಬಿಬಿಎಂಪಿ ಸಹಾಯವಾಣಿ ಮೂಲಕ ನೋಂದಣಿ ಮಾಡಿಸಿಕೊಂಡ ಬಳಿಕವೇ ಶವಗಳನ್ನು ಈ ಚಿತಾಗಾರಗಳಿಗೆ ತೆಗೆದುಕೊಂಡು ಹೋಗಬೇಕು. ಸರ್ಕಾರದ ಮಾರ್ಗಸೂಚಿಯ ಪ್ರಕಾರ ಗರಿಷ್ಠ 5 ಮಂದಿ ಮಾತ್ರ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಳ್ಳಬೇಕು' ಎಂದು ಬಿಬಿಎಂಪಿ ತಿಳಿಸಿದೆ.

'ಏಳು ಚಿತಾಗಾರಗಳಲ್ಲೂ ಮಾರ್ಷಲ್‌ಗಳನ್ನು ನಿಯೋಜಿಸಲಾಗಿದೆ. ಚಿತಾಗಾರಗಳಲ್ಲಿನ ಸಿಬ್ಬಂದಿ ಕಡ್ಡಾಯವಾಗಿ ಪಿಪಿಇ ಕಿಟ್ ಧರಿಸಿರಬೇಕು. ಈ ಸಂಬಂಧ ಮಾರ್ಷಲ್ ಗಳು ಪ್ರತಿನಿತ್ಯ ಛಾಯಾಚಿತ್ರಗಳನ್ನು ತೆಗೆದು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಲು ನಿರ್ದೇಶಿಸಲಾಗಿದೆ. ಆರ್.ಎಫ್.ಐ.ಡಿ ಅಳವಡಿಸಿರುವ ಶವ ಸಾಗಾಣೆ ವಾಹನಗಳಿಗೆ ಮಾತ್ರ ಒಳಗಡೆ ಅನುಮತಿ ನೀಡಲಾಗುತ್ತದೆ. ಇತರ ಐದು ಚಿತಾಗಾರಗಳಲ್ಲೂ ಕೋವಿಡ್‌ನಿಂದ ಮೃತಪಟ್ಟವರ ಅಂತ್ಯಕ್ರಿಯೆಗೆ ಅವಕಾಶ ನೀಡಲಾಗಿದೆ' ಎಂದು ಹೇಳಿದೆ.

ಒಂದೇ ಮಳೆಗೆ ಸೋರಿದ ನಿಲ್ದಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಪೂರ್ಣ ಹವಾನಿಯಂತ್ರಿತ ಸೌಲಭ್ಯ ಹೊಂದಿರುವ ದೇಶದ ಮೊದಲ ರೈಲು ನಿಲ್ದಾಣ ಎಂಬ ಹಿರಿಮೆಗೆ ಪಾತ್ರವಾಗಿರುವ ನಗರದ ಬೈಯಪ್ಪನಹಳ್ಳಿಯಲ್ಲಿರುವ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಒಂದೇ ಮಳೆಗೆ ಅರ್ಧದಷ್ಟು ಮುಳುಗಿ ಹೋಗಿದೆ.

'₹314 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಈ ನಿಲ್ದಾಣ ಉದ್ಘಾಟನೆಗೆ ಸಿದ್ಧವಾಗಿದೆ. ಆದರೆ, ಶುಕ್ರವಾರ ರಾತ್ರಿ ಸುರಿದ ಮಳೆಗೆ ನಿಲ್ದಾಣದ ಚಾವಣಿಗಳಲ್ಲಿ ನೀರು ಸೋರಿದೆ. ಅಲ್ಲದೆ, ನಿಲ್ದಾಣದೊಳಗೆ ಪ್ಲಾಟ್‌ಫಾರಂ 1 ಮತ್ತು 7ನ್ನು ಸಂಪರ್ಕಿಸಲು ನಿರ್ಮಿಸಲಾಗಿರುವ ಸುರಂಗ ಮಾರ್ಗದಲ್ಲಿ ಎರಡು ಅಡಿಗಿಂತ ಹೆಚ್ಚು ಎತ್ತರದಲ್ಲಿ ನೀರು ನಿಂತಿದೆ' ಎಂದು ಸ್ಥಳೀಯರೊಬ್ಬರು ಹೇಳಿದರು.


ಬೈಯಪ್ಪನಹಳ್ಳಿಯಲ್ಲಿನ ಸರ್ ಎಂ. ವಿಶ್ವೇಶ್ವರಯ್ಯ ರೈಲು ನಿಲ್ದಾಣದ ಸುರಂಗ ಮಾರ್ಗದಲ್ಲಿ ನಿಂತಿರುವ ಮಳೆ ನೀರು

'ವಿಶ್ವದರ್ಜೆಯ ನಿಲ್ದಾಣ ಇದಾಗಿರಲಿದೆ ಎಂಬ ಆಶಾಭಾವ ನಮ್ಮದಾಗಿತ್ತು. ಆದರೆ, ಒಂದೇ ಮಳೆಗೆ ನಿಲ್ದಾಣದ ಕಳಪೆ ಗುಣಮಟ್ಟದ ಅನಾವರಣವಾಗಿದೆ' ಎಂದರು.

'ಸಿಬ್ಬಂದಿ ಕರೆಸಿ ನೀರನ್ನೆಲ್ಲ ಹೊರ ಹಾಕಲಾಗಿದೆ. ನೀರು ಸೋರಿಕೆಗೆ ಕಾರಣ ಏನು ಎಂಬ ಬಗ್ಗೆ ಪರಿಶೀಲನೆ ನಡೆಸಲಾಗುವುದು' ಎಂದು ಅಧಿಕಾರಿಯೊಬ್ಬರು ಹೇಳಿದರು.

'ಚಾವಣಿ ಎಲ್ಲ ಸೋರಿಕೆಯಾಗಿದೆ ಎಂಬುದು ಸುಳ್ಳು. ಸುರಂಗ ಅಥವಾ ಸಬ್‌ವೇದಲ್ಲಿ ನೀರು ಹರಿದಿದೆ. ಮಳೆ ನೀರು ಸಂಗ್ರಹ ವ್ಯವಸ್ಥೆ ಮಾಡಲಾಗಿದ್ದು, ಈ ಕಾಮಗಾರಿ ಅಂತಿಮ ಹಂತದಲ್ಲಿದೆ. ಮುಂದೆ ಎಂತಹ ಮಳೆ ಬಂದರೂ ನೀರು ಸರಾಗವಾಗಿ ಹರಿದು ಹೋಗಿ ಸಂಗ್ರಹವಾಗುತ್ತದೆ. ನಿಲ್ದಾಣದಲ್ಲಿ ಮಳೆ ನೀರು ನಿಲ್ಲುವುದಿಲ್ಲ' ಎಂದು ನೈರುತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಅನೀಶ್ ಹೆಗ್ಡೆ 'ಪ್ರಜಾವಾಣಿ'ಗೆ ತಿಳಿಸಿದರು.

ಭಗವಾನ್ ಮಹಾವೀರ ಜಯಂತಿ


ಮಹಾವೀರ ಜಯಂತಿ ಅಂಗವಾಗಿ ಮುಖ್ಯಮಂತ್ರಿ ಬಿ.ಎಸ್‌.ಯಡಿಯೂರಪ್ಪ ಅವರು ತಮ್ಮ ಕಾರ್ಯಾಲಯದಲ್ಲಿ ಮಹಾವೀರರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಬೆಂಗಳೂರು: ಭಗವಾನ್ ಮಹಾವೀರ ಜಯಂತಿ ಅಂಗವಾಗಿ ಅವರ ಜನ್ಮ ಕಲ್ಯಾಣ ಮಹೋತ್ಸವವನ್ನು ಜೈನ ಯುವ ಸಂಘಟನೆಯು ಕೊರೊನಾ ಕಾರಣದಿಂದ ಡಿಜಿಟಲ್ ವೇದಿಕೆಯ ಮೂಲಕ ಭಾನುವಾರ ಹಮ್ಮಿಕೊಂಡಿತ್ತು.

ಜೈನ ಯುವ ಸಂಘಟನೆ ಅಧ್ಯಕ್ಷ ರೂಪಚಂದ್ ಕುಮಾಟ್, 'ಈ ಬಾರಿ ಕೊರೊನಾ ಪರಿಸ್ಥಿತಿ ಎದುರಾಗಿರುವುದರಿಂದ ಮಹಾವೀರ ಜಯಂತಿಯನ್ನು ಸಾರ್ವಜನಿಕವಾಗಿ ಆಚರಿಸಲಿಲ್ಲ. ಸಮುದಾಯದ ಜೈನ ವಾಹಿನಿಯ ಮೂಲಕ ಮಹಾವೀರ ಜಯಂತಿಯ ನೇರಪ್ರಸಾರ ವ್ಯವಸ್ಥೆ ಮಾಡಿದ್ದೆವು' ಎಂದರು.

'ಜಯಂತಿ ಅಂಗವಾಗಿ ನಗರದಲ್ಲಿರುವ ಜೈನ ಮಂದಿರಗಳಲ್ಲಿ ಸರಳವಾಗಿ ಪೂಜಾ ವಿಧಿ ವಿಧಾನಗಳು ನೆರವೇರಿದವು' ಎಂದರು.

ಸಂಘಟನೆ ಕಾರ್ಯದರ್ಶಿ ಮುಖೇಶ್ ಬಾಬೆಲ್,'ಈ ಬಾರಿ ಮನೆಗಳಲ್ಲೇ ಸರಳವಾಗಿ ಆಚರಿಸಲಾಯಿತು' ಎಂದರು.

ಗಗನಯಾನಕ್ಕೆ ಮುನ್ನ ಸಂವಹನಕ್ಕಾಗಿ ಉಪಗ್ರಹ ಉಡಾವಣೆ

ನವದೆಹಲಿ (ಪಿಟಿಐ): ಸಂವಹನ ಉದ್ದೇಶಕ್ಕಾಗಿ ಬಳಸುವ ಉಪಗ್ರಹವನ್ನು ಉಡಾವಣೆ ಮಾಡಲು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ(ಇಸ್ರೊ) ಸಿದ್ಧತೆ ನಡೆಸಿದೆ.

ಇಸ್ರೊ ಮಹತ್ವಾಕಾಂಕ್ಷೆ ಮಾನವಸಹಿತ 'ಗಗನಯಾನ' ಯೋಜನೆಗೆ ಮುನ್ನ ಈ ಉಪಗ್ರಹ ಉಡಾವಣೆ ಮಾಡಲು ಉದ್ದೇಶಿಸಲಾಗಿದೆ. ಗಗನಯಾನ ಜತೆ ನಿರಂತರ ಸಂಪರ್ಕ ಸಾಧಿಸಲು ಈ ಉಪಗ್ರಹ ನೆರವಾಗಲಿದೆ.

₹800 ಕೋಟಿ ಮೊತ್ತದ ಈ ಯೋಜನೆಗೆ ಅನುಮೋದನೆ ದೊರೆತಿದ್ದು, ಈಗಾಗಲೇ ಕೆಲಸಗಳು ಆರಂಭವಾಗಿವೆ. ಡಿಸೆಂಬರ್‌ನಲ್ಲಿ ಈ ಉಪಗ್ರಹ ಉಡಾವಣೆ ಮಾಡುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.


ಸಂವಹನ ಉದ್ದೇಶಕ್ಕಾಗಿ ಬಳಸುವ ಉಪಗ್ರಹವು ಭೂಮಿಯಲ್ಲಿರುವ ಉಪಗ್ರಹ ನಿಗಾ ಕೇಂದ್ರಕ್ಕೆ ಸ್ಪಷ್ಟವಾದ ಮಾಹಿತಿಯನ್ನು ರವಾನಿಸಲು ನೆರವಾಗುತ್ತದೆ. ಬಾಹ್ಯಾಕಾಶ ಯೋಜನೆಗಳಿಗಾಗಿ ಅಮೆರಿಕ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ನಾಸಾ) ಸಹ ಇಂತಹ ಉಪಗ್ರಹವನ್ನು ಹೊಂದಿದೆ.

ನಿಧನ ವಾರ್ತೆ

ಗಾಯಕಿ ಕ್ರಿಸ್ಟಾ ಲುಡ್ವಿಗ್

ವಿಯೆನ್ನಾ (ಎಎಫ್‌ಪಿ): ಆಸ್ಟ್ರಿಯಾದ ಖ್ಯಾತ ಗೀತನಾಟಕ (ಒಪೆರಾ) ಗಾಯಕಿ ಕ್ರಿಸ್ಟಾ ಲುಡ್ವಿಗ್ (93) ಶನಿವಾರ ನಿಧನರಾದರು.

ಬರ್ಲಿನ್‌ನಲ್ಲಿ ಜನಿಸಿದ ಕ್ರಿಸ್ಟಾ ಅವರು ವಿಯೆನ್ನಾದಲ್ಲಿ ನೆಲೆಸಿದ್ದರು. 2010ರಲ್ಲಿ ಫ್ರಾನ್ಸ್‌ನ 'ಲೀಜಿಯನ್ ಆಫ್ ಆನರ್' ಪ್ರಶಸ್ತಿಗೆ ಅವರು ಭಾಜನರಾಗಿದ್ದರು.



1955 ರಲ್ಲಿ ವಿಯೆನ್ನಾದ ಒಪೆರಾ ಕ್ಷೇತ್ರಕ್ಕೆ ಕಾಲಿರಿಸಿದ ಕ್ರಿಸ್ಟಾ ಅವರು ಸಾಲ್ಜ್‌ಬರ್ಗ್ ಉತ್ಸವದಲ್ಲಿ ಪ್ರದರ್ಶನ ನೀಡಿದ್ದರು. ಜಗತ್ತಿನಾದ್ಯಂತ ಸಂಚರಿಸಿ ಕಾರ್ಯಕ್ರಮ ನೀಡಿದ್ದರು.


ರೆಮ್‌ಡಿಸಿವಿರ್ ಅಕ್ರಮ ಮಾರಾಟ: ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಆನೇಕಲ್: ಕೊರೊನಾ ಸೋಂಕಿತರಿಗೆ ನೀಡುವ ರೆಮ್‌ಡಿಸಿವಿರ್ ಚುಚ್ಚುಮದ್ದನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದ ಆರೋಪದ ಹಿನ್ನೆಲೆಯಲ್ಲಿ ಆನೇಕಲ್ ತಾಲ್ಲೂಕಿನ ಜಿಗಣಿಯ ಸುಹಾಸ್ ಆಸ್ಪತ್ರೆಯ ಒಬ್ಬರು ವೈದ್ಯರು ಮತ್ತು ಸಿಬ್ಬಂದಿಯನ್ನು ಜಿಗಣಿ ಪೊಲೀಸರು ಬಂಧಿಸಿದ್ದಾರೆ.

ಸುಹಾಸ್ ಆಸ್ಪತ್ರೆಯ ವೈದ್ಯ ಅರ್ಮಾನ್ ಅಲಿ ಮತ್ತು ರೆಸೆಪ್ಷನಿಸ್ಟ್ ರಕ್ಷಿತ್ ಬಂಧಿತ ಆರೋಪಿಗಳು. ರೆಮ್‌ಡಿಸಿವಿರ್ ಚುಚ್ಚುಮದ್ದನ್ನು ಶಾಂತಿನಗರದಿಂದ ತರಿಸಿಕೊಡಲಾಗುವುದು. ಒಂದು ಚುಚ್ಚುಮದ್ದಿಗೆ ₹15 ಸಾವಿರ ಎಂದು ತಿಳಿಸಿದ್ದರು. ಈ ಬಗ್ಗೆ ಖಚಿತ ಮಾಹಿತಿಯ ಮೇರೆಗೆ ಜಿಗಣಿ ಪೊಲೀಸ್ ಸರ್ಕಲ್ ಇನ್‌ಸ್ಪೆಕ್ಟರ್ ಶೇಖರ್ ನೇತೃತ್ವದಲ್ಲಿ ಪೊಲೀಸರು ಮಾರುವೇಷದಲ್ಲಿ ಕಾರ್ಯಾಚರಣೆ ನಡೆಸಿದಾಗ ಆರೋಪಿಗಳು ರೆಮ್‌ಡಿಸಿವಿರ್ ಔಷಧಿಯನ್ನು ಶಾಂತಿನಗರದಿಂದ ತರಿಸಿಕೊಡಲಾಗುವುದು ಎಂದು ತಿಳಿಸಿದ್ದಾರೆ. ಅದರಂತೆ ಪೊಲೀಸರು, ವ್ಯವಹರಿಸುವ ಸಂದರ್ಭದಲ್ಲಿಯೇ ದಾಳಿ ನಡೆಸಿ ಬಂಧಿಸಿದ್ದಾರೆ.



ಬಂಧಿತ ಆರೋಪಿಗಳು

ರೋಗಿಗಳ ಹೆಸರಿನಲ್ಲಿ ಸರ್ಕಾರದಿಂದ ರಿಯಾಯಿತಿ ದರದಲ್ಲಿ ರೆಮ್‌ಡಿಸಿವಿರ್ ಚುಚ್ಚುಮದ್ದನ್ನು ಖರೀದಿಸಿ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವ ಸಾಧ್ಯತೆಯಿದೆ. ಹಾಗಾಗಿ ಡ್ರಗ್ ಕಂಟ್ರೋಲ್ ಅವರಿಗೆ ಮಾಹಿತಿ ನೀಡಲಾಗಿದೆ. ಅಧಿಕಾರಿಗಳು ಚುಚ್ಚುಮದ್ದಿನ ಬ್ಯಾಚ್ ಮತ್ತಿತರ ಮಾಹಿತಿಗಳನ್ನು ಪರಿಶೀಲಿಸಿ ಇದು ಎಲ್ಲಿಗೆ ಸರಬರಾಜಾಗಿತ್ತು ಎಂಬುದನ್ನು ಖಚಿತ ಪಡಿಸಲಿದ್ದಾರೆ ಎಂದು ಜಿಗಣಿ ಸರ್ಕಲ್ ಇನ್‌ಸ್ಪೆಕ್ಟರ್ ಶೇಖರ್ ತಿಳಿಸಿದರು.

ಕೆಲಸದ ಆಮಿಷ: ₹ 7.44 ಲಕ್ಷ ವಂಚನೆ

ಬೆಂಗಳೂರು: ಕೆಲಸದ ಆಮಿಷವೊಡ್ಡಿ ನಗರದ ನಿವಾಸಿಯೊಬ್ಬರಿಂದ ₹ 7.44 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನಗರದ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ 31 ವರ್ಷದ ಯುವಕ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರರ ವೈಯಕ್ತಿಕ ಇ– ಮೇಲ್‌ಗೆ ಸಂದೇಶ ಕಳುಹಿಸಿದ್ದ ಆರೋಪಿಗಳು, ಕೆಲಸವಿರುವುದಾಗಿ ಹೇಳಿದ್ದರು. ಆರೋಪಿ ಮಾತು ನಂಬಿದ್ದ ದೂರುದಾರ, ಶುಲ್ಕದ ರೂಪದಲ್ಲಿ ಆರೋಪಿಗಳು ಹಂತ ಹಂತವಾಗಿ ₹ 7.44 ಲಕ್ಷ ನೀಡಿದ್ದಾರೆ. ಪುನಃ ಹಣಕ್ಕೆ ಬೇಡಿಕೆ ಇಟ್ಟಿದ್ದರು. ಆರೋಪಿಗಳ ವರ್ತನೆಯಿಂದ ಅನುಮಾನಗೊಂಡಿದ್ದ ದೂರುದಾರ, 'ಕೆಲಸ ಬೇಡ ಹಣ ವಾಪಸು ಕೊಡಿ' ಎಂದಿದ್ದರು. ಬಳಿಕ ಆರೋಪಿಗಳು ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ನಾಪತ್ತೆಯಾಗಿದ್ದಾರೆ' ಎಂದೂ ಹೇಳಿವೆ.

ಕೊಲೆ ಆರೋಪಿ ಕಾಲಿಗೆ ಗುಂಡೇಟು

ಬೆಂಗಳೂರು: ಕೊಲೆ ಪ್ರಕರಣದ ಮಹಜರು ವೇಳೆ ಪೊಲೀಸರ ಮೇಲೆ ಹಲ್ಲೆ ಮಾಡಿ ಪರಾರಿಯಾಗಲು ಯತ್ನಿಸಿದ್ದ ರೌಡಿ ದಿನೇಶ್ ಅಲಿಯಾಸ್ ಕ್ರೇಜಿ ಕ್ರಷ್ ಎಂಬಾತನ ಕಾಲಿಗೆ ಇನ್‌ಸ್ಪೆಕ್ಟರ್ ಭರತ್ ಗುಂಡು ಹಾರಿಸಿದ್ದಾರೆ.

'ಅಶೋಕನಗರ ಠಾಣೆ ವ್ಯಾಪ್ತಿಯಲ್ಲಿ ರವಿಮರ್ಮ್ ಅಲಿಯಾಸ್ ಅಪ್ಪು (29) ಎಂಬುವರನ್ನು ಏಪ್ರಿಲ್ 20ರಂದು ಕೊಲೆ ಮಾಡಲಾಗಿತ್ತು. ತಲೆಮರೆಸಿಕೊಂಡಿದ್ದ ದಿನೇಶ್ ಸೇರಿದಂತೆ ಆರು ಆರೋಪಿಗಳನ್ನು ಶನಿವಾರ ಬಂಧಿಸಲಾಗಿತ್ತು' ಎಂದು ಪೊಲೀಸರು ಹೇಳಿದರು.

ಮಕ್ಕಳ ಭವಿಷ್ಯದ ಓದಿನ ಆಯ್ಕೆ
ಪೋಷಕರ ಬೆಂಬಲ ಹೇಗಿರಬೇಕು?



10ನೇ ತರಗತಿಯ ಮಕ್ಕಳು ಮುಂದೆ ಏನು ಓದಬೇಕು ಎಂಬ ಗೊಂದಲಕ್ಕೆ ಈಡಾಗುವುದು ಸಹಜ. ಆದರೆ ಅವರ ಆಸಕ್ತಿ, ಗುರಿಯನ್ನು ಪೋಷಕರು ತಿಳಿದುಕೊಂಡು ಪ್ರೋತ್ಸಾಹ ನೀಡಬೇಕಾಗುತ್ತದೆ.

ಪ್ರೊ. ಎಸ್.ಕೆ. ಜಾರ್ಜ್

ಬೆಂಗಳೂರಿನ ಸಿರಿ ಶೆಟ್ಟರ್ 10ನೇ ತರಗತಿಯಲ್ಲಿದ್ದಾಗ ಮುಂದೆ ಯಾವುದನ್ನು ಓದಬೇಕು ಎಂಬ ಗೊಂದಲದಲ್ಲಿದ್ದಳು. ಶಾಲೆಯಲ್ಲಿ ನಡೆಸಿದ ಆಪ್ತ ಸಮಾಲೋಚನೆಯಲ್ಲಿ ಆಕೆ ಎಂಜಿನಿಯರಿಂಗ್ ಓದುವುದು ಉತ್ತಮ ಎಂದು ಹೇಳಲಾಗಿತ್ತು. ಆದರೆ ವಾಣಿಜ್ಯ ಅಥವಾ ಕಲಾ ವಿಭಾಗದಲ್ಲಿ ಓದು ಮುಂದುವರಿಸಿದರೆ ಪಠ್ಯೇತರ ಚಟುವಟಿಕೆಗಳಿಗೆ ಸಮಯ ಸಿಗುತ್ತದೆ ಎಂಬುದು ಆಕೆಯ ಆಲೋಚನೆ. ಈ ಗೊಂದಲಗಳ ನಡುವೆ ಆಕೆಯ ತಂದೆ ವೃತ್ತಿ ಮಾರ್ಗದರ್ಶಕರ ಬಳಿ ಕರೆದೊಯ್ದರು.

ಎಂಜಿನಿಯರಿಂಗ್ ಓದಬೇಕೆಂಬ ಆಸೆ ಸಿರಿಗಿದ್ದರೂ ಆಕೆಯ ಆಸಕ್ತಿ ಮತ್ತು ಗುರಿಯನ್ನು ವಾಣಿಜ್ಯ ಕೋರ್ಸ್ ಓದುವುದರ ಮೂಲಕ ಪೂರೈಸಿಕೊಳ್ಳಬಹುದು ಎಂಬ ಸಲಹೆ ಮಾರ್ಗದರ್ಶಕರಿಂದಲೂ ಬಂತು. ಆಗ ಸಿರಿಗೆ ಭವಿಷ್ಯದ ಓದು, ವೃತ್ತಿಯ ಬಗ್ಗೆ ಒಂದು ರೀತಿಯ ಆತ್ಮವಿಶ್ವಾಸ ಮೂಡಿದ್ದು ಸುಳ್ಳಲ್ಲ.

ಈ ರೀತಿಯ ಗೊಂದಲಗಳು ಹದಿಹರೆಯದವರಲ್ಲಿ ಸಹಜ. ಎಂಜಿನಿಯರಿಂಗ್, ವೈದ್ಯಕೀಯ, ವಿಜ್ಞಾನದಂತಹ ಸಾಂಪ್ರದಾಯಿಕ ಕೋರ್ಸ್‌ಗಳ ಹೊರತಾಗಿ ಅವರ ಮುಂದೆ ಜಾಹೀರಾತು, ಮಾಧ್ಯಮ ಕ್ಷೇತ್ರ, ಫೋಟೊಗ್ರಫಿ ಮೊದಲಾದ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳ ಆಕರ್ಷಣೆಯೂ ಇದೆ. ಜೊತೆಗೆ ತಮ್ಮ ಸ್ನೇಹಿತರು, ಸಹಪಾಠಿಗಳು ಯಾವ ಕೋರ್ಸ್ ಆಯ್ಕೆ ಮಾಡಿಕೊಳ್ಳುತ್ತಾರೆ ಎಂಬುದೂ ಪ್ರಭಾವ ಬೀರಬಹುದು. ಇಂತಹ ಸಂದರ್ಭದಲ್ಲಿ ಪೋಷಕರು ತಮ್ಮ ಮಕ್ಕಳ ಆಯ್ಕೆಯ ಬಗ್ಗೆ ಗಮನಹರಿಸಿ ಒಳಿತು- ಕೆಡಕುಗಳನ್ನು ಪರಿಶೀಲಿಸಿ ಒಳ್ಳೆಯ ಕೋರ್ಸ್ ಆಯ್ಕೆ ಮಾಡಿಕೊಳ್ಳಲು ನೆರವಾಗುವುದು ಸೂಕ್ತ. ಹಾಗಂತ ತಮ್ಮ ಬಯಕೆಯನ್ನು, ಮಹತ್ವಾಕಾಂಕ್ಷೆಯನ್ನು ಮಕ್ಕಳ ಮೇಲೆ ಹೇರುವುದೂ ಸರಿಯಲ್ಲ.

ಚಿಕ್ಕಂದಿನಿಂದಲೇ ವಿವಿಧ ವೃತ್ತಿಗಳ ಬಗ್ಗೆ ಪ್ರಶ್ನೆ ಕೇಳುವಂತೆ ಮಕ್ಕಳಿಗೆ ಪ್ರೋತ್ಸಾಹಿಸಿ

ಭವಿಷ್ಯದ ವೃತ್ತಿಯ ಬಗ್ಗೆ ಗೊಂದಲವಿದ್ದರೆ ಆಪ್ಟಿಟ್ಯೂಡ್ ಪರೀಕ್ಷೆಗೆ ಕೂರಬಹುದು

ಆಸಕ್ತಿಯ ಅವಲೋಕನ

ಮಕ್ಕಳ ಭವಿಷ್ಯದ ಬಗ್ಗೆ ನಿರ್ಧಾರ ಕೈಗೊಳ್ಳುವುದು ಅಷ್ಟು ಸುಲಭವಲ್ಲ. ಆರಂಭದಿಂದಲೂ ತಮ್ಮ ಮಕ್ಕಳ ಆಸಕ್ತಿ, ಗುರಿಯನ್ನು ಅವಲೋಕಿಸುತ್ತ ಸ್ವತಃ ನಿರ್ಧಾರ ಕೈಗೊಳ್ಳಲು ಅವರನ್ನು ಉತ್ತೇಜಿಸುವುದು ಒಂದು ಕಡೆಯಾದರೆ, ಇನ್ನೊಂದು ಕಡೆ ತಾವೂ ಈ ವಿಚಾರದಲ್ಲಿ ಕ್ರಿಯಾಶೀಲವಾಗಿ ಪಾಲ್ಗೊಳ್ಳಬೇಕಾಗುತ್ತದೆ. ಅಂದರೆ ಮಕ್ಕಳ ಆಯ್ಕೆಯನ್ನು ಕೇಳಿ ನೆರವು ನೀಡಬೇಕಾಗುತ್ತದೆ, ಆರ್ಥಿಕ ಬೆಂಬಲವನ್ನೂ ಕೊಡಬೇಕಾಗುತ್ತದೆ.

ಕೋರ್ಸ್ ಬಗ್ಗೆ ಮಾರ್ಗದರ್ಶನ ನೀಡುವಾಗ ವೃತ್ತಿ ಮಾರ್ಗದರ್ಶಕರಲ್ಲದೇ, ಅಂತರ್ಜಾಲ, ಶಿಕ್ಷಣ ತಜ್ಞರ ನೆರವನ್ನೂ ಪಡೆಯಬಹುದು. ಶಿಕ್ಷಣ ಕ್ಷೇತ್ರದಲ್ಲಿ ಅಥವಾ ಇತರ ಹುದ್ದೆಗಳಲ್ಲಿ ಸಾಧನೆ ಮಾಡಿದ ಬಂಧುಗಳು, ಪರಿಚಿತರ ಸಲಹೆ ಕೋರಬಹುದು.

ಇಂಗ್ಲಿಷ್ ಸಾಹಿತ್ಯದಲ್ಲಿ ಐರ್ಲೆಂಡ್ ವಿಶ್ವವಿದ್ಯಾಲಯದಲ್ಲಿ ಪಿಎಚ್‌ಡಿ ಮಾಡುತ್ತಿರುವ ಕೀರ್ತಿ ಶರ್ಮಾ ಅವರ ಉದಾಹರಣೆಯನ್ನೇ ತೆಗೆದುಕೊಂಡರೆ, 10ನೇ ತರಗತಿಯಲ್ಲಿ ಶೇ 95ರಷ್ಟು ಅಂಕ ಗಳಿಸಿದರೂ ಆಕೆಗೆ ಕಲಾ ವಿಭಾಗದಲ್ಲಿ ಪದವಿ ಪಡೆಯಬೇಕೆಂಬ ಆಸೆ. ಆದರೆ ಪಿಯುಸಿ ನಂತರ ಎಂಜಿನಿಯರಿಂಗ್, ವೈದ್ಯಕೀಯ ಓದಬೇಕೆಂಬ ಬಯಕೆಯಾದರೆ.. ಈ ಕಾರಣ ಮುಂದಿಟ್ಟ ಆಕೆಯ ತಂದೆ ವಿಜ್ಞಾನ ಓದುವಂತೆ ಒತ್ತಾಯಿಸಿದರು. ಅರೆ ಮನಸ್ಸಿನಿಂದ ಪಿಯುಸಿಯಲ್ಲಿ ವಿಜ್ಞಾನ ಓದಿದ ಆಕೆ ಎಷ್ಟೇ ಒತ್ತಾಯಿಸಿದರೂ ಸಿಇಟಿಗೂ ಕೂರಲಿಲ್ಲ. ಪದವಿಯಲ್ಲಿ ಕಲಾ ವಿಭಾಗಕ್ಕೆ ಸೇರಿಕೊಂಡು ಮನಶ್ಶಾಸ್ತ್ರ, ಇಂಗ್ಲಿಷ್, ಪತ್ರಿಕೋದ್ಯಮ ಓದಿದಳು. ಜೊತೆಗೆ ಚರ್ಚಾಸ್ಪರ್ಧೆಯಲ್ಲಿ ರಾಷ್ಟ್ರಮಟ್ಟದಲ್ಲೂ ಬಹುಮಾನ. ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ವಿಶ್ವವಿದ್ಯಾಲಯಕ್ಕೆ ಪ್ರಥಮ ರ್‍ಯಾಂಕ್‌ನೊಂದಿಗೆ ಮುಗಿಸಿ ಈಗ ಸಂಶೋಧನೆ ಮಾಡುತ್ತಿದ್ದಾಳೆ.

ಹೀಗಾಗಿ ಮಕ್ಕಳ ಮನಸ್ಸಿನಲ್ಲಿ ಏನಿದೆ ಎಂಬುದು ಮಾತ್ರವಲ್ಲ, ಅದಕ್ಕೆ ಕಾರಣಗಳನ್ನೂ ತಿಳಿದುಕೊಳ್ಳಬೇಕು. ಎಂಜಿನಿಯರ್ ಆಗಬೇಕು ಎಂದು ಹೇಳಿದರೆ, ಕಾರಣಗಳನ್ನು ಒಂದೊಂದಾಗಿ ತಿಳಿದುಕೊಂಡು, ಅದು ಕೇವಲ ತಾತ್ಕಾಲಿಕ ಬಯಕೆಯೇ ಎಂಬುದನ್ನು ತೀರ್ಮಾನಿಸುವುದು ಪೋಷಕರ ಕರ್ತವ್ಯ. ಕೇವಲ ಆಸೆ ಮಾತ್ರವಲ್ಲ, ತೀವ್ರವಾದ ವೈಯಕ್ತಿಕ ಆಸಕ್ತಿ, ಗುರಿ ಕೂಡ ಮುಖ್ಯ.

ಮಕ್ಕಳಿಗೆ ಮಾಹಿತಿ ನೀಡಿ, ವಿವಿಧ ಅವಕಾಶಗಳ ಬಗ್ಗೆ ಅರ್ಥವಾಗುವಂತೆ ವಿವರಿಸಿ

ನಿರ್ಧಾರಕ್ಕೆ ಪೋಷಕರ ಬೆಂಬಲ

ಸಣ್ಣ ವಯಸ್ಸಿನಿಂದಲೇ ಕೆಲವರು ನಿರ್ಧಾರ ಕೈಗೊಳ್ಳುವಲ್ಲಿ ನೈಪುಣ್ಯ ಬೆಳೆಸಿಕೊಳ್ಳುತ್ತಾರೆ. ಇದಕ್ಕೆ ಪೋಷಕರೂ ನೀರೆರೆಯಬೇಕು. ಒಮ್ಮೆಲೇ 14-15ನೇ ವಯಸ್ಸಿನಲ್ಲಿ ಅವರ ಮೇಲೆ ಒತ್ತಡ ಹೇರುವುದು ಸರಿಯಲ್ಲ. ಹಾಗೆಯೇ ಅವರ ಆಸಕ್ತಿಗೆ ಉತ್ತೇಜನ ನೀಡಬೇಕೇ ಹೊರತು ಟೀಕೆ ಮಾಡುವುದು, ಲೇವಡಿ ಮಾಡುವುದು ಕೂಡ ಒಳ್ಳೆಯದಲ್ಲ. ಇದರಿಂದ ಮಕ್ಕಳಲ್ಲಿ ಕೀಳರಿಮೆ, ಹಿಂಜರಿಕೆ ಬೆಳೆಯುವುದಲ್ಲದೇ, ತಮ್ಮ ಮೇಲೇ ವಿಶ್ವಾಸ ಮೂಡುವುದಿಲ್ಲ.

ವಿದ್ಯಾರ್ಥಿ ವೇತನ ಕೈಪಿಡಿ

ಶಾಲಾ ಮಕ್ಕಳಿಗೆ ಸಿಎಸ್‌ಐಆರ್ ಇನ್ನೊವೇಷನ್ ಅವಾರ್ಡ್ 2021
ವಿವರ: 18 ವರ್ಷ ಒಳಗಿನವರಿಗಾಗಿ ಕೌನ್ಸಿಲ್ ಆಫ್ ಸೈಂಟಿಫಿಕ್ ಆ್ಯಂಡ್ ಇಂಡಸ್ಟ್ರಿಯಲ್ ರಿಸರ್ಚ್ ಅರ್ಜಿಗಳನ್ನು ಆಹ್ವಾನಿಸಿದೆ.
ಅರ್ಹತೆ: 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ವಿದ್ಯಾರ್ಥಿ ಅಥವಾ ವಿದ್ಯಾರ್ಥಿಗಳ ಗುಂಪು ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಒಮ್ಮೆ ಒಬ್ಬರಿಗೆ ಅಥವಾ ಒಂದು ಗುಂಪಿಗೆ ಮಾತ್ರ ಅವಕಾಶ.
ಆರ್ಥಿಕ ಸಹಾಯ: ₹ 1 ಲಕ್ಷದವರೆಗೆ
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30 ಏಪ್ರಿಲ್, 2021
ಅರ್ಜಿ ಸಲ್ಲಿಕೆ ವಿಧಾನ: ಅಂಚೆ ಮೂಲಕ ಅರ್ಜಿ ಸಲ್ಲಿಸಬಹುದು. ಹೆಡ್, ಸಿಎಸ್‌ಐಆರ್ ಇನ್ನೊವೇಷನ್ ಪ್ರೊಟೆಕ್ಷನ್ ಯೂನಿಟ್ ಎಸ್‌ಐಎಸ್‌ಸಿಎಐಆರ್ ಬಿಲ್ಡಿಂಗ್, 3 ಫ್ಲೋರ್, 14 ಸತ್‌ಸಂಗ್ ವಿಹಾರ್ ಮಾರ್ಗ್, ನವದೆಹಲಿ- 110067
ಹೆಚ್ಚಿನ ವಿವರಗಳಿಗೆ: www.b4s.in/praja/ASC5

ಐಐಟಿ ಪಟ್ನಾ ವಿಶ್ಲೇಷಣ್ ಚಾಣಕ್ಯ ಪೋಸ್ಟ್ ಡಾಕ್ಟೊರಲ್ ಫೆಲೋಶಿಪ್ 2021
ವಿವರ: ಪಿಎಚ್‌ಡಿ ವಿದ್ಯಾರ್ಥಿಗಳಿಂದ ಐಐಟಿ ಪಾಟ್ನಾ ಅರ್ಜಿಗಳನ್ನು ಆಹ್ವಾನಿಸಿದೆ.
ಅರ್ಹತೆ: 35 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಅವರು ನೆಟ್ ಮತ್ತು ಗೇಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
ಆರ್ಥಿಕ ಸಹಾಯ: ಪ್ರತಿ ತಿಂಗಳಿಗೆ ₹ 80 ಸಾವಿರ
ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: 30 ಏಪ್ರಿಲ್, 2021, **ಅರ್ಜಿ ಸಲ್ಲಿಕೆ ವಿಧಾನ:** ಇ-ಮೇಲ್ ಅಥವಾ ಅಂಚೆ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು. ಆರ್ ಆ್ಯಂಡ್ ಡಿ, ಐಐಟಿ ಪಾಟ್ನಾ, ಬಿಹ್ತಾ, ಬಿಹಾರ
ಹೆಚ್ಚಿನ ಮಾಹಿತಿಗೆ: www.b4s.in/praja/CPA6

ಕೃಪೆ: buddy4study.com

ಇನ್‌ಸ್ಟ್ರುಮೆಂಟೇಶನ್ ಟೆಕ್ನಾಲಜಿ
ಉನ್ನತ ವ್ಯಾಸಂಗಕ್ಕೂ ಅವಕಾಶ

ಆರ್.ಬಿ. ಗುರುಬಸವರಾಜ



ಎಲ್ಲಾ ಕೈಗಾರಿಕೆಗಳ ಯಾಂತ್ರಿಕ ಪ್ರಕ್ರಿಯೆಗೆ ಉಪಕರಣಗಳು ಹಾಗೂ ನಿಯಂತ್ರಕಗಳು ಬೇಕಾಗುತ್ತವೆ. ಈ ಉಪಕರಣ ಮತ್ತು ನಿಯಂತ್ರಕಗಳು ವಿಶ್ವಾಸಾರ್ಹತೆಯಿಂದ ಕಾರ್ಯ ನಿರ್ವಹಿಸಿದರೆ ಮಾತ್ರ ಗುಣಮಟ್ಟದ ಉತ್ಪನ್ನ ಸಕಾಲಕ್ಕೆ ಮಾರುಕಟ್ಟೆಗೆ ಲಭ್ಯವಾಗುತ್ತದೆ. ಇಂತಹ ಸಲಕರಣೆ ಮತ್ತು ನಿಯಂತ್ರಕಗಳ ತಾಂತ್ರಿಕ ಅಧ್ಯಯನವೇ ಇನ್‌ಸ್ಟ್ರುಮೆಂಟೇಶನ್ ಟೆಕ್ನಾಲಜಿ.

ಇನ್‌ಸ್ಟ್ರುಮೆಂಟೇಶನ್ ಟೆಕ್ನಾಲಜಿಯು ಎಂಜಿನಿಯರಿಂಗ್ ವಿಭಾಗದ ಸಂಕೀರ್ಣ ಹಾಗೂ ಆಧುನಿಕ ಶಾಖೆಗಳಲ್ಲಿ ಒಂದು. ಡಿಪ್ಲೊಮಾ 3 ವರ್ಷಗಳ ಕೋರ್ಸ್ ಆಗಿದ್ದು, ಪ್ರತ್ಯೇಕವಾಗಿ ಅಥವಾ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ಜೊತೆಗೆ ಅಧ್ಯಯನ ಮಾಡಬಹುದು. ಅಧ್ಯಯನವು ಮುಖ್ಯವಾಗಿ ವಿನ್ಯಾಸ, ಸಂರಚನೆ ಮತ್ತು ಸ್ವಯಂಚಾಲಿತ ವ್ಯವಸ್ಥೆಗಳ ಮೇಲೆ ಕೇಂದ್ರೀಕೃತವಾಗಿದೆ. ಇಂತಹ ಚಟುವಟಿಕೆಗಳಲ್ಲಿ ಭಾಗಿಯಾದ ವೃತ್ತಿಪರರನ್ನು ಇನ್‌ಸ್ಟ್ರುಮೆಂಟೇಶನ್ ಎಂಜಿನಿಯರ್ ಎಂದು ಕರೆಯಲಾಗುತ್ತದೆ.

ಇನ್‌ಸ್ಟ್ರುಮೆಂಟೇಶನ್ ಟೆಕ್ನಾಲಜಿ ಡಿಪ್ಲೊಮಾ ಕೋರ್ಸ್ ಅನ್ನು ಪ್ರಾರಂಭಿಕ ಹಂತದ ತಾಂತ್ರಿಕ ಅಭ್ಯರ್ಥಿಗಳಿಗಾಗಿ ರೂಪಿಸಲಾಗಿದೆ. ರಾಸಾಯನಿಕ ಸ್ಥಾವರಗಳು, ವಿದ್ಯುತ್ ಸ್ಥಾವರಗಳು, ತೈಲ ಸಂಸ್ಕರಣಾ ಘಟಕಗಳು, ದೇಶದಾದ್ಯಂತ ಜಾಲ ಹೊಂದಿರುವ ಪೈಪ್‌ಲೈನ್ ಕಂಪನಿಗಳಂತಹ ಸ್ಥಳಗಳಲ್ಲಿ ಕೆಲಸ ಮಾಡಲು ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತದೆ. ತರಬೇತಿ ಪಡೆದ ವಿದ್ಯಾರ್ಥಿಗಳು ಸಲಕರಣೆ ನಿರ್ವಹಣೆ ಮತ್ತು ಮಾರಾಟದಲ್ಲಿಯೂ ಕೆಲಸ ಮಾಡಬಹುದು.

ಪ್ರವೇಶಾರ್ಹತೆ: ಇನ್‌ಸ್ಟ್ರುಮೆಂಟೇಶನ್ ಟೆಕ್ನಾಲಜಿ ಡಿಪ್ಲೊಮಾ ಕೋರ್ಸ್ ಸೇರಲು 10ನೇ ತರಗತಿ ಉತ್ತೀರ್ಣರಾಗಿರಬೇಕು. ಪಿಯುಸಿ ಓದಿದ ಮತ್ತು ಓದುತ್ತಿರುವ ವಿದ್ಯಾರ್ಥಿಗಳೂ ಸಹ ಅರ್ಹರು. ಇದಕ್ಕೆ ಕನಿಷ್ಠ ವಯಸ್ಸಿನ ಮಿತಿ 15 ವರ್ಷಗಳು. ಅಲ್ಲದೇ ಈ ಕೋರ್ಸ್‌ಗೆ ಪ್ರವೇಶಕ್ಕಾಗಿ ಪ್ರವೇಶ ಪರೀಕ್ಷೆ ನಡೆಸಲಾಗುತ್ತದೆ. ಈ ಕ್ಷೇತ್ರದಲ್ಲಿ ಯಶಸ್ವಿಯಾಗಲು ಉತ್ತಮ ಸಂವಹನ ಕೌಶಲದ ಅಗತ್ಯವಿದೆ. ಬರವಣಿಗೆ ಮತ್ತು ಸಾರ್ವಜನಿಕ ಮಾತುಗಾರಿಕೆಯೂ ಅಗತ್ಯವಿದೆ.

ಕೋರ್ಸ್‌ನಲ್ಲಿ ಏನೇನಿರುತ್ತದೆ?

ಇನ್‌ಸ್ಟ್ರುಮೆಂಟೇಶನ್ ಟೆಕ್ನಾಲಜಿ ಡಿಪ್ಲೊಮಾ ಕೋರ್ಸ್‌ನಲ್ಲಿ ಗಣಿತ, ಅನ್ವಯಿಕ ವಿಜ್ಞಾನ ಮತ್ತು ತಂತ್ರಜ್ಞಾನದ ಅಧ್ಯಯನ ಇರುತ್ತವೆ. ಇವುಗಳ ಜೊತೆಗೆ ತಂತ್ರಜ್ಞಾನದ ತತ್ವಗಳು, ತಾಂತ್ರಿಕ ಭೌತಶಾಸ್ತ್ರ, ತಾಂತ್ರಿಕ ಗಣಿತ, ಮೂಲ ಎಲೆಕ್ಟ್ರಾನಿಕ್ಸ್, ಡಿಜಿಟಲ್ ಮೈಕ್ರೊಪ್ರೊಸೆಸರ್ ಸಿಸ್ಟಮ್ಸ್, ವಿದ್ಯುತ್ ಸರ್ಕ್ಯೂಟ್, ಇನ್‌ಸ್ಟ್ರುಮೆಂಟೇಶನ್ ಎಲೆಕ್ಟ್ರಾನಿಕ್, ನಿಯಂತ್ರಣ ಪ್ರಕ್ರಿಯೆಗಳನ್ನು ಸಹ ಕಲಿಸಲಾಗುತ್ತದೆ. ಸೈದ್ಧಾಂತಿಕ ಜ್ಞಾನದ ಜೊತೆಗೆ ಪ್ರಾಯೋಗಿಕ ತರಬೇತಿ ನೀಡಲಾಗುತ್ತದೆ.

ಉನ್ನತ ವ್ಯಾಸಂಗದ ಅವಕಾಶಗಳು

ಇನ್‌ಸ್ಟ್ರುಮೆಂಟೇಶನ್ ಟೆಕ್ನಾಲಜಿ ಡಿಪ್ಲೊಮಾ ಕೋರ್ಸ್ ನಂತರ ಉನ್ನತ ವ್ಯಾಸಂಗದ ಆಸಕ್ತಿ ಇರುವವರು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಬಿ.ಇ/ ಬಿ.ಟೆಕ್ ಮತ್ತು ಎಂ.ಟೆಕ್‌ಗಳನ್ನೂ ಮಾಡಬಹುದು. ಸಂಶೋಧನಾ ಕ್ಷೇತ್ರದಲ್ಲಿ ಆಸಕ್ತಿ ಇರುವವರು ಸ್ನಾತಕೋತ್ತರ ಅಧ್ಯಯನದ ನಂತರ ಪಿಎಚ್‌ಡಿ ಮಾಡಬಹುದು. ಅಲ್ಲದೇ ಕೆಲವು ಅಸೋಸಿಯೇಟ್ ಮೆಂಬರ್‌ಶಿಪ್ ಎಲೆಕ್ಟ್ರಾನಿಕ್ ಕೋರ್ಸ್‌ಗಳು ಸಹ ಲಭ್ಯ ಇವೆ. ಇವು ವಿಶ್ವವಿದ್ಯಾಲಯಗಳು ಒದಗಿಸುವ ಬಿ.ಇ/ ಬಿ.ಟೆಕ್‌ಗೆ ತತ್ಸಮಾನವಾಗಿವೆ.

ಕೋರ್ಸ್ ಇರುವ ಕೆಲವು ಕಾಲೇಜುಗಳು
- ದಯಾನಂದ ಸಾಗರ್ ಎಂಜಿನಿಯರಿಂಗ್ ಕಾಲೇಜ್, ಬೆಂಗಳೂರು
- ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಣಿಪಾಲ್
- ಆರ್.ವಿ. ಎಂಜಿನಿಯರಿಂಗ್ ಕಾಲೇಜ್, ಬೆಂಗಳೂರು
- ಬಿ.ಎಂ.ಎಸ್. ಎಂಜಿನಿಯರಿಂಗ್ ಕಾಲೇಜ್, ಬೆಂಗಳೂರು
- ಜೆ.ಎಸ್.ಎಸ್. ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ, ಮೈಸೂರು
- ಸಿದ್ದಗಂಗಾ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ, ತುಮಕೂರು.
- ಬಾಪೂಜಿ ತಾಂತ್ರಿಕ ಮತ್ತು ಎಂಜಿನಿಯರಿಂಗ್ ಕಾಲೇಜ್, ದಾವಣಗೆರೆ
- ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ

ಉದ್ಯೋಗದ ಅವಕಾಶಗಳು

ಇನ್‌ಸ್ಟ್ರುಮೆಂಟೇಶನ್ ಟೆಕ್ನಾಲಜಿ ಡಿಪ್ಲೊಮಾ ನಂತರ ಅಭ್ಯರ್ಥಿಗಳಿಗೆ ಹಲವಾರು ಉದ್ಯೋಗ ಅವಕಾಶಗಳಿವೆ. ವಿದ್ಯುತ್, ಎಲೆಕ್ಟ್ರಾನಿಕ್ಸ್ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಈ ಕೋರ್ಸ್ ಮಾಡಿದವರಿಗೆ ಬೇಡಿಕೆ ಇದೆ. ಅಲ್ಲದೇ ಸ್ವಯಂಚಾಲಿತ ಪ್ರಕ್ರಿಯೆ ಇರುವ ಕೈಗಾರಿಕೆಗಳಲ್ಲೂ ಉದ್ಯೋಗದ ಅವಕಾಶಗಳಿವೆ. ಉಪಕರಣ ಉತ್ಪಾದನೆ ಮತ್ತು ನಿರ್ವಹಣೆಯೊಂದಿಗೆ ವ್ಯವಹರಿಸುವ ವಿವಿಧ ಕಂಪನಿಗಳು ಡಿಪ್ಲೊಮಾ ಹೊಂದಿದವರನ್ನು ನೇಮಿಸಿಕೊಳ್ಳುತ್ತವೆ. ನಿರ್ವಹಣೆ ಕ್ಷೇತ್ರದಲ್ಲಿ ಸ್ವಯಂ ಉದ್ಯೋಗದ ವಿಪುಲ ಅವಕಾಶಗಳಿವೆ. ಟಿಂಬರ್ ಅಂಡ್ ಪೇಪರ್, ಗಣಿಗಾರಿಕೆ, ಧಾನ್ಯ ಸಂಸ್ಕರಣೆ, ಪರಮಾಣು ಮತ್ತು ಉಷ್ಣ ಉತ್ಪಾದನೆ, ಬಯೋಮೆಡಿಕಲ್ ಮುಂತಾದ ಕಡೆಗಳಲ್ಲೂ ಉದ್ಯೋಗ ಲಭ್ಯ. ವೇತನ ಪ್ರಮಾಣವು ಅಭ್ಯರ್ಥಿಯ ಕೌಶಲವನ್ನು ಅವಲಂಬಿಸಿರುತ್ತದೆ.

ಉದ್ಯೋಗದಾತರು: ಪೆಟ್ರೋ ಕೆಮಿಕಲ್ ಉದ್ಯಮ, ದೊಡ್ಡ ಪ್ರಮಾಣದ ಉತ್ಪಾದನಾ ಕೈಗಾರಿಕೆಗಳು, ಐಟಿ ಕಂಪನಿಗಳು, ಆರ್ ಅಂಡ್ ಡಿ ಸಂಸ್ಥೆಗಳು, ಉಷ್ಣ ವಿದ್ಯುತ್ ಕೇಂದ್ರಗಳು, ಉಕ್ಕಿನ ಸ್ಥಾವರಗಳು, ಸಂಸ್ಕರಣಾಗಾರಗಳು, ಸಿಮೆಂಟ್ ಮತ್ತು ರಸಗೊಬ್ಬರ ಕೈಗಾರಿಕೆಗಳು, ಶಿಕ್ಷಣ ಸಂಸ್ಥೆಗಳು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಂಖ್ಯಾಶಾಸ್ತ್ರ (ಮುಂದುವರಿದ ಭಾಗ)

ಗಣಿತ | ಎಸ್ಸೆಸ್ಸೆಲ್ಸಿ

ಉದಾಹರಣೆ: ಒಂದು ವಿದ್ಯಾರ್ಥಿಗಳ ತಂಡವು ಜನವಸತಿ ಪ್ರದೇಶವೊಂದರ 20 ಕುಟುಂಬಗಳ ಸಮೀಕ್ಷೆ ನಡೆಸಿತು. ಇದರಂತೆ ಒಂದು ಕುಟುಂಬದಲ್ಲಿರುವ ಸದಸ್ಯರ ಸಂಖ್ಯೆಯನ್ನು ಈ ಕೆಳಗಿನ ಆವೃತ್ತಿ ಕೋಷ್ಟಕವು ತಿಳಿಸುತ್ತದೆ.

ಕುಟುಂಬದ ಗಾತ್ರ	1–3	3–5	5–7	7–9	9–11
ಕುಟುಂಬದ ಸಂಖ್ಯೆ	7	8	2	2	1

ಪರಿಹಾರ: ಇಲ್ಲಿ ಗರಿಷ್ಠ ಆವೃತ್ತಿಯು 8 ಆಗಿದ್ದು, ಇದಕ್ಕೆ ಅನುಗುಣವಾಗಿ 3-5 ಆಗಿದೆ. ಆದ್ದರಿಂದ ಬಹುಲಕವಿರುವ ವರ್ಗಾಂತರವು 3-5 ಆಗಿದೆ.
ಬಹುಲಕವಿರುವ ವರ್ಗಾಂತರದ ಕೆಳಮಿತಿ $l = 3$
ವರ್ಗಾಂತರದ ಗಾತ್ರ $h = 2$
ಬಹುಲಕವಿರುವ ವರ್ಗಾಂತರದ ಆವೃತ್ತಿ $f_1 = 8$

ಬಹುಲಕವಿರುವ ವರ್ಗಾಂತರದ ವರ್ಗಾಂತರದ ಮುಂದಿನ ಆವೃತ್ತಿ $f_2 = 2$

$$\text{ಬಹುಲಕ} = l + \left[\frac{f_1 - f_0}{2f_1 - f_0 - f_2}\right] \times h$$

$$= 3 + \left[\frac{8-7}{2\times8-7-2}\right] \times 2$$

$$= 3 + \frac{2}{7}$$

$$= 3.286$$

ವರ್ಗೀಕೃತ ದತ್ತಾಂಶಗಳ ಮಧ್ಯಾಂಕ

ಮಧ್ಯಾಂಕವು ಕೇಂದ್ರೀಯ ಪ್ರವೃತ್ತಿಯ ಒಂದು ಅಳತೆಯಾಗಿದ್ದು, ದತ್ತಾಂಶದಲ್ಲಿ ಅತ್ಯಂತ ಮಧ್ಯದಲ್ಲಿರುವ ಪ್ರಾಪ್ತಾಂಕವಾಗಿದೆ. ಅವರ್ಗೀಕೃತ ದತ್ತಾಂಶಗಳ ಮಧ್ಯಾಂಕವನ್ನು ಕಂಡುಹಿಡಿಯಲು ಪ್ರಾಪ್ತಾಂಕಗಳನ್ನು ಮೊದಲಾಗಿ ಏರಿಕೆ ಕ್ರಮದಲ್ಲಿ ಬರೆಯುತ್ತೇವೆ.

ಈಗ n ಬೆಸ ಸಂಖ್ಯೆ ಆದಾಗ ಮಧ್ಯಾಂಕವು $\left(\frac{n+1}{2}\right)$ ನೇ ಪ್ರಾಪ್ತಾಂಕವಾಗಿರುತ್ತದೆ. n ಮತ್ತು ಸಮಸಂಖ್ಯೆ ಆದಾಗ ಮಧ್ಯಾಂಕವು $\left(\frac{n}{2}\right)$ ನೇ ಮತ್ತು $\left(\frac{n}{2}+1\right)$ ನೇ ಪ್ರಾಪ್ತಾಂಕಗಳ ಸರಾಸರಿಯಾಗಿರುತ್ತದೆ.

ಉದಾಹರಣೆ: ಒಂದು ಪರೀಕ್ಷೆಯಲ್ಲಿ 100 ವಿದ್ಯಾರ್ಥಿಗಳು 50 ಅಂಕಗಳಿಗೆ ಪಡೆದ ಅಂಕಗಳನ್ನು ನೀಡುವ ಕೆಳಗಿನ ದತ್ತಾಂಶಗಳ ಮಧ್ಯಾಂಕವನ್ನು ಕಂಡುಹಿಡಿಯಬೇಕಾಗಿದೆ.

ಪಡೆದ ಅಂಕಗಳು	20	29	28	33	42	38	43	25
ವಿದ್ಯಾರ್ಥಿಗಳ ಸಂಖ್ಯೆ	6	28	24	15	2	4	1	20

ಪರಿಹಾರ: ಅಂಕಗಳನ್ನು ಏರಿಕೆ ಕ್ರಮದಲ್ಲಿ ಬರೆದು ಸಂಚಿತ ಆವೃತ್ತಿ ಸೇರಿಸಿ ಬರೆದರೆ

ಪಡೆದ ಅಂಕಗಳು	ವಿದ್ಯಾರ್ಥಿಗಳ ಸಂಖ್ಯೆ	ಸಂಚಿತ ಆವೃತ್ತಿ
20	6	6
25	20	26
28	24	50
29	28	78
33	15	93
38	4	97
48	2	99
43	1	100

ಮೇಲಿನ ಕೋಷ್ಟಕದಿಂದ
50ನೇ ಪ್ರಾಪ್ತಾಂಕವು 28
50ನೇ ಪ್ರಾಪ್ತಾಂಕವು 29

$$\text{ಮಧ್ಯಾಂಕವು} = \frac{28+29}{2} = 28.5$$

ಈ ವರ್ಗಾಂತರವನ್ನು ಕಂಡುಹಿಡಿಯಲು ನಾವು ಎಲ್ಲಾ ವರ್ಗಾಂತರಗಳ ಸಂಚಿತ ಆವೃತ್ತಿಗಳನ್ನು ಮತ್ತು $\frac{n}{2}$ ಅನ್ನು ಕಂಡುಹಿಡಿಯುತ್ತೇವೆ. ಈಗ ನಾವು $\frac{n}{2}$ ಗಿಂತ ದೊಡ್ಡದಾದ ಸಂಚಿತ ಆವೃತ್ತಿಯ ವರ್ಗಾಂತರವನ್ನು ಗುರುತಿಸುತ್ತೇವೆ. ಈ ವರ್ಗಾಂತರವನ್ನು ಮಧ್ಯಾಂಕವಿರುವ ವರ್ಗಾಂತರ ಎನ್ನುತ್ತೇವೆ.

ಮೇಲಿನ ವಿತರಣೆಯಲ್ಲಿ $n = 53$ ಆದ್ದರಿಂದ $\frac{n}{2}$ 26.5 ಈಗ 60-70 ವರ್ಗಾಂತರದ ಸಂಚಿತ ಆವೃತ್ತಿಯು 29 ಇದು $\frac{n}{2}$ ಅಂದರೆ 26.5 ಕ್ಕಿಂತ ಹೆಚ್ಚಾಗಿದೆ. ಆದ್ದರಿಂದ 60-70 ಎಂಬುದು ಮಧ್ಯಾಂಕವಿರುವ ವರ್ಗಾಂತರವಾಗಿದೆ.


ಮಧ್ಯಾಂಕವಿರುವ ವರ್ಗಾಂತರವನ್ನು ಕಂಡುಹಿಡಿದ ನಂತರ ನಾವು ಮಧ್ಯಾಂಕವನ್ನು ಲೆಕ್ಕಿಸಲು ಕೆಳಗಿನ ಸೂತ್ರವನ್ನು ಉಪಯೋಗಿಸುತ್ತೇವೆ.

$$= l + \left(\frac{\frac{n}{2} - cf}{f}\right) \times h$$

l = ಮಧ್ಯಾಂಕವಿರುವ ವರ್ಗಾಂಗರದ ಕೆಳಮಿತಿ
n = ಪ್ರಾಪ್ತಾಂಕಗಳ ಸಂಖ್ಯೆ
cf = ಮಧ್ಯಾಂಕವಿರುವ ವರ್ಗಾಂತರದ ಆವೃತ್ತಿ
h = ವರ್ಗಾಂತರದ ಗಾತ್ರ

ವಿಭಜನ ಸೂತ್ರ

ಗಣಿತ | ದ್ವಿತೀಯ ಪಿಯುಸಿ



O ಮೂಲ ಬಿಂದುವಿನ ಸಂಬಂಧಿಸಿದಂತೆ P ಮತ್ತು Q ಎರಡು ಬಿಂದುಗಳಾಗಿದ್ದು ಅವುಗಳ ಸ್ಥಾನ ಸದಿಶಗಳು ಕ್ರಮವಾಗಿ $\vec{OP}$ ಮತ್ತು $\vec{OQ}$ ಆಗಿರಲಿ P ಮತ್ತು Q ಬಿಂದುಗಳನ್ನು ಸೇರಿಸುವ ಸರಳ ರೇಖಾಖಂಡ PQ ವನ್ನು ಮೂರನೇ ಬಿಂದುವಾದ R ನಿಂದ ನಾವು ಎರಡು ರೀತಿಯಲ್ಲಿ ವಿಭಜಿಸಬಹುದು. ಒಳವಿಭಜನೆ ಮತ್ತು ಹೊರ ವಿಭಜನೆ ಇಲ್ಲಿ R ನ ಸ್ಥಾನ ಕಂಡುಹಿಡಿಯುವುದು ಆಗಿರಲಿ.

ನಿದರ್ಶನ (1): R ಬಿಂದುವು PQ ರೇಖೆಯನ್ನು ಒಳವಿಭಜನೆ ಮಾಡಿದಾಗ R ಬಿಂದುವು $\vec{OP}$ವನ್ನು $m\vec{RQ} = n\vec{PQ}$ ರೀತಿಯಲ್ಲಿ ವಿಭಜಿಸಿದರೆ m ಮತ್ತು n ಧನಾತ್ಮಕ ಆದಿಶಗಳಾದರೆ

$RQ = \vec{OQ} - \vec{OR} = \vec{b} - \vec{r}, PR = \vec{OR} - \vec{OP} = \vec{r} - \vec{a}$ ಸಿಗುತ್ತದೆ

ಹಾಗಾಗಿ $m\left(\vec{b} - \vec{r}\right) = n\left(\vec{r} - \vec{a}\right)$

$$\vec{r} = \frac{mb + nb}{m + n}$$

ನಿದರ್ಶನ (2): R ಬಿಂದುವು PQ ರೇಖೆಯನ್ನು m:n ಅನುಪಾತದಲ್ಲಿ ಹೊರಗಡೆಯಿಂದ ವಿಭಜಿಸಿದಾಗ ಬಿಂದುವಿನ ಸ್ಥಾನ ಸದಿಶವು $o\vec{r} = \frac{m\vec{b} - n\vec{b}}{m-n}$ ಆಗುವುದು. R ಬಿಂದುವು PQ ಸದಿಶದ ಮಧ್ಯಬಿಂದುವಾದಾಗ m = n ಆಗುತ್ತದೆ. ಆದ್ದರಿಂದ ನಿಯಮ ಪ್ರಕಾರ $\vec{PQ}$ ಸದಿಶದ ಮಧ್ಯಬಿಂದು R ನ ಸ್ಥಾನ ಸದಿಶ $o\vec{R} = \frac{a+b}{2}$ ಆಗುವುದು.

ಎರಡು ಸದಿಶಗಳ ಗುಣಲಬ್ಧ


ಸದಿಶಗಳ ಗುಣಲಬ್ಧವನ್ನು ಎರಡು ರೀತಿಯಲ್ಲಿ ವ್ಯಾಖ್ಯಾನಿಸಬಹುದು. ಅದಿಶ ಗುಣಲಬ್ಧದಲ್ಲಿ ಉಂಟಾಗುವ ಗುಣಮಲಬ್ಧವು ಅದಿಶವಾಗಿರುತ್ತದೆ. ಸದಿಶ ಗುಣಲಬ್ಧದಲ್ಲಿ ಉಂಟಾಗುವ ಗುಣಲಬ್ಧವು ಸದಿಶವಾಗಿರುತ್ತದೆ.

ಎರಡು ಸದಿಶಗಳ ಅದಿಶ ಗುಣಲಬ್ಧ

ಎರಡು ಶೂನ್ಯವಲ್ಲದ ಸದಿಶಗಳಾದ $\vec{a}$ ಮತ್ತು $\vec{b}$ ಅದಿಶ ಗುಣಲಬ್ಧವನ್ನು $\vec{a}.\vec{b}$ ಎಂದು ನಮೂದಿಸಲಾಗುತ್ತದೆ.

$\vec{a}.\vec{b} = |\vec{a}||\vec{b}|\cos\theta$ ಎಂದು ವ್ಯಾಖ್ಯಾನಿಸಲಾಗುತ್ತದೆ.

$\vec{a}$ ಮತ್ತು $\vec{b}$ ಗಳ ನಡುವಿನ ಕೋನ ಮತ್ತು $0 \le \theta \le \pi$
ಈಗ $\vec{a} = \vec{0}$ ಅಥವಾ $\vec{b} = \vec{0}$ ಆದಾಗ θ ಕೋನವುಂಟಾಗುವುದಿಲ್ಲ. ಆಗ $\vec{a}.\vec{b} = 0$



ಅವಲೋಕನ

* $\vec{a}.\vec{b}$ ಒಂದು ವಾಸ್ತವ ಸಂಖ್ಯೆ
* $\vec{a}$ ಮತ್ತು $\vec{b}$ ಶೂನ್ಯ ಸದಿಶವಾಗಿದ್ದಾಗ, $\vec{a}.\vec{b} = 0$ ಆಗಿದ್ದರೆ $\vec{a}$ ಮತ್ತು $\vec{b}$ ಒಂದಕ್ಕೊಂದು ಲಂಬವಾಗಿರುತ್ತದೆ.
* $\theta = 0$ ಆದಾಗ $\vec{a}.\vec{b} = |\vec{a}||\vec{b}|$ ನಿರ್ದಿಷ್ಟವಾಗಿ, $\vec{a}.\vec{a} = |\vec{a}|^2$
* $\theta = \pi$ ಆದಾಗ $\vec{a}.\vec{b} = -|\vec{a}||\vec{b}|$ ನಿರ್ದಿಷ್ಟವಾಗಿ $\vec{a}.(-\vec{a}) = -|\vec{a}|^2$
* $\hat{i}, \hat{j}$ ಮತ್ತು $\hat{k}$ ಪರಸ್ಪರ ಲಂಬವಾಗಿರುವ ಏಕ ಸದಿಶಗಳಿಗೆ

$$\hat{i}.\hat{i} = \hat{j}.\hat{j} = \hat{k}.\hat{k} = 1$$

$$\hat{i}.\hat{j} = \hat{j}.\hat{k} = \hat{k}.\hat{i} = 0$$

*ಸದಿಶ $\vec{a}$ ಮತ್ತು $\vec{b}$ ಗಳ ನಡುವಿನ ಕೋನವನ್ನು $\theta = \cos^{-1}\left(\frac{\vec{a}.\vec{b}}{|\vec{a}||\vec{b}|}\right)$

*ಅದಿಶಗಳ ಗುಣಲಬ್ಧವು ಪರಿವರ್ತನೀಯ $\vec{a}.\vec{b} = \vec{b}.\vec{a}$

ಸದಿಶಗಳ ಅದಿಶ ಗುಣಲಬ್ಧದ ಎರಡು ಮುಖ್ಯಗುಣಗಳು

ಲಕ್ಷಣ 1. $\vec{a}, \vec{b}$ ಮತ್ತು $\vec{c}$ ಮೂರು ಸದಿಶಗಳಾಗಿದ್ದು $\vec{a}.(\vec{b} + \vec{c}) = \vec{a}.\vec{b} + \vec{a}.\vec{c}$

ಲಕ್ಷಣ 2: $\vec{a}$ ಮತ್ತು $\vec{b}$ ಎರಡು ಸದಿಶಗಳಾಗಿದ್ದು x ಯಾವುದೇ ಅದಿಶವಾದಾಗ $(\lambda\vec{a}).\vec{b} = \lambda(\vec{a}.\vec{b}) = \vec{a}.(\lambda\vec{b})$

$\vec{a}$ ಮತ್ತು $\vec{b}$ ಸದಿಶಗಳನ್ನು ಘಟಕಗಳ ರೀತಿಯಲ್ಲಿ ನೀಡಿದಾಗ $\vec{a} = a_1\hat{i} + a_2\hat{j} + a_3\hat{k}$ ಮತ್ತು $\vec{b} = b_1\hat{i} + b_2\hat{j} + b_3\hat{k}$

ಆದಾಗ ಅದಿಶ ಗುಣಲಬ್ಧ

$$\vec{a}.\vec{b} = \left(a_1\hat{i} + a_2\hat{j} + a_3\hat{k}\right).\left(b_1\hat{i} + b_2\hat{j} + b_3\hat{k}\right)$$

$$\vec{a}.\vec{b} = a_1b_1 + a_2b_2 + a_3b_3$$

ಉದಾಹರಣೆ: $\vec{a} = \hat{i} + \hat{j} - \hat{k}$ ಮತ್ತು $\vec{b} = \hat{i} - \hat{j} + \hat{k}$ ಆದಾಗ $\vec{a}$ ಮತ್ತು $\vec{b}$ ಸದಿಶಗಳ ನಡುವಿನ ಕೋನ θ ಅನ್ನು ಕಂಡು ಹಿಡಿಯಿರಿ

ಪರಿಹಾರ: $\vec{a}$ ಮತ್ತು $\vec{b}$ ನಡುವಿನ ಕೋನ θ ಆಗಿದ್ದಲ್ಲಿ

$\vec{a}.\vec{b} = 1 - 1 - 1 = -1$

$$\cos\theta = \frac{\vec{a}.\vec{b}}{|\vec{a}||\vec{b}|} = \frac{-1}{3}$$

$$\theta = \cos^{-1}\left(\frac{-1}{3}\right)$$

ಉದಾಹರಣೆ: $\vec{a}$ ಒಂದು ಏಕ ಸದಿಶವಾಗಿದ್ದರೆ ಮತ್ತು $(\vec{x} - \vec{a}).((\vec{x} + \vec{a}) = 8$ ಆಗಿದ್ದರೆ $(\vec{x}+)$ ನ ಬೆಲೆಯನ್ನು ಕಂಡು ಹಿಡಿಯಿರಿ

ಪರಿಹಾರ: $\vec{a}$ ಏಕ ಸದಿಶವಾಗಿರುವುದರಿಂದ $|\vec{a}| = 1$

$$(\vec{x} - \vec{a}).((\vec{x} + \vec{a}) = 8$$

$$\vec{x}.\vec{x} + \vec{a}.\vec{x} - \vec{a}.\vec{x} - \vec{a}.\vec{a} = 8$$

$$|\vec{x}|^2 - |\vec{a}|^2 = 8$$

$$|\vec{x}|^2 - 1 = 8$$

$$|\vec{x}|^2 = 9$$

$$|\vec{x}| = 3$$

ಉದಾಹರಣೆ: $\vec{a} = 5\hat{i} - \hat{j} - 3k, \vec{b} = \hat{i} + 3\hat{j} + 5\hat{k}$ ಆದಾಗ $\vec{a} + \vec{b}$ ಮತ್ತು $\vec{a} - \vec{b}$ ಪರಸ್ಪರ ಲಂಬವಾಗಿರುತ್ತದೆಂದು ತೋರಿಸಿ.

ಪರಿಹಾರ:

$$\vec{a} + \vec{b} = (5\hat{i} - \hat{j} - 3\hat{k}) + (\hat{i} + 3\hat{j} + 5\hat{k}) = 6\hat{i} + 2\hat{j} - 8\hat{k}$$

$$\vec{a} - \vec{b} = (5\hat{i} - \hat{j} - 3\hat{k}) - (\hat{i} + 3\hat{j} - 5\hat{k}) = 4\hat{i} - 4\hat{j} + 2\hat{k}$$

ನಮಗೆ ತಿಳಿದಂತೆ ಎರಡು ಶೂನ್ಯವಲ್ಲದ ಸದಿಶಗಳು ಪರಸ್ಪರ ಲಂಬವಾದಾಗ ಅವುಗಳ ಅದಿಶ ಗುಣಲಬ್ಧವು ಶೂನ್ಯ ಆಗುತ್ತದೆ.

$$(\vec{a} + \vec{b}), (\vec{a} - \vec{b}) = (6\hat{i} + 2\hat{j} - 8\hat{k}), (4\hat{i} - 4\hat{j} + 2\hat{k})$$
$$= 24 - 8 - 16 - 0$$

ಆದ್ದರಿಂದ $\vec{a} + \vec{b}$ ಮತ್ತು $\vec{a} - \vec{b}$ ಮತ್ತು ಪರಸ್ಪರ ಲಂಬವಾಗಿರುತ್ತದೆ.

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ಸಾಲಿಡ್ ಸ್ಟೇಟ್' ಇಂಗ್ಲಿಷ್ ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ https://bit.ly/2RTR97C



❦ ಸುಭಾಷಿತ ❦

ನಿಮ್ಮಲ್ಲಿರುವ ಪ್ರತಿಭೆಯು ಸ್ವಾಭಾವಿಕವಾಗಿ ಬಂದಿರುವಂಥದ್ದು. ಆದರೆ, ಕೌಶಲವನ್ನು ಗಂಟೆಗಟ್ಟಲೆ ಕೆಲಸ ಮಾಡುವ ಮೂಲಕವಷ್ಟೇ ದಕ್ಕಿಸಿಕೊಳ್ಳಲು ಸಾಧ್ಯ.

-ಉಸೇನ್ ಬೋಲ್ಟ್

ಚುನಾವಣೆ ಪ್ರಚಾರ: ಮಾರ್ಗಸೂಚಿ ಪದೇ ಪದೇ ಉಲ್ಲಂಘನೆ ಅಕ್ಷಮ್ಯ

ಈ ತಿಂಗಳ 27ರಂದು ರಾಜ್ಯದ ಕೆಲವು ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಯಲಿದೆ. ಬಳ್ಳಾರಿ ಮಹಾನಗರ ಪಾಲಿಕೆ, 5 ನಗರಸಭೆಗಳು, ತಲಾ ಎರಡು ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳು ಚುನಾವಣೆ ಎದುರಿಸಲಿವೆ. ಎರಡು ವಿಧಾನಸಭಾ ಕ್ಷೇತ್ರಗಳು ಮತ್ತು ಒಂದು ಲೋಕಸಭಾ ಕ್ಷೇತ್ರಕ್ಕೆ ಕೊರೊನಾ ಅಬ್ಬರದ ನಡುವೆ ಈಚೆಗಷ್ಟೇ ಉಪಚುನಾವಣೆ ನಡೆದಿದೆ. ಉಪಚುನಾವಣೆಯ ನಂತರ, ರಾಜ್ಯದಲ್ಲಿ ಕೊರೊನಾ ವೈರಸ್ ಸೋಂಕಿತರ ಸಂಖ್ಯೆಯಲ್ಲಿ ಹೆಚ್ಚಳವಾಗಿರುವುದು ಎಲ್ಲರ ಗಮನಕ್ಕೂ ಬಂದಿದೆ. ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ನಡೆದ ವಿಧಾನಸಭೆ ಚುನಾವಣೆಗಳೂ ದೇಶದಲ್ಲಿ ಕೊರೊನಾ ವೈರಸ್ ಹರಡುವಿಕೆ ವೇಗ ಹೆಚ್ಚಳಕ್ಕೆ ಕಾರಣವಾಗಿವೆ ಎಂದು ವಿಶ್ಲೇಷಿಸಲಾಗುತ್ತಿದೆ. ದೇಶದ ಪ್ರಧಾನಿಯೂ ಸೇರಿ ಎಲ್ಲ ರಾಜಕೀಯ ಪಕ್ಷಗಳ ಮುಖಂಡರು ಚುನಾವಣಾ ರ್‍ಯಾಲಿಗಳನ್ನು ನಡೆಸಿ ಕೋವಿಡ್ ತಡೆ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿ ಕಾಣಿಸಿದೆ. ರಾಜಕಾರಣಿಗಳ ಈ ನಡೆಯು ಅಷ್ಟರ ಮಟ್ಟಿಗೆ ಬೇಜವಾಬ್ದಾರಿತನದ್ದು. ಈಗಂತೂ ರೋಗಿಗಳಿಗೆ ಆಸ್ಪತ್ರೆಗಳಲ್ಲಿ ಹಾಸಿಗೆ ಸಿಗುತ್ತಿಲ್ಲ, ವೈದ್ಯಕೀಯ ಆಮ್ಲಜನಕದ ಕೊರತೆ ವಿಪರೀತಕ್ಕೆ ಹೋಗಿದೆ. ಆಮ್ಲಜನಕ ಸಿಗದೆ ಕೋವಿಡ್ ಬಾಧಿತರು ಸಾಯುತ್ತಿದ್ದಾರೆ. ಕೋವಿಡ್–19 ರೋಗಿಗಳಿಗೆ ನೀಡುವ ರೆಮ್‌ಡಿಸಿವಿರ್ ಚುಚ್ಚುಮದ್ದು ಕೂಡಾ ಅಗತ್ಯ ಪ್ರಮಾಣದಲ್ಲಿ ಲಭ್ಯವಿಲ್ಲ. ಬೆಂಗಳೂರಿನಂತಹ ಮಹಾನಗರದಲ್ಲಿ ಅಂತ್ಯ ಸಂಸ್ಕಾರಕ್ಕೂ ಜನರು ಪರದಾಡುವಂತಾಗಿದೆ. ವಾರಾಂತ್ಯದ ಎರಡು ದಿನ ಕರ್ಫ್ಯೂ ವಿಧಿಸಲಾಗಿದೆ. ಜನರು ಮನೆಯಿಂದ ಹೊರಗೆ ಬರಬಾರದು ಎಂದು ಸರ್ಕಾರ ಮನವಿ ಮಾಡಿಕೊಳ್ಳುತ್ತಿದೆ. ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದೇ ಇದ್ದರೆ ಕೊರೊನಾ ವೈರಸ್ ಹರಡುವಿಕೆ ಇನ್ನೂ ಹೆಚ್ಚು ವೇಗ ಪಡೆಯಬಹುದು ಎಂದು ತಜ್ಞರು ಎಚ್ಚರಿಸುತ್ತಲೇ ಇದ್ದಾರೆ. ಆದರೆ, ಮತಬೇಟೆಯಲ್ಲಿ ತೊಡಗಿದ ನಮ್ಮ ರಾಜಕಾರಣಿಗಳಿಗೆ ಈ ಎಚ್ಚರಿಕೆ ನಾಟುತ್ತಿಲ್ಲ. ನಾಯಕರ ಈ ನಡೆ ಪ್ರಜೆಗಳಿಗೆ ಕಂಟಕವಾಗಿ ಪರಿಣಮಿಸಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯುವ ಪ್ರದೇಶಗಳಲ್ಲಿ ಕೊರೊನಾ ತಡೆ ಮಾರ್ಗಸೂಚಿಯನ್ನು ಗಾಳಿಗೆ ತೂರಲಾಗಿತ್ತು. ಕಾರ್ಯಕರ್ತರು ಗುಂಪುಗೂಡಿ ಪ್ರಚಾರ ಕಾರ್ಯದಲ್ಲಿ ತೊಡಗಿದ್ದರು. ಈ ಚುನಾವಣೆಗಳನ್ನು ಮುಂದೂಡಬಹುದಿತ್ತು. ಆದರೆ ಚುನಾವಣಾ ಆಯೋಗ ಅದಕ್ಕೆ ಮನಸ್ಸು ಮಾಡಲಿಲ್ಲ. ಚುನಾವಣೆ ಮುಂದೂಡದೇ ಇದ್ದರೂ ಕೊರೊನಾ ತಡೆ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ಮಾಡಬಹುದಿತ್ತು. ಅದೂ ಆಗಿಲ್ಲ. ಮಾರ್ಗಸೂಚಿಯನ್ನು ಉಲ್ಲಂಘಿಸುವ ರಾಜಕಾರಣಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿ ಎಂದು ರಾಜ್ಯ ಹೈಕೋರ್ಟ್ ಆದೇಶಿಸಿದ್ದರೂ ಅದರ ಪಾಲನೆಯಾಗಿಲ್ಲ. ಕಠಿಣ ಕ್ರಮ ತೆಗೆದುಕೊಳ್ಳದಿರುವುದೇ ರಾಜಕಾರಣಿಗಳು ಮೇರೆ ಮೀರುವುದಕ್ಕೆ ಕಾರಣವಾಗಿದೆ. ವಿಧಾನಸಭಾ ಚುನಾವಣೆಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಒಂದರ ಹಿಂದೆ ಒಂದರಂತೆ ಚುನಾವಣಾ ಪ್ರಚಾರ ಸಭೆಗಳನ್ನು ನಡೆಸಿದ್ದು, ಉಪಚುನಾವಣೆಗಳಲ್ಲಿ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಕ್ಷೇತ್ರದಲ್ಲಿ ಬೀಡುಬಿಟ್ಟು ಪ್ರಚಾರ ಕೈಗೊಂಡದ್ದು ಹೊಣೆ ಅರಿತ ನಾಯಕರ ನಡೆಯಲ್ಲ. ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲಾ ಎನ್ನುವ ಹಾಗೆ ರಾಜ್ಯದ ಸಚಿವರು ಸ್ಥಳೀಯ ಸಂಸ್ಥೆಗಳ ಚುನಾವಣೆ ಸಂದರ್ಭದಲ್ಲಿ ಜೋರು ಪ್ರಚಾರ ನಡೆಸಿದರು. ಕೆಲವು ಕಡೆ ಜನರೇ ಪ್ರಚಾರಕ್ಕೆ ಕಡಿವಾಣ ಹಾಕಿದ್ದಾರೆ. 'ನಮ್ಮ ಬಡಾವಣೆಗೆ, ನಮ್ಮ ಮನೆಗೆ ಪ್ರಚಾರಕ್ಕೆ ಯಾರೂ ಬರುವುದು ಬೇಡ' ಎಂಬ ಫಲಕವನ್ನು ಹಾಕಿದ್ದಾರೆ. ಅಷ್ಟಾದರೂ ನಮ್ಮ ರಾಜಕಾರಣಿಗಳಿಗೆ ಬುದ್ಧಿ ಬಂದಿಲ್ಲ. ಎಂತಹ ಬಿಕ್ಕಟ್ಟಿನ ಸಂದರ್ಭದಲ್ಲೂ ಅವರಿಗೆ ಅಧಿಕಾರ ಪಡೆಯುವುದೇ ಮುಖ್ಯವಾದಂತೆ ಇದೆ. ಇದು ನಾಚಿಕೆಗೇಡಿನ ಸಂಗತಿ. ಜನಪ್ರತಿನಿಧಿಗಳಿಗೆ ಜನರ ಆರೋಗ್ಯವೇ ಎಲ್ಲಕ್ಕಿಂತ ಮಿಗಿಲಾಗಬೇಕಿತ್ತು. ಆದರೆ, ಅದನ್ನೇ ಕಡೆಗಣಿಸಿ ಪ್ರಚಾರದಲ್ಲಿ ತೊಡಗಿದ್ದು ಅಕ್ಷಮ್ಯ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣಾ ಸಂದರ್ಭದಲ್ಲಿ ಪ್ರಚಾರ ನಡೆಸುವುದಕ್ಕೆ ಅವಕಾಶ ಇದೆ. ಆದರೆ, ಅದಕ್ಕೆ ಭಾರಿ ಬಹಿರಂಗ ಸಭೆ ಇಲ್ಲವೇ ರ್‍ಯಾಲಿಗಳೇ ಆಗಬೇಕೆಂದೇನಿಲ್ಲ. ಸಾಮಾಜಿಕ ಜಾಲತಾಣವನ್ನು ಬಳಸಿಕೊಂಡು ಮತದಾರರನ್ನು ಮುಟ್ಟಲು ಮತ್ತು ಮನಗೆಲ್ಲಲು ಈಗ ವಿಪುಲ ಅವಕಾಶಗಳಿವೆ. ಆದರೂ ಹಟಕ್ಕೆ ಬಿದ್ದು ಜನರು ಗುಂಪುಗೂಡುವ ರೀತಿಯಲ್ಲಿ ಪ್ರಚಾರ ನಡೆಸಿದ್ದು ಸರಿಯಲ್ಲ.



ಜನರು ಗುಂಪುಗೂಡುವ ರೀತಿಯಲ್ಲಿ, ಹಟಕ್ಕೆ ಬಿದ್ದು ಚುನಾವಣಾ ಪ್ರಚಾರ ನಡೆಸುವುದು ಸರಿಯಲ್ಲ

ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಮಂಗಳವಾರ ಮತದಾನ ನಡೆಯಲಿದೆ. ಮತದಾನದ ದಿನವಾದರೂ ಮತದಾರರು ಮತ್ತು ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಕಾರ್ಯಕರ್ತರು ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ಮತಗಟ್ಟೆಯಲ್ಲಿ ಜನರು ಗುಂಪುಗೂಡುವುದನ್ನು ತಡೆಯಬೇಕು. ಸ್ಯಾನಿಟೈಸರ್ ಬಳಕೆ ಮಾಡಬೇಕು. ಮತದಾರರು ಕಡ್ಡಾಯವಾಗಿ ಮಾಸ್ಕ್ ಧರಿಸಿ ಬರುವಂತೆ ಮಾಡಬೇಕು. ಮತದಾನದ ನಂತರ ಕೊರೊನಾ ಹರಡುವಿಕೆ ಇನ್ನಷ್ಟು ಜಾಸ್ತಿಯಾದರೆ ಅದರ ಹೊಣೆಯನ್ನು ರಾಜಕಾರಣಿಗಳ ಜೊತೆಗೆ ಚುನಾವಣಾ ಆಯೋಗ ಕೂಡ ಹೊರಬೇಕಾಗುತ್ತದೆ.

ದಿನದ ಟ್ವೀಟ್



ಸ್ಪಂದಿಸಿ, ಸಂರಕ್ಷಿಸಿ

ಭಾರತದಲ್ಲಿ ಕೋವಿಡ್ ಎರಡನೇ ಅಲೆಯು ನಿಸ್ಸಂಶಯವಾಗಿಯೂ ಮನುಕುಲದ ಬಲು ದೊಡ್ಡ ಬಿಕ್ಕಟ್ಟಿಗೆ ಕಾರಣವಾಗಿದೆ. ಪಕ್ಷಪಾತ ಮತ್ತು ಇತರ ಸಂಕುಚಿತ ರಾಜತಾಂತ್ರಿಕ ಪರಿಗಣನೆಗಳನ್ನು ಮೀರಿ ಜಾಗತಿಕ ಸಮುದಾಯವು ಇದಕ್ಕೆ ಸ್ಪಂದಿಸಬೇಕು ಮತ್ತು ಭಾರತವೂ ಇದಕ್ಕೆ ಪೂರಕವಾಗಿ ತೊಡಗಿಸಿಕೊಳ್ಳಬೇಕು.

ಎಂ.ಕೆ.ವೇಣು, ಪತ್ರಕರ್ತ

25 ವರ್ಷಗಳ ಹಿಂದೆ

ಶುಕ್ರವಾರ, 26-4-1996

- **ಕನಕಪುರ ಚುನಾವಣೆ ಭವಿಷ್ಯ ಆಯೋಗದ ಕೈನಲ್ಲಿ: ಕೃಷ್ಣ**

ಬೆಂಗಳೂರು, ಏ. 25– ಅಪಾರ ಪ್ರಮಾಣದಲ್ಲಿ ಅಕ್ರಮ ನಡೆದಿದೆ ಎಂದು ವರದಿಯಾಗಿರುವ ಕನಕಪುರ ಕ್ಷೇತ್ರದ ಚುನಾವಣೆಯನ್ನು ರದ್ದು ಮಾಡಬೇಕೇ ಬೇಡವೇ ಎನ್ನುವುದು ಚುನಾವಣಾ ಆಯೋಗಕ್ಕೆ ಸಂಬಂಧಿಸಿದ ವಿಚಾರ ಎಂದು ಕಾಂಗ್ರೆಸ್‌ ಪ್ರಚಾರ ಸಮಿತಿ ಅಧ್ಯಕ್ಷ ಎಸ್.ಎಂ.ಕೃಷ್ಣ ಇಲ್ಲಿ ಇಂದು ಹೇಳಿದರು.

ಆ ಲೋಕಸಭಾ ಕ್ಷೇತ್ರದಲ್ಲಿ ದಳ ಅಭ್ಯರ್ಥಿ ಕುಮಾರಸ್ವಾಮಿ ಪರವಾಗಿ ನಡೆದಿದೆ ಎನ್ನಲಾದ ಅಕ್ರಮಗಳನ್ನು ಉಲ್ಲೇಖಿಸಿ ಕಾಂಗ್ರೆಸ್ ಪಕ್ಷ ಹಾಗೂ ಅಭ್ಯರ್ಥಿ ಚಂದ್ರಶೇಖರ ಮೂರ್ತಿ ಕೇಂದ್ರ ಚುನಾವಣಾ ಆಯೋಗಕ್ಕೆ ಪತ್ರ ಬರೆದ ಹಿನ್ನೆಲೆಯಲ್ಲಿ ವಿಶೇಷ ವೀಕ್ಷಕರನ್ನು ಅದು ಕಳಿಸಿದೆ ಎಂದು ತಿಳಿಸಿದರು.

- **150 ಲೋಕಸಭೆ, 535 ಅಸೆಂಬ್ಲಿ ಕ್ಷೇತ್ರಗಳಲ್ಲಿ ಪ್ರಚಾರ ಅಂತ್ಯ**

ನವದೆಹಲಿ, ಏ. 25 (ಪಿಟಿಐ)– ಏಪ್ರಿಲ್ 27ರಂದು ನಡೆಯಲಿರುವ ಮೊದಲ ಹಂತದ ಚುನಾವಣೆಗೆ ಲೋಕಸಭೆಯ 150 ಹಾಗೂ ಆರು ರಾಜ್ಯ ವಿಧಾನಸಭೆಗಳ 535 ಕ್ಷೇತ್ರಗಳ ಪ್ರಚಾರ ಇಂದು ಅಂತ್ಯಗೊಂಡಿತು. ಸುಮಾರು 13 ಕೋಟಿ ಮತದಾರರು ಅಂದು ಮತ ಚಲಾಯಿಸಲಿದ್ದಾರೆ.

50 ವರ್ಷಗಳ ಹಿಂದೆ

ಸೋಮವಾರ, 26-4-1971

- **ಹೊಸ ಮಾದರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಇಂದು ಆರಂಭ**

ಬೆಂಗಳೂರು, ಏ. 25– ಸುಮಾರು ಒಂದು ಲಕ್ಷ 22 ಸಾವಿರ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಸೋಮವಾರ ಪ್ರಾರಂಭವಾಗಲಿರುವ ಮೈಸೂರು ಎಸ್‌ಎಸ್‌ಎಲ್‌ಸಿ ಪುನರ್ವಿಮರ್ಶಿತ ಯೋಜನೆ ಪರೀಕ್ಷೆಗೆ ಕುಳಿತಿದ್ದಾರೆ.

ಪುನರ್ವಿಮರ್ಶಿತ ಯೋಜನೆ ಪರೀಕ್ಷಾ ಕ್ರಮವನ್ನು ಜಾರಿಗೆ ತಂದಿರುವುದು ಇದೇ ಮೊದಲ ಬಾರಿ. ಅದರಲ್ಲಿ ಐಚ್ಛಿಕ ವಿಷಯಗಳು ಸೇರಿಲ್ಲ.

ಮತ್ತೊಂದು ಗಮನಾರ್ಹ ಅಂಶವೆಂದರೆ, ಯಾವುದೇ ಪ್ರಶ್ನೆಪತ್ರಿಕೆಯಲ್ಲಿ ಶೇ 35ರಷ್ಟು ಅಂಕ ಗಳಿಸಿದಲ್ಲಿ ಆ ವಿದ್ಯಾರ್ಥಿಯು ಪರೀಕ್ಷೆಯಲ್ಲಿ ನಪಾಸಾದರೂ ಮುಂದಿನ ಬಾರಿ ಆ ವಿಷಯದಲ್ಲಿ ಪರೀಕ್ಷೆಗೆ ಕೂರಬೇಕಾಗಿಲ್ಲ. ಈಗಾಗಲೇ ಮುಕ್ತಾಯವಾದ ಹಳೇ ಕ್ರಮದ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ 82,200 ವಿದ್ಯಾರ್ಥಿ, ವಿದ್ಯಾರ್ಥಿನಿಯರು ಕುಳಿತಿದ್ದರು.

- **'ಹಿಂದುಳಿದವರ ಪ್ರಗತಿಗೆ ಪ್ರಯತ್ನ ಪಡದಿದ್ದರೆ ಹಿಂದೂ ಧರ್ಮಕ್ಕೆ ಅಪಾಯ ಖಚಿತ'**

ಬೆಂಗಳೂರು, ಏ. 25– ಧಾರ್ಮಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದವರ ಅಭಿವೃದ್ಧಿಗೆ ಯತ್ನಿಸದಿದ್ದಲ್ಲಿ ಹಿಂದೂ ಧರ್ಮಕ್ಕೆ ಅಪಾಯವಿದೆಯೆಂದು ಪೇಜಾವರ ಮಠಾಧೀಶ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳು ಇಂದು ಇಲ್ಲಿ ಎಚ್ಚರಿಕೆ ನೀಡಿದರು.

ವಿಶ್ವ ಹಿಂದೂ ಪರಿಷತ್ ವ್ಯವಸ್ಥೆ ಮಾಡಿದ್ದ ನಗರ ಸಮ್ಮೇಳನವನ್ನು ಬಸವನಗುಡಿಯ ವಾಸವಿ ಧರ್ಮಶಾಲೆಯಲ್ಲಿ ಉದ್ಘಾಟಿಸಿದ ಅವರು, 'ನಮ್ಮ ಧರ್ಮ ಹೊರಗಿನ ಆಕ್ರಮಣಕ್ಕೆ ಭಯಪಡಬೇಕಾಗಿಲ್ಲ; ನಮ್ಮ ಶತ್ರು ನಮ್ಮಲ್ಲೇ ಇದ್ದಾನೆ. ಉದಾಸೀನ, ದೌರ್ಬಲ್ಯ, ಸ್ವಾರ್ಥ ಭಾವನೆಗಳೇ ನಮ್ಮ ಶತ್ರುಗಳು' ಎಂದು ಹೇಳಿದರು.

ರಾಜಕೀಯ ಉದ್ದೇಶಗಳಿಗಾಗಿ ನಮ್ಮ ನ್ಯಾಯಾಂಗವನ್ನು ನಾವೇ ಲಘುವಾಗಿ ಕಂಡರೆ...?

ನ್ಯಾಯಾಂಗದ ಬಗ್ಗೆ ಅನ್ಯಾಯದ ಟೀಕೆ ಬೇಡ



ಸೂರ್ಯ–ನಮಸ್ಕಾರ

ಎ.ಸೂರ್ಯಪ್ರಕಾಶ್

ಈಚಿನ ದಿನಗಳಲ್ಲಿ ದೇಶದ ನ್ಯಾಯಾಂಗವು ತೀವ್ರ ಟೀಕೆಗಳಿಗೆ ಗುರಿಯಾಗಿದೆ. ನಾಗರಿಕರ ಸ್ವಾತಂತ್ರ್ಯವನ್ನು ಹಾಗೂ ಸಾಂವಿಧಾನಿಕ ಹಕ್ಕುಗಳನ್ನು ರಕ್ಷಿಸುವ ವಿಚಾರದಲ್ಲಿ ಹೆಬ್ಬಂಡೆಯಂತೆ ನಿಂತಿದ್ದ ನ್ಯಾಯಾಂಗವು ಈಗ ಸ್ವತಂತ್ರವಾಗಿ, ವಿಶ್ವಾಸಾರ್ಹವಾಗಿ ಉಳಿದಿಲ್ಲ ಎಂದು ಭಾವಿಸಿದವರು ಟೀಕೆಗಳನ್ನು ಮಾಡುತ್ತಿದ್ದಾರೆ.

ಭಾರತಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ನ್ಯಾಯಾಂಗದ ನಿಷ್ಪಕ್ಷಪಾತ ಧೋರಣೆಯ ಬಗ್ಗೆ ಪ್ರಶ್ನೆಗಳನ್ನು ಕೇಳಲಾಗಿದೆ. ಇಂತಹ ಪ್ರಶ್ನೆಗಳು ಬೇರೆ ಹಲವು ಪ್ರಜಾತಂತ್ರ ವ್ಯವಸ್ಥೆಗಳಲ್ಲೂ ಮೂಡಿದ್ದಿದೆ. ಅಮೆರಿಕದ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ಸಂಖ್ಯೆಯನ್ನು ಹೆಚ್ಚಿಸುವ ಡೆಮಾಕ್ರಟಿಕ್ ಪಕ್ಷದವರ ನಡೆಯ ಬಗ್ಗೆ ಈ ಹೊತ್ತಿನಲ್ಲಿ ದೊಡ್ಡ ಚರ್ಚೆ ನಡೆದಿದೆ. ಕೋರ್ಟ್‌ನಲ್ಲಿ ರಿಪಬ್ಲಿಕನ್ನರೇ ಹೆಚ್ಚಿದ್ದಾರೆ ಎಂದು ಡೆಮಾಕ್ರಟಿಕ್ ಪಕ್ಷದವರು ನಂಬಿದ್ದಾರೆ! ಹಾಗಾದರೆ, ಅಮೆರಿಕದ ಈಗಿನ ಸುಪ್ರೀಂ ಕೋರ್ಟ್ ವಿಶ್ವಾಸಾರ್ಹವಲ್ಲದ ಸಂಸ್ಥೆಯಾಗುತ್ತದೆಯೇ? ಇಂತಹ ಚರ್ಚೆಗಳು ನಡೆಯುವುದು ಪ್ರಜಾತಂತ್ರ ವ್ಯವಸ್ಥೆಗಳಲ್ಲಿ ಮಾತ್ರ. ಚೀನಾದ ನ್ಯಾಯಾಲಯಗಳ ಬಗ್ಗೆ ಇಂತಹ ತೀಕ್ಷ್ಣ ಮಾತುಗಳು ಕೇಳಿಸುತ್ತವೆಯೇ?

ಸಾಮಾಜಿಕ ಮಾಧ್ಯಮಗಳಲ್ಲಿ ಯಾರು, ಏನು ಬೇಕಿದ್ದರೂ ಹೇಳಬಹುದು ಎಂಬುದು ಫ್ಯಾಷನ್ ಆಗಿದೆ. ಬೇಜವಾಬ್ದಾರಿಯ, ಹಿಂದೆ–ಮುಂದೆ ಆಲೋಚಿಸದ ಹಲವು ಮಾತುಗಳನ್ನು ಟ್ವಿಟರ್ ಮತ್ತು ಇತರ ಸಾಮಾಜಿಕ ಮಾಧ್ಯಮಗಳ ಮೂಲಕ ಆಡಲಾಗುತ್ತಿದೆ. ಇಂತಹವುಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕಾಗಿದೆ.

18 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿರುವ ಯಾವುದೇ ವ್ಯಕ್ತಿ ತನ್ನ ಇಚ್ಛೆಯ ಧರ್ಮವನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಹೊಂದಿದ್ದಾನೆ ಎಂದು ಈಚೆಗೆ ಸುಪ್ರೀಂ ಕೋರ್ಟ್ ಘೋಷಿಸಿತು. ಮತಾಂತರವನ್ನು ನಿರ್ಬಂಧಿಸುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಬೇಕು ಎಂಬ ಅರ್ಜಿಯನ್ನು ತಿರಸ್ಕರಿಸಿತು. ವಾಸ್ತವದಲ್ಲಿ, ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್‌ನ ಮೂವರು ನ್ಯಾಯಮೂರ್ತಿಗಳ ಪೀಠಕ್ಕೆ ಮನಸ್ಸೇ ಇರಲಿಲ್ಲ. ಈ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಬೇಕು ಎಂಬ ಒತ್ತಾಯ ಮುಂದುವರಿಸಿದರೆ ದಂಡ ವಿಧಿಸುವುದಾಗಿ ನ್ಯಾಯಪೀಠ ಹೇಳಿತು. ಧಾರ್ಮಿಕ ಸ್ವಾತಂತ್ರ್ಯವನ್ನು ಖಾತರಿಪಡಿಸುವ, ವ್ಯಕ್ತಿಯು ತನಗೆ ಇಷ್ಟವಾದ ಧರ್ಮವನ್ನು ಪಾಲಿಸುವ, ಪ್ರಚಾರ ಮಾಡುವ ಹಕ್ಕು ಇದೆ ಎನ್ನುವ ಸಂವಿಧಾನದ 25ನೆಯ ವಿಧಿಯಲ್ಲಿ ಹೇಳಿರುವ ಮಾತುಗಳನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿಯಿತು.

ಇದಾದ ನಂತರ, ಕುರ್‌ಆನ್‌ನಲ್ಲಿನ ಕೆಲವು ಸಾಲುಗಳನ್ನು ತೆಗೆದುಹಾಕಬೇಕು ಎಂಬ ಅರ್ಜಿಯೊಂದನ್ನು ಕೂಡ ಸುಪ್ರೀಂ ಕೋರ್ಟ್ ತಿರಸ್ಕರಿಸಿತು. ಈ ಸಾಲುಗಳನ್ನು ಮುಂದಿಟ್ಟುಕೊಂಡು ಎಳೆಯ ವಯಸ್ಸಿನವರ ಮನಸ್ಸಿನಲ್ಲಿ ಕೆಟ್ಟ ವಿಚಾರ ಬಿತ್ತಲಾಗುತ್ತಿದೆ, ಭಯೋತ್ಪಾದಕರು ಮುಸ್ಲಿಮೇತರರ ಮೇಲೆ ನಡೆಸುವ ದಾಳಿಗಳನ್ನು ಸಮರ್ಥಿಸಿಕೊಳ್ಳಲಾಗುತ್ತಿದೆ ಎಂದು ಅರ್ಜಿದಾರರು ವಾದಿಸಿದ್ದರು. ಅರ್ಜಿಯು 'ಅವಿವೇಕತನದ್ದು' ಎಂದು ಹೇಳಿದ ನ್ಯಾಯಪೀಠವು, ಅರ್ಜಿದಾರ ಸೈಯದ್ ವಸೀಂ ರಿಜ್ವಿ ಅವರಿಗೆ ₹ 50 ಸಾವಿರ ದಂಡ ವಿಧಿಸಿತು. ರಿಜ್ವಿ ಅವರು ಶಿಯಾ ವಕ್ಫ್ ಮಂಡಳಿಯ ಮಾಜಿ ಅಧ್ಯಕ್ಷ ಕೂಡ ಹೌದು.

ಕೋರ್ಟ್ ಈಚೆಗೆ ನೀಡಿದ ಇನ್ನೊಂದು ತೀರ್ಪು ನಾಗರಿಕರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿಹಿಡಿಯಿತು. 'ಶಿಲ್ಲಾಂಗ್ ಟೈಮ್ಸ್'ನ ಸಂಪಾದಕ ಪ್ಯಾಟ್ರಿಸಿಯಾ ಮುಖಿಂ ವಿರುದ್ಧ ದಾಖಲಾದ ಎಫ್‌ಐಆರ್ ರದ್ದುಪಡಿಸುವುದಕ್ಕೆ ಸಂಬಂಧಿಸಿದ ಅರ್ಜಿ ಇದು. ಮೇಘಾಲಯದ ಒಂದೆಡೆ ಆದಿವಾಸಿಗಳು, ಆರು ಜನ ಇತರರ ಮೇಲೆ ಹಲ್ಲೆ ನಡೆಸಿದ್ದಾರೆ, ಹಲ್ಲೆ ಮಾಡಿದವರ ವಿರುದ್ಧ ಪ್ರಕರಣ ದಾಖಲಿಸಬೇಕು ಎಂದು ಮುಖಿಂ ಅವರು 2020ರಲ್ಲಿ ಫೇಸ್‌ಬುಕ್‌ನಲ್ಲಿ ಬರೆದಿದ್ದರು. ಆದರೆ, ಎರಡು ಗುಂಪುಗಳ ನಡುವೆ ದ್ವೇಷ ಬಿತ್ತುತ್ತಿದ್ದಾರೆ ಎಂದು ಆರೋಪಿಸಿ ಸ್ಥಳೀಯ ಆದಿವಾಸಿ ನಾಯಕರು ಮುಖಿಂ ವಿರುದ್ಧ ದೂರು ನೀಡಿದ್ದರು. ಮುಖಿಂ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ಎಫ್‌ಐಆರ್ ರದ್ದುಪಡಿಸಿದ ಎಲ್. ನಾಗೇಶ್ವರ ಮತ್ತು ಎಸ್. ರವೀಂದ್ರ ಭಟ್ ಅವರಿದ್ದ ಪೀಠವು, 'ಕ್ರಿಮಿನಲ್ ಪ್ರಕರಣ ದಾಖಲಿಸಿ ಈ ದೇಶದ ನಾಗರಿಕರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಸಾಧ್ಯವಿಲ್ಲ' ಎಂದು ಹೇಳಿತು. 'ಭಾರತವು ಬಹುತ್ವದ, ಬಹುಸಂಸ್ಕೃತಿಗಳ ನಾಡು. ಸಂವಿಧಾನದ ಪೀಠಿಕೆಯಲ್ಲಿ ಹೇಳಿರುವ ಸ್ವಾತಂತ್ರ್ಯವು ಅಭಿವ್ಯಕ್ತಿ ಸ್ವಾತಂತ್ರ್ಯ, ಸಂಚಾರದ ಸ್ವಾತಂತ್ರ್ಯ ಸೇರಿದಂತೆ ಹಲವು ರೂಪಗಳಲ್ಲಿ ವ್ಯಕ್ತವಾಗುತ್ತದೆ' ಎಂದು ಕೂಡ ಪೀಠವು ಹೇಳಿದೆ.


ಸುಪ್ರೀಂ ಕೋರ್ಟ್ ಮಾತ್ರವೇ ಅಲ್ಲ, ಹೈಕೋರ್ಟ್‌ಗಳು ಕೂಡ ಮಹತ್ವದ ಆದೇಶಗಳನ್ನು ಈಚೆಗೆ ನೀಡಿವೆ. ಅಲಹಾಬಾದ್ ಹೈಕೋರ್ಟ್ ಈಚೆಗೆ ಪ್ರಕಟಿಸಿದ ಕೆಲವು ಮಹತ್ವದ ಆದೇಶಗಳನ್ನು ಇಲ್ಲಿ ಉಲ್ಲೇಖಿಸಬಹುದು. ಯೋಗಿ ಆದಿತ್ಯನಾಥ ಅವರು ಮುಖ್ಯಮಂತ್ರಿಯಾದ ನಂತರ ಉತ್ತರ ಪ್ರದೇಶದಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿದೆ ಎಂದು ಯಶವಂತ್ ಸಿಂಗ್ ಎನ್ನುವವರು ಮಾಡಿದ್ದ ಟ್ವೀಟ್‌ಗೆ ಎಫ್‌ಐಆರ್ ದಾಖಲಿಸಲಾಗಿತ್ತು. ಉತ್ತರ ಪ್ರದೇಶದಲ್ಲಿ 'ಜಂಗಲ್ ರಾಜ್' ಇದೆ ಎಂದು ಸಿಂಗ್ ಹೇಳಿದ್ದರು. ಈ ಎಫ್‌ಐಆರ್ ಅನ್ನು ಕಳೆದ ಡಿಸೆಂಬರ್‌ನಲ್ಲಿ ರದ್ದುಪಡಿಸಿದ ಅಲಹಾಬಾದ್ ಹೈಕೋರ್ಟ್, 'ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ಭಿನ್ನಾಭಿಪ್ರಾಯ ದಾಖಲಿಸುವುದು ನಮ್ಮಂತಹ ಉದಾರವಾದಿ ಪ್ರಜಾತಂತ್ರ ವ್ಯವಸ್ಥೆಗಳ ಆತ್ಮವಿದ್ದಂತೆ' ಎಂದು ಹೇಳಿತು.

ಉತ್ತರ ಪ್ರದೇಶದ ಜಿಲ್ಲಾ ಮ್ಯಾಜಿಸ್ಟ್ರೇಟರೊಬ್ಬರು ದಾಖಲಿಸಿದ ಪ್ರಕರಣಗಳ ಬಗ್ಗೆ ದಿನಪತ್ರಿಕೆಯೊಂದು ಈಚೆಗೆ ತನಿಖೆ ನಡೆಸಿತು. ಕೆಲವು ವ್ಯಕ್ತಿಗಳನ್ನು ರಾಷ್ಟ್ರೀಯ ಭದ್ರತಾ ಕಾಯ್ದೆಯ ಅಡಿಯಲ್ಲಿ ಮುಂಜಾಗ್ರತೆಯ ಕ್ರಮವಾಗಿ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದ ಪ್ರಕರಣ ಇದು. ಅಲಹಾಬಾದ್ ಹೈಕೋರ್ಟ್‌ನಲ್ಲಿ ದಾಖಲಾದ 120 ಹೇಬಿಯಸ್ ಕಾರ್ಪಸ್ ಅರ್ಜಿಗಳ ಪೈಕಿ 94 ಅರ್ಜಿಗಳ ವಿಚಾರದಲ್ಲಿ ಕೋರ್ಟ್, ಬಂಧಿತರನ್ನು ಬಿಡುಗಡೆ ಮಾಡುವಂತೆ ಆದೇಶಿಸಿದೆ ಎಂದು ವರದಿ ಹೇಳಿದೆ.

ನ್ಯಾಯಾಂಗದಲ್ಲಿ ಲೋಪಗಳೇ ಇಲ್ಲ ಎನ್ನಲು ಇವನ್ನೆಲ್ಲ ಹೇಳುತ್ತಿಲ್ಲ. ಅಲ್ಲಿ ಸಮಸ್ಯೆಗಳಿವೆ. ಆದರೆ, ಕಾರ್ಯಾಂಗ, ನ್ಯಾಯಾಂಗ ಹಾಗೂ ಶಾಸಕಾಂಗದ ನಡುವಿನ ಅಧಿಕಾರ ವ್ಯಾಪ್ತಿ ಸ್ಪಷ್ಟವಾಗಿ ಪ್ರತ್ಯೇಕಿಸಲ್ಪಟ್ಟಿದೆ. ಯಾವ ಅಂಗವೂ ಇನ್ನೊಂದು ಅಂಗದ ಮೇಲೆ ಸವಾರಿ ನಡೆಸದಿರಲಿ ಎಂದು. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಸಾರ್ವಜನಿಕರಿಗೆ ಸಂವಿಧಾನದ 21ನೆಯ ವಿಧಿ ಖಾತರಿಪಡಿಸುವ ಸ್ವಾತಂತ್ರ್ಯಗಳು ಇರುವುದಿಲ್ಲ ಎಂಬ ವಾದ ಮುಂದಿಟ್ಟು ನುಣುಚಿಕೊಳ್ಳಲು ಸರ್ಕಾರಕ್ಕೆ ನ್ಯಾಯಾಂಗವು ಅವಕಾಶ ಕಲ್ಪಿಸಿದ್ದನ್ನು ಹೊರತುಪಡಿಸಿದರೆ, ನ್ಯಾಯಾಂಗವು ಯಾವಾಗಲೂ ನಾಗರಿಕರ ಹಕ್ಕುಗಳ ಪರವಾಗಿ ನಿಂತಿದೆ, ಹಕ್ಕುಗಳನ್ನು ರಕ್ಷಿಸಿದೆ.

ಕೇಶವಾನಂದ ಭಾರತಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ಪೀಠ ಬಹುಮತದ ಆಧಾರದಲ್ಲಿ ನೀಡಿದ ತೀರ್ಪು ದೇಶದಲ್ಲಿ ಪ್ರಜಾತಾಂತ್ರಿಕ ಮೌಲ್ಯಗಳನ್ನು ಬಲಪಡಿಸುವ ನಿಟ್ಟಿನಲ್ಲಿ ನೀಡಿದ ಅವಿಸ್ಮರಣೀಯ ಕೊಡುಗೆಯೇ ಸರಿ. 1973ರಲ್ಲಿ ನೀಡಿದ ಈ ತೀರ್ಪಿನಲ್ಲಿ ಕೋರ್ಟ್, 'ಸಂವಿಧಾನಕ್ಕೆ ತಿದ್ದುಪಡಿ ತರುವ ಅಧಿಕಾರ ಸಂಸತ್ತಿಗೆ ಇದೆಯಾದರೂ, ಸಂವಿಧಾನದ ಮೂಲ ಸ್ವರೂಪವನ್ನು ಬದಲಾಯಿಸುವಂತೆ ಇಲ್ಲ' ಎಂದು ಹೇಳಿತು. ಈ ತೀರ್ಪು ಸರಿಸುಮಾರು ಅರ್ಧ ಶತಮಾನದಿಂದ ನಮ್ಮ ಮೂಲಭೂತ ಹಕ್ಕುಗಳನ್ನು ರಕ್ಷಿಸುತ್ತಿರುವ ವಜ್ರ ಕವಚವಿದ್ದಂತೆ.

ರಾಜಕೀಯ ಉದ್ದೇಶಗಳಿಗಾಗಿ ನಮ್ಮ ನ್ಯಾಯಾಂಗವನ್ನು ನಾವೇ ಲಘುವಾಗಿ ಕಂಡರೆ, ನಮ್ಮ ಹಕ್ಕುಗಳನ್ನು ಕಾರ್ಯಾಂಗ ಅಥವಾ ಶಾಸಕಾಂಗ ಮೊಟಕುಗೊಳಿಸಲು ಮುಂದಾದಾಗ ನಾವು ಹೋಗುವುದೆಲ್ಲಿಗೆ?



ಚುರುಮುರಿ



ಕಾಲವೇ ಉತ್ತರಿಸುವುದು!

• ಸುಮಂಗಲಾ

ಹೋದ ವರ್ಷ ಇದೇ ಸಮಯದಲ್ಲಿ ಬೆಕ್ಕಣ್ಣ 'ನಂಗೂ ಶಂಖ, ಜಾಗಟೆ ತರಿಸಿಕೊಡು, ಶಂಖ ಊದಿ, ಜಾಗಟೆ ಬಡಿದು ಗೋ ಕೊರೊನಾ ಗೋ ಅಂತ ಹಾಡಿ, ಕೊರೊನಾ ಓಡಿಸ್ತೀನಿ' ಎಂದು ವರಾತ ಹಚ್ಚಿತ್ತು. ಆಮೇಲೆ ಗೋಮೂತ್ರ ಡೆಲಿವರಿ ಸರ್ವಿಸ್ ಶುರುಮಾಡತೀನಿ, ಕಷಾಯದ ಪುಡಿ ಫ್ಯಾಕ್ಟರಿ ಹಾಕತೀನಿ ಎಂದೆಲ್ಲ ಏನೇನೋ ನವೋದ್ಯಮದ ಕನಸು ಹೊಸೆಯುತ್ತಿತ್ತು.

ತುಳಸಿ ಗಿಡ ಬೆಳೆಸಿದ್ರೆ ಆಮ್ಲಜನಕ ರಗಡ ಸಿಗತೈತಂತ. ನೀನೂ ಒಂದು ನೂರು ತುಳಸಿ ಗಿಡ ಬೆಳೆಸು ಅಂತ ಕಳೆದ ತಿಂಗಳು ಗಂಟುಬಿದ್ದಿತ್ತು. ಈಗ ಕೊರೊನಾ ಎರಡನೇ ಅಲೆ ಸುನಾಮಿಯಂತೆ ಬಡಿದಾಗ ಯಾವ ಹೊಸ ಐಡಿಯಾಗಳಿಲ್ಲದೆ ತೆಪ್ಪಗಿತ್ತು.

ಸದ್ಯ ಏನೂ ಉತಾವಳಿಯಿಲ್ಲ ಎಂದು ನಾನೂ ನೆಮ್ಮದಿಯಿಂದಿದ್ದೆ. ಆದರೆ ಕುಣುಕಲಾಡಿಕುಪ್ಪ ಹಂಗೆಲ್ಲ ಸುಮ್ಮನಿರುವುದುಂಟೇ... ಇವತ್ತು ಬೆಳಗ್ಗೆ 'ನಿನ್ನ ಜನರಲ್ ನಾಲೆಜ್ ಎಷ್ಟೈತಿ ನೋಡತೀನಿ' ಎಂದು ರಸಪ್ರಶ್ನೆ ಶುರು ಮಾಡಿತು.

'ದೆಹಲಿ ಇನ್ನಿತರ ಕಡೆ ಐಸಿಯು ಒಳಗ ಐವತ್ತಕ್ಕೂ ಹೆಚ್ಚು ರೋಗಿಗಳು ಒಮ್ಮೆಲೇ ಸತ್ತರಲ್ಲ, ಆಮ್ಲಜನಕದ ಕೊರತೆಯಿಂದ ಸತ್ತರೋ ಅಥವಾ ಕೊರೊನಾ ಭೂತದಿಂದ ಸತ್ತರೋ? ಇನ್ನು ಕೆಲವರು ನಕಲಿ ರೆಮ್ಡಿಸಿವಿರ್ ತಗಂಡಿದ್ದಕ್ಕೆ ಸತ್ತರೋ ಅಥವಾ ಅಸಲಿ ರೆಮ್ಡಿಸಿವಿರ್ ಸಿಗಲಾರದ್ದಕ್ಕೆ ಸತ್ತರೋ?'

'ಇದಕ್ಕುತ್ತರ ಎಲ್ಲಾರಿಗೂ ಗೊತ್ತೈತಿ ಬಿಡಲೇ. ನನ್ನ ಪ್ರಶ್ನೆಗೆ ಉತ್ತರ ಹೇಳು. ಮೋದಿಮಾಮಾ ಚಾಲಾಕುತನದ ಮಾತಾಡಿ ಜವಾಬ್ದಾರಿಯಿಂದ ನುಣುಚಿಕೊಳ್ತಾರ, ಎಲ್ಲ ರಾಜಕೀಯ, ಧಾರ್ಮಿಕ ಮುಖಂಡರಿಗೆ ಅವರ ಬ್ಯಾಳೆ ಬೇಯಿಸ್ಕಳದೇ ಮುಖ್ಯ ಆಗ್ಯದೆ, ಕೊರೊನಾ ಎರಡನೇ ಸುನಾಮಿಗೆ ಇವರೆಲ್ಲ ತೆಲಿನೆ ಕೆಡಿಸ್ಕಂಡಿಲ್ಲ ಅಂತ ನಿಮ್ಮ ನಿರ್ಮಲಕ್ಕನ ಗಂಡ ಪರಕಾಲ ಪ್ರಭಾಕರ ಎಲ್ಲಾರನ್ನ ಛಲೋತ್ನಾಗಿ ಝಾಡಿಸಿ, ಭಾಷಣ ಮಾಡ್ಯಾರ. ಈಗ ಮೋದಿಮಾಮಾರು ನಿರ್ಮಲಕ್ಕನ ಮ್ಯಾಗ ಮತ್ತು ನಿರ್ಮಲಕ್ಕಾರು ಗಂಡನ ಮ್ಯಾಗ ಏನು ಶಿಸ್ತು ಕ್ರಮ ತಗೊಳ್ತಾರ?' ಬೆಕ್ಕಣ್ಣ ಮುಗುಮ್ಮಾಗಿ 'ಪರಕಾಲರ ಭಿನ್ನಾಭಿಪ್ರಾಯಕ್ಕೆ ಕಾಲವೇ ಉತ್ತರಿಸುವುದು' ಎಂದಿತು!

ಸಂಗತ

ದೀರ್ಘಾವಧಿ ಲಾಕ್‌ಡೌನ್ ತಡೆಯೋಣ

ನಮ್ಮ ನಮ್ಮ ಆರೋಗ್ಯದ ರಕ್ಷಣೆಗೆ ಸ್ವಯಂ ಸಿದ್ಧರಾಗೋಣ

• ಡಾ. ಚೆನ್ನು ಅ. ಹಿರೇಮಠ

ಕೊರೊನಾ ಹಾವಳಿಯು ಪ್ರಪಂಚದಾದ್ಯಂತ ನಾಗರಿಕರನ್ನು ಕಂಗೆಡಿಸಿದೆ. ಲಸಿಕೆಯನ್ನು ವ್ಯಾಪಕವಾಗಿ ನೀಡಲು ಇದುವರೆಗೂ ಸಾಧ್ಯವಾಗಿಲ್ಲ. ಜನಸಾಮಾನ್ಯರು ಸರ್ಕಾರಗಳನ್ನು ಶಪಿಸುತ್ತಿದ್ದಾರೆ. ಸರ್ಕಾರಗಳು ಸಮರೋಪಾದಿಯಲ್ಲಿ ಪರಿಹಾರೋಪಕ್ರಮಗಳನ್ನು ಕೈಗೊಂಡಿದ್ದರೂ ಅವು 'ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ' ಎಂಬಂತಾಗಿವೆ.

ಕೊರೊನಾ ಪ್ರಸರಣಕ್ಕೆ ಕಡಿವಾಣ ಹಾಕುವುದು ಬರೀ ಸರ್ಕಾರದ ಕ್ರಮಗಳಿಂದ ಖಂಡಿತ ಸಾಧ್ಯವಿಲ್ಲ. ಪ್ರತಿಯೊಂದಕ್ಕೂ ಸರ್ಕಾರವನ್ನೇ ಹೊಣೆಯಾಗಿಸುವುದರಿಂದ ಆರೋಪ– ಪ್ರತ್ಯಾರೋಪಗಳ ವಿನಿಮಯವಾಗುತ್ತದೆಯೇ ಹೊರತು ಪರಿಹಾರ ಸಿಗುವುದಿಲ್ಲ. ಜೀವ ನಷ್ಟವಾದರೆ ಸರ್ಕಾರಕ್ಕೆ ಅದು ಒಂದು ಸಂಖ್ಯೆ ಅಷ್ಟೆ! ಆದರೆ, ಹಾನಿಯ ನಿಜವಾದ ತೀವ್ರತೆ ತಟ್ಟುವುದು ಸಂಬಂಧಪಟ್ಟ ಕುಟುಂಬಗಳಿಗೆ, ಬಂಧುಮಿತ್ರರಿಗೆ.

ಕೊರೊನಾ ಎರಡನೇ ಅಲೆ ಅಪ್ಪಳಿಸಲಿದೆಯೆಂದು ತಜ್ಞರು ಕಳೆದ ಅಕ್ಟೋಬರ್‌ನಿಂದಲೇ ಎಚ್ಚರಿಸಿ, ಅತಿ ಜಾಗರೂಕತೆಯಿಂದ ಜೀವನ ನಡೆಸಲು ಸೂಚಿಸಿದ್ದರು. ರಾಜಕೀಯ ಪಕ್ಷಗಳಾದಿಯಾಗಿ, ಸಂಘ–ಸಂಸ್ಥೆಗಳು ಸೇರಿದಂತೆ ಯಾರೊಬ್ಬರೂ ತಜ್ಞರ ಈ ಮಾತುಗಳನ್ನು ಆಲಿಸುವ ಆಸ್ಥೆ ತೋರಲಿಲ್ಲ. ದೈನಂದಿನ ಬದುಕಿನಲ್ಲಿ ಅಗತ್ಯ ಬದಲಾವಣೆಗೆ ಮನಸ್ಸು ಮಾಡಲಿಲ್ಲ.

ಭಾಗಶಃ ಲಾಕ್‌ಡೌನ್ ಇರಲಿ ಅಥವಾ ರಾತ್ರಿ ವೇಳೆ ಕರ್ಫ್ಯೂ ಇರಲಿ, ಮಾರ್ಗಸೂಚಿ ಪಾಲನೆಗೆ ಪೊಲೀಸರು ಬಂದು ಬೆತ್ತ ತೋರಿಸಬೇಕೇ? ಸ್ವಯಂ ಶಿಸ್ತು ನಮ್ಮಲ್ಲಿ ಮೂಡುವುದು ಯಾವಾಗ? ಅಗತ್ಯವಿರಲಿ, ಇಲ್ಲದಿರಲಿ ಪ್ರತಿಯೊಂದನ್ನೂ ಇಂದೇ ಕೊಳ್ಳಬೇಕೆಂಬ ಧಾವಂತವೇಕೆ? ಒಂದುಪಕ್ಷ ದೀರ್ಘ ಅವಧಿಗೆ ದಿಢೀರನೆ ಲಾಕ್‌ಡೌನ್ ಘೋಷಣೆಯಾದೀತು ಎಂಬ ಆತಂಕವಿದ್ದರೂ ಸರ್ಕಾರವು ಜನಸಾಮಾನ್ಯರಿಗೆ ಆಹಾರಧಾನ್ಯಗಳ ಖರೀದಿಗೆ ಕನಿಷ್ಠ ಸಮಯಾವಕಾಶವನ್ನೂ ಕೊಡುವುದಿಲ್ಲವೇ? ಲಾಕ್‌ಡೌನ್ ಭಯಕ್ಕೆ ಸಂಗ್ರಹಿಸಿ ಇಟ್ಟುಕೊಳ್ಳುವ ಮುಂಜಾಗರೂಕತೆ ಎಂದು ಭಾವಿಸಿದರೂ ಎಷ್ಟು ದಿನಗಳಿಗೆಂದು ಸಂಗ್ರಹ ಸಾಧ್ಯ?

ಪ್ರತಿಯೊಬ್ಬರಿಗೂ ಮುಖಗವಸು, ಪರಸ್ಪರ ಅಂತರ ಪಾಲನೆಯನ್ನು ಕಡ್ಡಾಯಗೊಳಿಸಿದ್ದರೂ ಅದಕ್ಕೂ ಕಣ್ಗಾವಲು ಇಡಬೇಕು ಎಂದರೆ ಹೇಗೆ? ಸ್ಥಳೀಯ ಸಂಸ್ಥೆಗಳ ಸಿಬ್ಬಂದಿ, ಪೊಲೀಸರು ದಂಡ ವಿಧಿಸುವುದನ್ನು ಪ್ರತಿಭಟಿಸುವಷ್ಟು ತಿಳಿವಳಿಕೆ ಹೊಂದಿರುವ ನಾವು, ಸರಿಯಾಗಿ ಮುಖಗವಸು ಧರಿಸಿಯೇ ಹೊರಬರಬೇಕೆಂಬ ಕನಿಷ್ಠ ಜ್ಞಾನವನ್ನೂ ಹೊಂದಿಲ್ಲವೆಂದರೆ ಹೇಗೆ? ಕೊರೊನಾ ನಿಯಂತ್ರಣ ಮಾರ್ಗಸೂಚಿ ಉಲ್ಲಂಘಿಸುವ ರಾಜಕೀಯ ನೇತಾರರ ವಿರುದ್ಧ ಕ್ರಮ ಜರುಗಿಸಿ ಎಂದು ಹೈಕೋರ್ಟ್ ಸೂಚನೆ ಕೊಡಬೇಕಾಗಿ ಬಂತು. ಹೀಗಿರುವಾಗ ಸಾಮಾನ್ಯ ಜನರಿಗೆ ಮಾದರಿಯನ್ನು ಎಲ್ಲಿಂದ ತೋರಬೇಕು?

ಕೊರೊನಾಕ್ಕೆ ಕಡಿವಾಣ ಹಾಕಲು, ಜನರಲ್ಲಿ ಜಾಗೃತಿ ಮೂಡಿಸಲು ಬಸ್‌ನಲ್ಲಿದ್ದ ಹೆಚ್ಚುವರಿ ಪ್ರಯಾಣಿಕರನ್ನು ಕೆಳಗಿಳಿಸಿ, ಶಾಲಾ ವಿದ್ಯಾರ್ಥಿಗಳ ಆಕ್ರೋಶಕ್ಕೆ ಕಾರಣರಾಗಿದ್ದ ಉಡುಪಿ ಜಿಲ್ಲಾಧಿಕಾರಿಯು ವಿವಾಹ ಸಮಾರಂಭವೊಂದರಲ್ಲಿ ನೂರಾರು ಜನರ ಜೊತೆ ಮುಖಗವಸು ಧರಿಸದೆ ಪಾಲ್ಗೊಂಡಿದ್ದ ಸುದ್ದಿ ಮಾಧ್ಯಮಗಳಲ್ಲಿ ಹರಿದಾಡಿತು. ಅಂದು ಬಸ್‌ನಿಂದ ಕೆಳಗಿಳಿಸಿದ ಮಕ್ಕಳಿಗೆ ಈ ಪ್ರಸಂಗವು ಯಾವ ಸಂದೇಶವನ್ನು ಕೊಡಬಹುದು? ಹೊಣೆಗಾರಿಕೆ-ಸಮುದಾಯದ ಕುರಿತು ಅವರ ನಿಲುವುಗಳು ಯಾವ ರೀತಿ ರೂಪುಗೊಳ್ಳಬಹುದು?

ದೇಶದಲ್ಲಿ ಕೊರೊನಾ ಸ್ಥಿತಿ ಭೀಕರವಾಗಿದೆ. ಆಮ್ಲಜನಕದ ಕೊರತೆ, ಐಸಿಯು ಹಾಸಿಗೆಗಳ ಕೊರತೆ, ತಜ್ಞವೈದ್ಯರ ಕೊರತೆ, ಜನರ ಸಹಕಾರದ ಕೊರತೆ, ಪ್ರಾಮಾಣಿಕ ಸೇವೆ ಸಲ್ಲಿಸುವವರ ಕೊರತೆ... ಇವುಗಳೆಲ್ಲದರ ಮಧ್ಯೆಯೂ ನಾವು ಸ್ವಸ್ಥರಾಗಿ ಬದುಕುವ ಮಾರ್ಗವನ್ನು ಕಂಡುಕೊಳ್ಳಲೇಬೇಕಿದೆ.

ಲಾಕ್‌ಡೌನ್, ಕೊರೊನಾ ಚಿಕಿತ್ಸೆ- ನಿಯಂತ್ರಣ ಸಂಬಂಧ ಅತ್ಯಧಿಕ ವೆಚ್ಚಗಳ ಕಾರಣವಾಗಿ ಸರ್ಕಾರಗಳು ಆರ್ಥಿಕವಾಗಿ ಬಸವಳಿದಿವೆ. ಅವು ರೋಗ ನಿಯಂತ್ರಣಕ್ಕಾಗಿ ಮಾಡುವ ಪ್ರತೀ ಪೈಸೆಯೂ ಮುಂದೆ ಪರೋಕ್ಷವಾಗಿ ಪ್ರಜೆಗಳ ಮೇಲೆಯೇ ಬೀಳಲಿದೆ. ನಮ್ಮ ಸಾಮುದಾಯಿಕ ನಿರ್ಲಕ್ಷ್ಯಗಳು ನೇರವಾಗಿ ಅಲ್ಲದಿದ್ದರೂ ನಮ್ಮ ಆದಾಯವನ್ನು ಕಡಿಮೆ ಮಾಡುವಲ್ಲಿ ಗಣನೀಯ ಪಾತ್ರವನ್ನು ವಹಿಸುತ್ತವೆ. ಸರ್ಕಾರಕ್ಕೆ ಆರ್ಥಿಕ ನಷ್ಟವಾಗಿದೆಯೆಂದರೆ ಖಚಿತವಾಗಿ ಸಮುದಾಯಕ್ಕೆ ಅದು ತಟ್ಟಿದೆ ಅಥವಾ ತಟ್ಟುತ್ತದೆ ಎಂದೇ ಅರ್ಥ. ಹೀಗಿದ್ದೂ, ಪ್ರತಿಯೊಂದು ಪರಿಹಾರಕ್ಕೂ ನಾವು ಪದೇ ಪದೇ ಸರ್ಕಾರವನ್ನೇ ಅವಲಂಬಿಸುವುದಾದರೆ, ಪ್ರಾಯಶ್ಚಿತ್ತ ಪಡಬೇಕಾದದ್ದು ಸರ್ಕಾರವಲ್ಲ, ಸಮುದಾಯವೇ ಎನ್ನುವುದನ್ನು ನಾವು ನೆನಪಿನಲ್ಲಿ ಇಡಬೇಕು.



ದೇಶದ ದೊಡ್ಡ ದುರಂತವೆಂದರೆ ಕಾಳಸಂತೆಕೋರರ ಹಾವಳಿ. ದವಸಧಾನ್ಯ ಇರಲಿ, ಔಷಧೀಯ ಸಾಮಗ್ರಿಯಿರಲಿ, ಆಸ್ಪತ್ರೆಗಳಲ್ಲಿ ಹಾಸಿಗೆಗಳಿರಲಿ, ಪ್ರಾಣವಾಯುವೇ ಇರಲಿ ಯಾವುದೇ ಭೇದವಿಲ್ಲದೆ ಸ್ವಾರ್ಥ-ವಂಚನೆಯ ಉದ್ದೇಶದಿಂದ ಕೃತಕ ಅಭಾವ ಸೃಷ್ಟಿಸುವುದು. ಇದರಲ್ಲಿ ಪಕ್ಷಾತೀತವಾಗಿ ರಾಜಕೀಯ ನೇತಾರರ ಕೈವಾಡವಿದ್ದೇ ಇರುತ್ತದೆ. ಎಲ್ಲಿಯವರೆಗೂ ನಮ್ಮ ಧುರೀಣರಲ್ಲಿ ಸಮಷ್ಟಿಪ್ರಜ್ಞೆಯ ಕಾಳಜಿ ಉದಿಸುವುದಿಲ್ಲವೋ ಅಲ್ಲಿಯವರೆಗೂ ಯಾವ ನಿಯಮಾವಳಿ-ನಿಲುವುಗಳೂ ಸಾರ್ವಜನಿಕರ ರಕ್ಷಣೆಗೆ ಒದಗಿ ಬರಲಾರವು.

ಪ್ರಸ್ತುತ ಜನಸಮೂಹಕ್ಕೆ ಸಂಶಯಾತೀತ ನಂಬಿಕೆ-ಸ್ಫೂರ್ತಿಯನ್ನು ತುಂಬುವ, ಬಹುಮುಖ್ಯವಾಗಿ ಆತ್ಮವಿಶ್ವಾಸವನ್ನು ವರ್ಧಿಸುವ ಜರೂರು ಇದೆ.

ದೀರ್ಘಾವಧಿಯ ಲಾಕ್‌ಡೌನ್ ತಡೆಗಾಗಿ ಅಲ್ಪಾವಧಿಯ ಭಾಗಶಃ ಲಾಕ್‌ಡೌನ್ ನಿಯಮಗಳನ್ನು ಸಮರ್ಪಕವಾಗಿ ಶಿರಸಾವಹಿಸಿ ಪಾಲಿಸೋಣ. ನಮ್ಮ ನಮ್ಮ ಆರೋಗ್ಯ ರಕ್ಷಣೆಗೆ ಸ್ವಯಂ ಸಿದ್ಧರಾಗೋಣ.

ವಾಚಕರ ವಾಣಿ

ಓ ಮಾನವ, ನೀನೆಷ್ಟು ಸಣ್ಣವ...

ಕಾಡಿನ ಪುನುಗು ಬೆಕ್ಕಿನ ಮಲವು ಸುಗಂಧದ್ರವ್ಯವಂತೆ. ಹಾಗೇ, ಸಾಗರದಾಳದ ಅನಾಮಿಕ ತಿಮಿಂಗಿಲದ ವಾಂತಿಗೂ ದೊಡ್ಡ ಬೆಲೆ. ಅಷ್ಟೇ ಅಲ್ಲ ಅದಕ್ಕೆ ಕಾನೂನಿನ ಬಲ ಬೇರೆ. ಆದರೆ ಕೊರೊನಾದ ಈ ಕಾಲಘಟ್ಟದಲ್ಲಿ ಮನುಷ್ಯನ ಜೀವಕ್ಕೆ ಇರುವ ಬೆಲೆ ಎಷ್ಟು ಎಂಬುವೆಲ್ಲದರ ಕುರಿತ ಪತ್ರಿಕಾ ವರದಿಗಳು (ಪ್ರ.ವಾ., ಏ. 25) ಗಮನಸೆಳೆದವು. ಆದರೆ ತಿಮಿಂಗಿಲದ ವಾಂತಿಗೆ ಸಂಬಂಧಿಸಿದ ವರದಿಯ ಕೆಳಗೆ ಇದ್ದ ಚಿತ್ರಸಹಿತ ಸುದ್ದಿಯೊಂದರಲ್ಲಿ ಮಳವಳ್ಳಿಯ ತಮ್ಮ ಮನೆಯ ಮುಂದಿನ ಜಗಲಿಯ ಮೇಲೆ ಕೋವಿಡ್ ಶಂಕಿತ ಮಹಿಳೆಯೊಬ್ಬರ ಶವ ದಿಕ್ಕಿಲ್ಲದೇ ಬಿದ್ದಿದ್ದದ್ದು, ಯಾರೂ ಅದರತ್ತ ಸುಳಿಯದಿದ್ದುದು, ಮಾನವೀಯತೆ ಮರೆಯಾಗಿದ್ದನ್ನು ಓದಿ ಮನ ಕಲಕಿತು. ಉಸಿರು ಇದ್ದಾಗ ಪ್ರತಿಯೊಂದರಲ್ಲೂ ಆಧಿಪತ್ಯ ಸಾಧಿಸುವ ತವಕದ ಮನುಷ್ಯನ ಬೆಲೆ, ಉಸಿರು ನಿಂತ ಮೇಲೆ ಎಷ್ಟು ಎಂಬುದನ್ನು ಈ ವರದಿಗಳು ಅನಾವರಣಗೊಳಿಸಿದವು. ಓ ಮಾನವ, ಈ ಪ್ರಕೃತಿಯಲ್ಲಿ ನೀನೆಷ್ಟು ಸಣ್ಣವ ಎಂದು ಅಂತರಾಳದಲ್ಲಿ ಕೇಳಿಕೊಳ್ಳುವಂತಾಯಿತು.

ನಾರಾಯಣರಾವ ಕುಲಕರ್ಣಿ, ಹಿರೇಅರಳಿಹಳ್ಳಿ, ಯಲಬುರ್ಗಾ

ಆಂಬುಲೆನ್ಸ್ ಕೊರತೆ: ಪರ್ಯಾಯ ವ್ಯವಸ್ಥೆಯಾಗಲಿ

ಕೊರೊನಾ ಕಾರಣದಿಂದ ಬೆಂಗಳೂರು ನಗರದಲ್ಲಿ ಈಗ ತಲೆದೋರಿರುವ ಆರೋಗ್ಯ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ತುರ್ತು ನಿಗಾ ಘಟಕಗಳಲ್ಲಿ (ಐಸಿಯು) ಹಾಸಿಗೆಗಳ ಕೊರತೆ, ಆಂಬುಲೆನ್ಸ್‌ಗಳ ಅಭಾವ ಈ ಎರಡೂ ಸಮಸ್ಯೆಗಳನ್ನು ಪರಿಗಣಿಸಿ ಒಂದು ಪರಿಹಾರ ಕಂಡುಕೊಳ್ಳಬಹುದಾದ ಸಾಧ್ಯತೆ ಇದೆ. ಆಂಬುಲೆನ್ಸ್‌ಗಳನ್ನು ಸ್ಮಶಾನಕ್ಕೆ ಶವ ಸಾಗಿಸುವುದು ಹಾಗೂ ಅಲ್ಲಿ ಗಂಟೆಗಟ್ಟಲೆ ಕಾಯುವುದಕ್ಕಾಗಿ ಬಳಸುತ್ತಿರುವುದು ದುರ್ಬಳಕೆ ಅನ್ನಿಸುತ್ತದೆ. ಅದರ ಬದಲಿಗೆ ಶವ ಸಾಗಿಸಲು ಬೇರೆ ವ್ಯವಸ್ಥೆ ಮಾಡಿ, ಆಂಬುಲೆನ್ಸ್‌ಗಳನ್ನು ತುರ್ತು ಸೇವೆಗೆ ಮತ್ತು ಐಸಿಯು ಬೆಡ್‌ಗಳಾಗಿ ಬಳಸಬಹುದಲ್ಲವೇ? ಅಥವಾ ಸ್ಮಶಾನದಲ್ಲಿ ಟೋಕನ್ ಮಾದರಿಯಲ್ಲಿ ಶವ ಇಳಿಸಿ, ಆಂಬುಲೆನ್ಸ್ ಕೂಡಲೇ ಹಿಂದಿರುಗುವಂತೆ ಮಾಡಬಹುದಲ್ಲವೇ?

ರಾಮಚಂದರ್ ಗಿರಿ, ಬೆಂಗಳೂರು

ಕನ್ನಡಕದ ಅಂಗಡಿಗೆ ಬೇಕು ವಿನಾಯಿತಿ

ವಾರಾಂತ್ಯ ಕರ್ಫ್ಯೂ ಅವಧಿಯನ್ನು ವಾರದ ಎಲ್ಲಾ ದಿನಗಳಲ್ಲೂ ಮುಂದುವರಿಸಲು ಸರ್ಕಾರ ಗಂಭೀರ ಚಿಂತನೆ ನಡೆಸಿದೆ ಎಂದು ವರದಿಯಾಗಿದೆ (ಪ್ರ.ವಾ., ಏ. 25). ಹೀಗಿರುವಾಗ, ಆ ಅವಧಿಯಲ್ಲಿ ಅಗತ್ಯ ಸೇವೆ ಎಂದು ಪರಿಗಣಿಸಿ ಕನ್ನಡಕದ ಅಂಗಡಿಗಳನ್ನು ತೆರೆದಿಡಲು ಅವಕಾಶವಿರಬೇಕು. ಕಣ್ಣಿನ ಆಸ್ಪತ್ರೆಗಳೇ ತೆರೆದಿರುವಾಗ ಕನ್ನಡಕದ ಅಂಗಡಿಗಳನ್ನು ಮುಚ್ಚಿದರೆ, ದೃಷ್ಟಿದೋಷ ಇರುವವರು ಕನ್ನಡಕಗಳನ್ನು ಪಡೆಯುವುದಾದರೂ ಹೇಗೆ?

ಹಿಂದೆ ಸೆಪ್ಟೆಂಬರ್‌ನಲ್ಲಿ ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ ಕಣ್ಣಿಗೆ ಸಂಬಂಧಿಸಿದ ಎಲ್ಲಾ ಚಿಕಿತ್ಸೆಗಳನ್ನು ಸ್ಥಗಿತಗೊಳಿಸಿದಾಗ, ನೂರಾರು ರೋಗಿಗಳು ಶಾಶ್ವತವಾಗಿ ದೃಷ್ಟಿ ಕಳೆದುಕೊಳ್ಳುವ ಆತಂಕ ಎದುರಾಗಿತ್ತು. ಆದ್ದರಿಂದ ಕರ್ಫ್ಯೂ ಅಥವಾ ಲಾಕ್‌ಡೌನ್ ಸಂದರ್ಭದಲ್ಲಿ ಕನ್ನಡಕದ ಅಂಗಡಿಗಳನ್ನು ತೆರೆಯಲು ಅವಕಾಶವಿರಬೇಕು.

ಇಂದಿರಾ ಶ್ರೀಧರ್, ಮಳಲಕೆರೆ

ಕಸಾಪ ಚುನಾವಣೆ: ಮುಂದೂಡಿಕೆ ಸಲ್ಲ

ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಹಾಗೂ ಜಿಲ್ಲಾ ಘಟಕಗಳ ಅಧ್ಯಕ್ಷ ಸ್ಥಾನಗಳಿಗೆ ಮೇ 9ರಂದು ನಿಗದಿಯಾಗಿರುವ ಚುನಾವಣೆಯನ್ನು ಯಾವುದೇ ಕಾರಣಕ್ಕೂ ಮುಂದೂಡುವುದು ಸರಿಯಲ್ಲ. ರಾಜ್ಯ ಹಾಗೂ ಹೊರರಾಜ್ಯಗಳ ಕೆಲವು ಕಡೆ ಪರಿಷತ್ತಿನ ಆಜೀವ ಸದಸ್ಯರು ಮತದಾನ ಮಾಡುತ್ತಾರೆ. ಎಲ್ಲಾ ಸೇರಿದರೆ ಸುಮಾರು 3.10 ಲಕ್ಷ ಮಂದಿ ಆಗಬಹುದು. ಅವರಲ್ಲಿ 30 ಸಾವಿರದಷ್ಟು ಸದಸ್ಯರು ಮರಣ ಹೊಂದಿದವರು, ವಿಳಾಸ ಬದಲಾದವರು ಇದ್ದಾರೆ. ಒಂದು ವರ್ಷಕ್ಕೂ ಹೆಚ್ಚು ಕಾಲದಿಂದ ಹಣ ಖರ್ಚು ಮಾಡಿಕೊಂಡು, ರಾಜ್ಯದಾದ್ಯಂತ ಪ್ರವಾಸ ಮಾಡಿ ಆಜೀವ ಸದಸ್ಯರನ್ನು ಭೇಟಿಯಾದ ಅಭ್ಯರ್ಥಿಗಳು ಇದ್ದಾರೆ.

ಬೇರೆ ರಾಜ್ಯಗಳಲ್ಲಿ ವಿಧಾನಸಭೆ ಚುನಾವಣೆ ನಡೆದಿರುವಾಗ, ಕುಂಭಮೇಳದಲ್ಲಿ ಲಕ್ಷಾಂತರ ಜನ ಸೇರಿದಾಗ ಇಲ್ಲದ ಕಾನೂನು ಪಾಲನೆ, ಪರಸ್ಪರರ ನಡುವೆ ಕಾಣದ ಅಂತರ, ಆತಂಕ ಈಗ ಮಾತ್ರ ಏಕೆ? ಬೆಂಗಳೂರಿನಲ್ಲಿ ಕೊರೊನಾ ಸೋಂಕು ಹೆಚ್ಚುತ್ತಿರುವುದು ನಿಜವಾದರೂ, ಈ ಕಾರಣವೊಂದನ್ನೇ ಮುಂದಿಟ್ಟುಕೊಂಡು ಪರಿಷತ್ತಿನ ಚುನಾವಣೆ ಮುಂದೂಡುವುದು ಸರಿಯಲ್ಲ. ಕೊರೊನಾ ನಿಯಮಾವಳಿಯನ್ನು ಕಟ್ಟುನಿಟ್ಟಾಗಿ ಪಾಲಿಸಿ ಮತದಾನ ಮಾಡಬಹುದು. ಜೊತೆಗೆ ಮೇ 9ರ ಭಾನುವಾರ ಲಾಕ್‌ಡೌನ್ ಇದ್ದರೂ ಆ ದಿನ ವಿಶೇಷ ರಿಯಾಯಿತಿ ನೀಡಿ, ಚುನಾವಣಾ ಆಯೋಗ ಹಾಗೂ ಸರ್ಕಾರವು ಮತದಾನಕ್ಕೆ ಅನುವು ಮಾಡಿಕೊಡಬೇಕು.

ಆರ್.ಜಿ.ಹಳ್ಳಿ ನಾಗರಾಜ, ಬೆಂಗಳೂರು

ಗೊಂದಲ...

ಕೋವಿಡ್ ನಿಯಂತ್ರಣಕ್ಕಾಗಿ
ಭಾರತಕ್ಕೆ ಸಹಾಯಹಸ್ತ
ಚಾಚಲು ಪಾಕಿಸ್ತಾನ ಸಿದ್ಧ...
ಆದರೆ, ತನ್ನಲ್ಲಿ ಇದ್ದರೂ
ಅಮೆರಿಕ ಕೊಡುತ್ತಿಲ್ಲ
ಉಗ್ರಾಣದಲ್ಲಿ ಕೂಡಿಟ್ಟ ಮದ್ದು...
ಇಬ್ಬರಲ್ಲಿ ಯಾರನ್ನ
ನಂಬುವುದು?
ಗೊಂದಲ...

ಚೆಲುವರಾಜು ಕೆ.
ಧನಗೆರೆ, ಕೊಳ್ಳೇಗಾಲ

ಕರ್ಫ್ಯೂ ಹೇರಿಕೆ: ನೈತಿಕ ಕರ್ತವ್ಯ ಪಾಲನೆಯಾಗಲಿ


ವಾರಾಂತ್ಯ ಕರ್ಫ್ಯೂ ಜನರ ಸಹಕಾರದೊಂದಿಗೆ ಯಶಸ್ವಿಯಾಗಿದೆ. ಸರ್ಕಾರದ ಆದೇಶಕ್ಕೆ ಜನ ತಲೆಬಾಗಿದ್ದಾರೆ. ತಮಗೆ ಇದರಿಂದ ತೊಂದರೆಯಾದರೂ ನೈತಿಕ ಬೆಂಬಲ ನೀಡಿದ್ದಾರೆ. ಆದರೆ, ಸರ್ಕಾರ ಇದನ್ನೇ ಮಾನದಂಡವಾಗಿಟ್ಟು ವಾರಪೂರ್ತಿ ಕರ್ಫ್ಯೂ ಹೇರಿದರೆ ಶ್ರೀಸಾಮಾನ್ಯನ ಬದುಕು ಮೂರಾಬಟ್ಟೆಯಾಗುತ್ತದೆ. ಅದರ ಬದಲಾಗಿ, ಈಗಿರುವಂತೆ ವಾರಾಂತ್ಯ ಕರ್ಫ್ಯೂ ಜಾರಿಯಲ್ಲಿರಿಸಿ, ಉಳಿದ ದಿನ ಅತ್ಯಂತ ಕಟ್ಟುನಿಟ್ಟಾಗಿ ಕೊರೊನಾ ನಿಯಮಾವಳಿಯನ್ನು ಜಾರಿಗೊಳಿಸಿ ಜನರ ಬದುಕಿನ ಕಾಯಕಕ್ಕೆ ಅನುವು ಮಾಡಿಕೊಡಬೇಕು. ಹಿಂದೆ ಲಾಕ್‌ಡೌನ್ ಜಾರಿಗೆ ತಂದಾಗ ಬಡವರು ಒಂದು ತುತ್ತಿನ ಅನ್ನಕ್ಕಾಗಿ ಪರದಾಡಿದ್ದನ್ನು ನಾವು ನೋಡಿದ್ದೇವೆ. ವಾಸ್ತವ ಹೀಗಿರುವಾಗ, ಈ ಬಗ್ಗೆ ಗಮನಹರಿಸಬೇಕಾದದ್ದು ಸರ್ಕಾರದ ನೈತಿಕ ಕರ್ತವ್ಯ.

ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಹನುಮನ ಜನ್ಮ ಸ್ಥಳ ಯಾವುದು?

ರಾಮಾಯಣ ಮಹಾಕಾವ್ಯದಲ್ಲಿ ಹನುಮಂತ ಅಥವಾ ಆಂಜನೇಯನಿಗೆ ಎಷ್ಟು ಮಹತ್ವವಿದೆ ಎಂಬುದು ಎಲ್ಲರಿಗೂ ಗೊತ್ತು. ಆಂಜನೇಯನ ಬಗ್ಗೆ ಜನರಲ್ಲಿ ಪೂಜ್ಯಭಾವ ಇದೆ. ಆದರೆ, ಆಂಜನೇಯ ಹುಟ್ಟಿದ್ದು ಎಲ್ಲಿ ಎಂಬುದು ಈಗ ದೊಡ್ಡ ಚರ್ಚೆಗೆ ಕಾರಣವಾಗಿದೆ. ಹನುಮ ಹುಟ್ಟಿದ್ದು ತಿರುಪತಿಯಲ್ಲಿ ಎಂದು ತಿರುಪತಿ ತಿರುಮಲ ದೇವಸ್ಥಾನಂ ಟ್ರಸ್ಟ್ ಇತ್ತೀಚೆಗೆ ಹೇಳಿತ್ತು. ಅದಕ್ಕೆ ಪ್ರತಿಯಾಗಿ, ಆಂಜನೇಯ ಹುಟ್ಟಿದ್ದು ಹಂಪಿಯ ಅಂಜನಾದ್ರಿಯಲ್ಲಿ ಎಂಬ ವಾದವೂ ಮುನ್ನೆಲೆಗೆ ಬಂದಿದೆ. ಹನುಮ ಹುಟ್ಟಿದ ಸ್ಥಳ ಎಂದು ನಂಬಲಾಗುವ ಹಲವು ಸ್ಥಳಗಳು ದೇಶದಲ್ಲಿ ಇವೆ


ಅಂಜನಾದ್ರಿ

ಮುನ್ನೆಲೆಗೆ ಬಂದ ಅಂಜನಾದ್ರಿ

ವಿಶ್ವಪ್ರಸಿದ್ಧ ಹಂಪಿಗೆ ಹೊಂದಿಕೊಂಡಿರುವ, ರಾಮನ ಪರಮ ಭಕ್ತ ಆಂಜನೇಯನ ಜನ್ಮಸ್ಥಳ ಎಂದು ಹೇಳಲಾಗುವ ಕಿಷ್ಕಿಂಧೆಯ ಅಂಜನಾದ್ರಿ ಪರ್ವತ ಈಗ ಬಹಳ ಚರ್ಚೆಯಲ್ಲಿದೆ.


ಕಳೆದ ಎರಡು ದಶಕಗಳಲ್ಲಿ ಅಂಜನಾದ್ರಿ ಪರ್ವತದ ಚಹರೆ ದೊಡ್ಡ ಮಟ್ಟದಲ್ಲಿ ಬದಲಾಗಿರುವುದು ನೋಡಿದರೆ ಎಂತಹವರಲ್ಲೂ ಬೆರಗು ಮೂಡುತ್ತದೆ. 20 ವರ್ಷಗಳ ಹಿಂದೆ ಅಂಜನಾದ್ರಿ ಬೆಟ್ಟ ಹತ್ತಿಕೊಂಡು ಹೋಗುವುದಕ್ಕೆ ಮೆಟ್ಟಿಲುಗಳ ಸೌಕರ್ಯವೂ ಇರಲಿಲ್ಲ. ಹಂಪಿ ಸುತ್ತಮುತ್ತಲಿನ ಇತರ ಬೆಟ್ಟಗುಡ್ಡಗಳಂತೆ ಅದು ಕೂಡ ಒಂದಾಗಿತ್ತು. ಆದರೆ, ಇಪ್ಪತ್ತು ವರ್ಷಗಳಲ್ಲಿ ಅದರ ಸ್ವರೂಪವೇ ಬದಲಾಗಿದೆ. ಭಾರತದ ಭೂಪಟದಲ್ಲಿ ಅದಕ್ಕೆ ವಿಶೇಷ ಸ್ಥಾನಮಾನ ಸಿಕ್ಕಿದೆ.

ಚಿಕ್ಕಮಗಳೂರಿನ ಬಾಬಾ ಬುಡನ್‌ಗಿರಿಯ ದತ್ತಮಾಲೆ ಧಾರ್ಮಿಕ ಆಚರಣೆಯ ಮಾದರಿಯಲ್ಲಿ ಅಂಜನಾದ್ರಿಯಲ್ಲಿ ಹನುಮ ಮಾಲೆ ಕಾರ್ಯಕ್ರಮ ಆರಂಭಗೊಂಡಿದೆ. ಅಂದಹಾಗೆ, ಈ ಧಾರ್ಮಿಕ ಆಚರಣೆಗೆ 15 ವರ್ಷಗಳ ಇತಿಹಾಸವಿದೆ. ಆರಂಭದಲ್ಲಿ ಬೆರಳೆಣಿಕೆಯ ಜನರಷ್ಟೇ ಹನುಮಮಾಲೆ ಧರಿಸಿ, ವ್ರತ ಮಾಡುತ್ತಿದ್ದರು. ಈ ಆಚರಣೆಯು ಹಂಪಿ, ಅಂಜನಾದ್ರಿ ಸುತ್ತಮುತ್ತಲಿನ ಸ್ಥಳಗಳಿಗಷ್ಟೇ ಸೀಮಿತವಾಗಿತ್ತು. ಈಗ ಇದು ರಾಜ್ಯದ ಬಹುತೇಕ ಜಿಲ್ಲೆಗಳಿಗೆ ವಿಸ್ತರಿಸಿದೆ. ಪ್ರತಿ ವರ್ಷ ಸಾವಿರಾರು ಸಂಖ್ಯೆಯಲ್ಲಿ ಜನ ಹನುಮ ಮಾಲೆ ಧರಿಸಿ, ಅಂಜನಾದ್ರಿಗೆ ಬಂದು ಮಾಲೆ ವಿಸರ್ಜಿಸಿ ವ್ರತ ಮುಗಿಸುತ್ತಾರೆ.

ಅಂಜನಾದ್ರಿಯನ್ನು ಕೇಂದ್ರೀಕರಿಸಿಕೊಂಡು ರಾಷ್ಟ್ರೀಯ ಸ್ವಯಂ ಸೇವಕ ಸಂಘ, ವಿಶ್ವ ಹಿಂದೂ ಪರಿಷತ್, ಬಜರಂಗ ದಳ ಅನೇಕ ಕಾರ್ಯಕ್ರಮಗಳನ್ನು ಮೇಲಿಂದ ಮೇಲೆ ಆಯೋಜಿಸುತ್ತಿರುತ್ತವೆ. ಈ ಸಂಘಟನೆಗಳ ಮುಖಂಡರು ಭೇಟಿ ನೀಡಿ, ಧಾರ್ಮಿಕ ಸಭೆಗಳನ್ನು ನಡೆಸುತ್ತಾರೆ. ಹಿಂದೂ ಜನಜಾಗೃತಿ ಸಮಾವೇಶವೂ ಇದರ ಭಾಗ.

'ರಾಷ್ಟ್ರೀಯ ಸ್ವಯಂ ಸೇವಕ ಸಂಘ, ಬಿಜೆಪಿಯ ಹೆಚ್ಚಿನ ಮುಖಂಡರು ಅಂಜನಾದ್ರಿಗೆ ಭೇಟಿ ನೀಡಿ, ಹಿಂದೂ ಸಮಾವೇಶವನ್ನು ಒಗ್ಗೂಡಿಸುವ ಕೆಲಸ ಮಾಡುತ್ತಿದ್ದಾರೆ. ಅಂಜನಾದ್ರಿ ಬೆಳವಣಿಗೆಯಲ್ಲೂ ಇವರ ಪಾತ್ರ ದೊಡ್ಡದಿದೆ. ಬೇರೆ ವಿಚಾರಧಾರೆ ಹೊಂದಿದವರೂ ಆಂಜನೇಯನ ಸನ್ನಿಧಿಗೆ ಬರುತ್ತಾರೆ' ಎಂದು ಆರ್‌ಎಸ್‌ಎಸ್ ಮುಖಂಡ ಅನಿಲ್ ಜೋಶಿ ಹೇಳಿದರು.

'ಕಲ್ಯಾಣ ಕರ್ನಾಟಕದಲ್ಲಿ ಬಿಜೆಪಿ ತನ್ನ ಬೇರುಗಳನ್ನು ಇನ್ನಷ್ಟು ಗಟ್ಟಿಗೊಳಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಅಂಜನಾದ್ರಿ, ಹಂಪಿ ಇವೆರಡೂ ಶ್ರೀಮಂತ ಹಿಂದೂ ಸಾಮ್ರಾಜ್ಯದ ಭಾಗ ಎಂದು ಪ್ರಚಾರ ನಡೆಸಿ, ಧರ್ಮದ ಹೆಸರಿನಲ್ಲಿ ದೊಡ್ಡ ಮಟ್ಟದಲ್ಲಿ ಧ್ರುವೀಕರಣಕ್ಕೆ ಮುಂದಾಗಿದೆ. ಅದರಲ್ಲಿ ಅವರಿಗೆ ಯಶಸ್ಸು ಕೂಡ ಸಿಕ್ಕಿದೆ. ಹನುಮಮಾಲೆ ಅಭಿಯಾನವು ದತ್ತಮಾಲೆ ಅಭಿಯಾನದ ಮುಂದುವರಿದ ಭಾಗ' ಎನ್ನುತ್ತಾರೆ ಲೇಖಕ ನಂದೀಶ್ವರ ದಂಡೆ.


ಅಂಜನಾದ್ರಿ ಪರ್ವತದಲ್ಲಿ ಹನುಮ ಜಯಂತಿ ಆಚರಣೆ

ಅಂಜನೇಯ, ರಾಮನ ಜತೆಯಾಗಿದ್ದು ಹಂಪಿಯಲ್ಲಿ

ಶ್ರೀರಾಮಚಂದ್ರನ ಬಗ್ಗೆ ಬಂಟ ಆಂಜನೇಯ, ರಾಮನ ಜತೆಗೂಡಿದ್ದು ಹಂಪಿಯ ತುಂಗಭದ್ರಾ ನದಿಯ ತಟದಲ್ಲಿ ಎಂದು ಪುರಾಣದ ಐತಿಹ್ಯಗಳು ಸಾರುತ್ತವೆ ಎನ್ನುತ್ತಾರೆ ಸಾಹಿತಿಗಳು.

'ಸೀತೆಯನ್ನು ಹುಡುಕಿಕೊಂಡು ಶ್ರೀರಾಮ ಮತ್ತು ಲಕ್ಷ್ಮಣ ಹಂಪಿ ಮಾರ್ಗವಾಗಿ ಬರುತ್ತಾರೆ. ಪ್ರತಿಕೂಲ ವಾತಾವರಣ, ವಾನರ ಸೇನೆಯ ಬೆಂಬಲ ಪಡೆಯಲು ಸುಮಾರು ಆರು ತಿಂಗಳು ಹಂಪಿಯಲ್ಲೇ ತಂಗುತ್ತಾರೆ. ಈ ಸಂದರ್ಭದಲ್ಲಿ ಆಂಜನೇಯ ರಾಮ, ಲಕ್ಷ್ಮಣರ ಜತೆಗೂಡುತ್ತಾನೆ' ಎನ್ನುತ್ತಾರೆ ಹಿರಿಯ ಸಾಹಿತಿ ಮೃತ್ಯುಂಜಯ ರುಮಾಲೆ.

'ಹಂಪಿಯ ಕೋಟಿಲಿಂಗಕ್ಕೆ ರಾಮ ಪೂಜೆ ಸಲ್ಲಿಸಿದ ಎಂಬ ಪ್ರತೀತಿಯಿದೆ. ಇದರ ಸಮೀಪದಲ್ಲೇ ಸೀತೆಯ ಸೆರಗು ಎಂಬ ಕುರುಹಿದ್ದು, ನದಿಯಾಚೆ ಅಂಜನಾದ್ರಿ ಪರ್ವತ ಇದೆ. ರಾಮ ಓಡಾಡಿರುವ ಸ್ಥಳ ಎನ್ನುವ ಕಾರಣಕ್ಕಾಗಿಯೇ ಹಂಪಿಯ ಚಕ್ರತೀರ್ಥ, ಕೋದಂಡರಾಮ ದೇವಸ್ಥಾನಕ್ಕೆ ಇನ್ನಿಲ್ಲದ ಮಹತ್ವ ಇದೆ. ಆದರೆ, ಐತಿಹಾಸಿಕವಾದ ಯಾವ ದಾಖಲೆಗಳು ಇಲ್ಲ' ಎನ್ನುತ್ತಾರೆ ರುಮಾಲೆ.

ಗೋಕರ್ಣವೇ ಜನ್ಮಸ್ಥಳ

'ಆಂಜನೇಯನ ಜನ್ಮಸ್ಥಳ ಕರ್ನಾಟಕ ಎಂಬುದು ನಿಜ. ಆದರೆ, ಅಂಜನಾದ್ರಿ ಅಲ್ಲ, ಆತ ಜನಿಸಿದ್ದು ಗೋಕರ್ಣದಲ್ಲಿ' ಎಂಬ ವಾದವೂ ಇದೆ. 'ಗೋಕರ್ಣ ಆಂಜನೇಯನ ಜನ್ಮಭೂಮಿ, ಅಂಜನಾದ್ರಿಯಲ್ಲಿ ಆತ ಬಾಲ್ಯದ ದಿನಗಳನ್ನು ಕಳೆದಿದ್ದ' ಎಂಬುದು ಗೋಕರ್ಣದ ಸ್ಥಳೀಯರ ವಾದ.

'ರಾಮಾಯಣದ ಪಾತ್ರಗಳಿಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿಗೂ ವಾಲ್ಮೀಕಿ ರಾಮಾಯಣಕ್ಕಿಂತ ಖಚಿತವಾದ ದಾಖಲೆ ಬೇರೆ ಇಲ್ಲ. ಆಂಜನೇಯನ ಜನ್ಮಸ್ಥಳದ ವಿಚಾರವಾಗಿಯೂ ರಾಮಾಯಣದಲ್ಲಿ ಸ್ಪಷ್ಟವಾದ ಉಲ್ಲೇಖ ಇದೆ. ರಾಮಾಯಣದ ಸುಂದರಕಾಂಡದಲ್ಲಿ ಒಂದು ಶ್ಲೋಕವು ಆಂಜನೇಯ ಹುಟ್ಟಿದ್ದು ಗೋಕರ್ಣದಲ್ಲಿ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತದೆ. ಇಲ್ಲಿನ ಕುಡ್ಲೆ ಕಡಲತೀರದ ಕೇತರಿವನದಲ್ಲಿ ಆತನ ಜನ್ಮಸ್ಥಳವಿದೆ' ಎಂದು ರಾಮಚಂದ್ರಾಪುರ ಮಠದ ರಾಘವೇಶ್ವರ ಸ್ವಾಮೀಜಿ ಇತ್ತೀಚೆಗೆ ಹೇಳಿದ್ದರು.

'ಆಂಜನೇಯನು ಮೊದಲ ಬಾರಿಗೆ ಸೀತಾಮಾತೆಯನ್ನು ಭೇಟಿ ಮಾಡಿದಾಗ, ಆಕೆಗೆ ತನ್ನ ಪರಿಚಯ ಮಾಡಿಕೊಟ್ಟ ಶ್ಲೋಕವಿದೆ. ಅದರಲ್ಲಿ, 'ಅಂಜನಾದೇವಿಯ ಹೊಟ್ಟೆಯಲ್ಲಿ ಗೋಕರ್ಣದಲ್ಲಿ ನಾನು ಜನಿಸಿದೆ' ಎಂದು ಹನುಮಂತ ಹೇಳಿದ್ದಾನೆ. ಆದ್ದರಿಂದ ಗೋಕರ್ಣ ಆಂಜನೇಯನ ಜನ್ಮಭೂಮಿ, ಕಿಷ್ಕಿಂದೆಯ ಅಂಜನಾದ್ರಿ ಕರ್ಮಭೂಮಿ' ಎಂದು ಅವರು ವಾದಿಸಿದ್ದಾರೆ.

ಗೋಕರ್ಣದ ಕುಡ್ಲೆಯಲ್ಲಿ ಈಗಲೂ ಅನೇಕ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತವೆ. ಅಂಜನೇಯಸ್ವಾಮಿ ಜನ್ಮ ಭೂಮಿ ಅಭಿವೃದ್ಧಿ ಕಾರ್ಯಕ್ರಮಗಳಿಗೂ ಇತ್ತೀಚೆಗೆ ಚಾಲನೆ ನೀಡಲಾಗಿದೆ.

ಅಂಜನೇರಿಯ ಕೋಟೆ

ಮಹಾರಾಷ್ಟ್ರದಲ್ಲೂ ಆಂಜನೇಯನ ಜನ್ಮಸ್ಥಳ ಎನ್ನಲಾದ ಒಂದು ಪ್ರಸಿದ್ಧ ಯಾತ್ರಾ ಸ್ಥಳವಿದೆ. ನಾಸಿಕ್– ತ್ರಯಂಬಕೇಶ್ವರ ರಸ್ತೆಯಲ್ಲಿ, ನಾಸಿಕ್‌ನಿಂದ 20 ಕಿ.ಮೀ. ದೂರದಲ್ಲಿರುವ 'ಅಂಜನೇರಿ'ಯನ್ನು ಹನುಮಂತನ ಜನ್ಮಸ್ಥಳ ಎಂದು ಹೇಳಲಾಗುತ್ತದೆ.

ಅಂಜನೇರಿಯ ಹಚ್ಚಹಸಿರಿನ ಬೆಟ್ಟಗಳ ಸಾಲಿನ ಮಧ್ಯೆ ಒಂದು ಕೋಟೆ ಇದೆ. ಈ ಪರಿಸರವು ಬಹುತೇಕ ಹಂಪಿಯನ್ನೇ ಹೋಲುತ್ತದೆ. ಮಹಾರಾಷ್ಟ್ರದ ಪ್ರಮುಖ ಪರಿಸರ ಮತ್ತು ಧಾರ್ಮಿಕ ಪ್ರವಾಸಿ ಸ್ಥಳಗಳಲ್ಲಿ ಅಂಜನೇರಿಯೂ ಒಂದು. ಆ ಕೋಟೆಯಲ್ಲೇ ಹನುಮಂತ ಹುಟ್ಟಿದ್ದು ಎಂಬ ಐತಿಹ್ಯವಿದೆ. ಕೋಟೆಯೊಳಗೆ ಆಂಜನೇಯ ದೇವಸ್ಥಾನವಿದೆ. ಹನುಮಂತನ ತಾಯಿ ಅಂಜನಾದೇವಿಯ ಹೆಸರನ್ನು ಈ ಸ್ಥಳಕ್ಕೆ ಇಡಲಾಗಿದೆ. ಅದೇ ಅಂಜನೇರಿಯಾಗಿದೆ ಎಂದು ಸ್ಥಳೀಯರು ಹೇಳುತ್ತಾರೆ.

ಜಾರ್ಖಂಡ್‌ನ ಅಂಜನ ಹಳ್ಳಿ

ಜಾರ್ಖಂಡ್‌ನ ಗುಮ್ಲಾ ಜಿಲ್ಲಾ ಕೇಂದ್ರದಿಂದ 20 ಕಿಲೋಮೀಟರ್ ದೂರದಲ್ಲಿರುವ, ದಟ್ಟ ಕಾನನದಿಂದ ಕೂಡಿದ ಅಂಜನ ಹಳ್ಳಿಯೇ ಹನುಮಂತನ ಹುಟ್ಟಿದ ಸ್ಥಳ ಎಂದು ಅಲ್ಲಿನ ಸ್ಥಳಪುರಾಣಗಳು ಹೇಳುತ್ತವೆ. ಈ ಹಳ್ಳಿಯ ಸಮೀಪ ಅಂಜನ ಜಲಾಶಯವಿದೆ.

ಅಂಜನಾದೇವಿಯಿಂದಾಗಿ ಈ ಗ್ರಾಮಕ್ಕೆ ಅಂಜನ ಎಂಬ ಹೆಸರು ಬಂದಿದೆ ಎಂದು ಹೇಳಲಾಗುತ್ತದೆ. ಈ ಗ್ರಾಮದಿಂದ 4 ಕಿಲೋಮೀಟರ್ ದೂರದಲ್ಲಿ ಅಂಜನಿ ಗುಹೆ ಇದೆ. ಇಲ್ಲಿ ಅಂಜನಾದೇವಿ ವಾಸಿಸಿದ್ದರು ಎಂದು ಹೇಳಲಾಗುತ್ತದೆ. ಈ ಗುಹೆಯಲ್ಲಿ ಅಂಜನಾದೇವಿ ಅವರದ್ದು ಎನ್ನಲಾದ ಹಲವು ವಿಗ್ರಹಗಳಿವೆ. ಗುಹೆಯ ಪ್ರವೇಶದ್ವಾರದಲ್ಲಿ ಬೃಹತ್ ಶಿಲೆಯಿದೆ.

ಹರಿಯಾಣದ ಕೈಥಲ್

ಪುರಾಣಗಳ ಪ್ರಕಾರ, ಮಹಾಭಾರತದ ಕಾಲದಲ್ಲಿ ರಾಜ ಯುಧಿಷ್ಠಿರನು ಕೈಥಲ್ ಎಂಬ ಊರನ್ನು ಕಟ್ಟಿದ. ಇತಿಹಾಸದಲ್ಲಿ ಈ ಊರಿನ ಹೆಸರು ಉಲ್ಲೇಖವಾಗಿದೆ. ಕಪಿಸ್ಥಳ ಎಂಬ ಪದದಿಂದ ಕೈಥಲ್ ಪದ ಹುಟ್ಟಿದೆ ಎಂದು ಇತಿಹಾಸಕಾರರು ಹೇಳುತ್ತಾರೆ. ಕಪಿಸ್ಥಳ ಎಂದರೆ ಕಪಿಗಳು ವಾಸಿಸುವ ಸ್ಥಳ. ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಪಿಗಳು ಇವೆ. ಪುರಾಣಗಳ ಪ್ರಕಾರ ವಾನರ ಸೇನೆಯ ನಾಯಕ ಎನಿಸಿರುವ ಹನುಮಂತ ಇಲ್ಲಿ ಜನಿಸಿದ್ದ. ಆಂಜನೇಯನ ತಾಯಿ ಅಂಜನಿಗೆ ಸಂಬಂಧಿಸಿದ ದೇವಾಲಯವೂ ಇಲ್ಲಿದೆ.

ಗುಜರಾತಿನ ಅಂಜನಿ ಬೆಟ್ಟ

ಗುಜರಾತಿನ ಡಾಂಗ್ ಜಿಲ್ಲೆಯು ಬುಡಕಟ್ಟು ಸಮುದಾಯದಿಂದ ಕೂಡಿದ ಪ್ರದೇಶ. ಡಾಂಗ್ ಜಿಲ್ಲೆಯ ಅಂಜನಾ ಬೆಟ್ಟದಲ್ಲಿರುವ ಅಂಜನಿ ಗುಹೆಯಲ್ಲಿ ಆಂಜನೇಯ ಜನಿಸಿದ ಎಂದು ಇಲ್ಲಿನ ಬುಡಕಟ್ಟು ಜನರು ನಂಬುತ್ತಾರೆ. ದಟ್ಟ ಅಡವಿಯಿಂದ ಸುತ್ತುವರಿದಿರುವ ಈ ಗುಹೆ ಅತಿ ಪುರಾತನವಾದದ್ದು. ಆಂಜನೇಯನ ತಾಯಿ ಅಂಜನಾ ಮತ್ತು ತಂದೆ ಕೇಸರಿ ಅವರು ಈ ಗುಹೆಯಲ್ಲಿ ವಾಸವಿದ್ದರು ಎಂಬ ಐತಿಹ್ಯವಿದೆ. ಗುಹೆಯ ಪ್ರವೇಶದ್ವಾರವನ್ನು ಕಲ್ಲಿನಿಂದ ಮುಚ್ಚಲಾಗಿದೆಯಾದರೂ, ಸಣ್ಣ ಕಿಂಡಿಯ ಮೂಲಕ ಇಲ್ಲಿ ಬುಡಕಟ್ಟು ಜನರು ಆಂಜನೇಯನ ಜನ್ಮಸ್ಥಳದ ದರ್ಶನ ಪಡೆಯುತ್ತಾರೆ.

ಅಂಜನಾದೇವಿ ಹುಟ್ಟಿದ ಸ್ಥಳ ಕೂಡ ಇದೇ ಗುಹೆ ಎಂಬ ನಂಬಿಕೆ ಇದೆ. ಸ್ಥಳಪುರಾಣದ ಪ್ರಕಾರ, ಮುನಿಸಿಕೊಂಡ ದೇವಿಯನ್ನು ಸಂತೋಷಪಡಿಸಲು ಇಲ್ಲಿನ ಆದಿವಾಸಿಗಳು ಮೇಕೆಯನ್ನು ಗುಹೆಯ ಮುಂದೆ ಬಲಿ ಕೊಟ್ಟಿದ್ದರು. ಇದಕ್ಕೆ ಕೋಪಗೊಂಡ ದೇವಿ, ಗುಹೆಯ ಪ್ರವೇಶದ್ವಾರವನ್ನು ಮುಚ್ಚಿದರು ಎನ್ನಲಾಗುತ್ತದೆ. ಮುಚ್ಚಿರುವ ಬಂಡೆಯನ್ನು ತೆಗೆಯಲು ಯತ್ನಿಸುವವರು ಕಷ್ಟಗಳಿಗೆ ಗುರಿಯಾಗುತ್ತಾರೆ ಎಂಬ ನಂಬಿಕೆಯಿದೆ.

ವರದಿ: ಉದಯ ಯು, ಶಶಿಕಾಂತ ಎಸ್. ಶೆಂಬೆಳ್ಳಿ, ಅಮೃತಕಿರಣ್ ಬಿ.ಎಂ.

ಪಶ್ಚಿಮ ಬಂಗಾಳ: 34 ಕ್ಷೇತ್ರಗಳಲ್ಲಿ ಚುನಾವಣೆ

ಏಳನೇ ಹಂತದ ಮತದಾನ ಇಂದು

ಕೋಲ್ಕತ್ತ (ಪಿಟಿಐ): ಕೊರೊನಾ ಎರಡನೇ ಅಲೆಯ ಮಧ್ಯೆಯೇ ಪಶ್ಚಿಮ ಬಂಗಾಳದ 34 ವಿಧಾನಸಭಾ ಕ್ಷೇತ್ರಗಳಿಗೆ ಸೋಮವಾರ ಮತದಾನ ನಡೆಯಲಿದೆ. ರಾಜ್ಯದಲ್ಲಿ ನಡೆಯಲಿರುವ ಏಳನೇ ಹಂತದ ಮತದಾನದಲ್ಲಿ ಸುಮಾರು 86 ಲಕ್ಷ ಅರ್ಹ ಮತದಾರರು 284 ಅಭ್ಯರ್ಥಿಗಳ ಭವಿಷ್ಯ ನಿರ್ಧರಿಸಲಿದ್ದಾರೆ.

ಸೋಮವಾರ ಮತದಾನಕ್ಕೆ ಒಳಗಾಗಲಿರುವ ಕ್ಷೇತ್ರಗಳಲ್ಲಿ ಭವಾನಿಪುರ ಕ್ಷೇತ್ರದ ಮೇಲೆ ಎಲ್ಲರ ದೃಷ್ಟಿ ನೆಟ್ಟಿದೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಈ ಕ್ಷೇತ್ರದ ನಿವಾಸಿ ಅಷ್ಟೇ ಅಲ್ಲ, ಪ್ರಸಕ್ತ ಈ ಕ್ಷೇತ್ರದ ಪ್ರತಿನಿಧಿಯೂ ಆಗಿದ್ದಾರೆ. ಈ ಬಾರಿ ಅವರು ನಂದಿಗ್ರಾಮ ಕ್ಷೇತ್ರದಲ್ಲಿ, ಒಂದು ಕಾಲದ ತಮ್ಮ ಸಮೀಪವರ್ತಿ, ಈಗ ಬಿಜೆಪಿಯ ಅಭ್ಯರ್ಥಿಯಾಗಿರುವ ಸುವೇಂದು ಅಧಿಕಾರಿ ವಿರುದ್ಧ ಸ್ಪರ್ಧಿಸಿದ್ದಾರೆ. ಭವಾನಿಪುರದಲ್ಲಿ ಈ ಬಾರಿ ಹಿರಿಯ ರಾಜಕಾರಣಿ, ರಾಜ್ಯದ ಇಂಧನ ಸಚಿವ ಶೋಭನದೇವ್ ಚಟ್ಟೋಪಾಧ್ಯಾಯ ಟಿಎಂಸಿಯ ಅಭ್ಯರ್ಥಿಯಾಗಿದ್ದಾರೆ. ಚುನಾವಣೆಗೂ ಕೆಲವೇ ತಿಂಗಳ ಹಿಂದೆ ಟಿಎಂಸಿ ತ್ಯಜಿಸಿದ ಖ್ಯಾತ ನಟ ರುದ್ರನೀಲ್ ಘೋಷ್ ಅವರು ಇಲ್ಲಿ ಬಿಜೆಪಿಯ ಅಭ್ಯರ್ಥಿ. ಘೋಷ್ ಅವರು ಇದೇ ಮೊದಲಬಾರಿಗೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ. ಸಚಿವ ಫಿರ್ಹಾದ್ ಹಕೀಮ್ (ಟಿಎಂಸಿ), ನಿವೃತ್ತ ಲೆ. ಜನರಲ್ ಸುಬ್ರತ ಶಾ ಅವರ ಭವಿಷ್ಯವೂ ಸೋಮವಾರದ ಮತದಾನದಲ್ಲಿ ನಿರ್ಧಾರವಾಗಲಿದೆ.

ಬಿಗಿ ಭದ್ರತೆ: ಈ ಹಿಂದೆ ನಡೆದ ಆರು ಹಂತಗಳ ಮತದಾನದ ಸಂದರ್ಭದಲ್ಲಿ ಅಲ್ಲಲ್ಲಿ ಗಲಭೆ, ಹಿಂಸಾಚಾರಗಳು ನಡೆದಿರುವುದರಿಂದ ಸೋಮವಾರ ಮತದಾನಕ್ಕೆ ಒಳಗಾಗಲಿರುವ ಕ್ಷೇತ್ರಗಳಲ್ಲಿ ಬಿಗಿ ಭದ್ರತಾ ವ್ಯವಸ್ಥೆ ಮಾಡಲಾಗಿದೆ.

'ಒಟ್ಟು 12,068 ಮತಗಟ್ಟೆಗಳಲ್ಲಿ ಕೇಂದ್ರೀಯ ಭದ್ರತಾಪಡೆಯ 796 ತುಕಡಿಗಳನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ. ಮತದಾನದ ಸಂದರ್ಭದಲ್ಲೂ ಕೋವಿಡ್ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುವುದು' ಎಂದು ಚುನಾವಣಾ ಆಯೋಗ ಹೇಳಿದೆ.

ಪ್ರಜಾ ಮತ 2021
ಜನತಂತ್ರದ ಹಬ್ಬ

'ಬಿಜೆಪಿ ರ‍್ಯಾಲಿಯಲ್ಲಿ 10 ಸಾವಿರ ಜನ'

ಚುನಾವಣಾ ಆಯೋಗದ ಕೋವಿಡ್ ತಡೆ ಮತ್ತು ಸುರಕ್ಷಾ ಮಾರ್ಗಸೂಚಿಗಳನ್ನು ಬಿಜೆಪಿ ಉಲ್ಲಂಘಿಸುತ್ತಿದೆ. ಸಮಾವೇಶಗಳಲ್ಲಿ ಭಾರಿ ಸಂಖ್ಯೆಯಲ್ಲಿ ಜನರನ್ನು ಸೇರಿಸುತ್ತಿದೆ. ಚುನಾವಣಾ ಆಯೋಗವು ಈ ಬಗ್ಗೆ ಗಮನ ಹರಿಸಬೇಕು.ಮಾಲ್ಡಾದಲ್ಲಿ ಶನಿವಾರ ನಡೆಸಿದ ಸಭೆಯಲ್ಲಿ ಬಿಜೆಪಿ 10 ಸಾವಿರ ಜನರನ್ನು ಸೇರಿಸಿತ್ತು ಟಿಎಂಸಿ ಸಂಸದ ಅಭಿಷೇಕ್ ಬ್ಯಾನರ್ಜಿ ಅವರು ಫೇಸ್‌ಬುಕ್ ನೇರ ಸಂವಾದದಲ್ಲಿ ಹೇಳಿದ್ದಾರೆ.

ಚುನಾವಣಾ ಕಣದಲ್ಲಿ

- **ಅಭ್ಯರ್ಥಿ ಸಾವು:** ಖರ್ದಾ ವಿಧಾನಸಭಾ ಕ್ಷೇತ್ರದ ಟಿಎಂಸಿ ಅಭ್ಯರ್ಥಿ ಕಾಜಲ್ ಸಿನ್ಹಾ ಅವರು ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ಎರಡು ದಿನಗಳ ಹಿಂದೆ ಅವರಿಗೆ ಕೋವಿಡ್ ದೃಢಪಟ್ಟಿತ್ತು. ಖರ್ದಾ ಕ್ಷೇತ್ರದಲ್ಲಿ ಇದೇ 22ರಂದು ಮತದಾನ ನಡೆದಿದೆ
- **'ಟಿಎಂಸಿ ಕಾರ್ಯಕರ್ತರು ವಶಕ್ಕೆ':** ಟಿಎಂಸಿ ಮುಖಂಡರನ್ನು ಮತದಾನದ ದಿನ ವಶಕ್ಕೆ ಪಡೆಯುವಂತೆ ಚುನಾವಣಾ ಆಯೋಗದ ವಿಶೇಷ ವೀಕ್ಷಕರು ಪೊಲೀಸರಿಗೆ ಆದೇಶಿಸುತ್ತಿದ್ದಾರೆ ಎಂದು ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ
- **ಬಾಬುಲ್‌ಗೆ ಕೋವಿಡ್:** ಕೇಂದ್ರ ಸಚಿವ ಮತ್ತು ಪಶ್ಚಿಮ ಬಂಗಾಳದ ಟಾಲಿಗಂಜ್ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಾಬುಲ್ ಸುಪ್ರಿಯೊ ಅವರಿಗೆ ಕೋವಿಡ್ ದೃಢಪಟ್ಟಿದೆ. ಅವರು ಪ್ರತಿನಿಧಿಸುತ್ತಿರುವ ಅಸನ್‌ಸೋಲ್ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ವಿಧಾನಸಭಾ ಕ್ಷೇತ್ರಗಳಿಗೆ ಸೋಮವಾರ ಮತದಾನ ನಡೆಯಲಿದೆ

ಮಮತಾಗೆ ನಡ್ಡಾ ತರಾಟೆ

ಮಾಣಿಕ್‌ಚಕ್ (ಪಶ್ಚಿಮ ಬಂಗಾಳ) (ಪಿಟಿಐ): ಕೋವಿಡ್ ಪರಿಸ್ಥಿತಿ ಬಗ್ಗೆ ಕೇಂದ್ರ ಸರ್ಕಾರವನ್ನು ದೂಷಿಸುವ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರು ಪ್ರಧಾನಿ ಕರೆದಿದ್ದ ಮುಖ್ಯಮಂತ್ರಿಗಳ ಸಭೆಗೆ ಗೈರಾಗಿದ್ದು ಏಕೆ ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಪ್ರಶ್ನಿಸಿದ್ದಾರೆ.

ಏಪ್ರಿಲ್ 29ರಂದು ಮತದಾನ ನಡೆಯಲಿರುವ ಮಾಣಿಕ್‌ಚಕ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪರವಾಗಿ ವರ್ಚುವಲ್ ಸಭೆಯಲ್ಲಿ ಭಾಗಿಯಾಗಿ ನಡ್ಡಾ ಮಾತನಾಡಿದರು. ಅಹಂನಿಂದ ಮಮತಾ ಅವರು ಸಭೆಗೆ ಹಾಜರಾಗಲಿಲ್ಲ ಎಂದು ದೂರಿದ ಅವರು, ಬಿಜೆಪಿಗೆ ಸಿಗುತ್ತಿರುವ ಬೆಂಬಲವನ್ನು ನೋಡಿದ ನಂತರ ಅವರ ಆತಂಕ ಅನೇಕ ಪಟ್ಟು ಹೆಚ್ಚಾಗಿದೆ ಎಂದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ದೇಶದೆಲ್ಲೆಡೆ ಕೋವಿಡ್ ರೋಗಿಗಳಿಗೆ ಆಮ್ಲಜನಕದ ಅಭಾವ ಉಂಟಾಗಿದೆ. ಇಂತಹ ಹೊತ್ತಿನಲ್ಲಿ ಫರೀದಾಬಾದ್‌ನ ಸರ್ವೋದಯ ಆಸ್ಪತ್ರೆಯ ವೈದ್ಯರೊಬ್ಬರು ಅಮ್ಲಜನಕ ಸಿಲಿಂಡರ್‌ಗೆ ಪರ್ಯಾಯವಾಗಿ ನೆಬ್ಯುಲೈಸರ್ ಬಳಸಬಹುದು ಎಂದು ಪ್ರಾತ್ಯಕ್ಷಿಕೆ ಮೂಲಕ ತೋರಿಸಿದ್ದಾರೆ. ಈ ವಿಡಿಯೊ ವೈರಲ್ ಆಗಿದೆ. ಇಂತಹ ಸುಲಭ ಪರಿಹಾರ ನೀಡಿದ ವೈದ್ಯರ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ.

ಈ ವಿಡಿಯೊ ತಮ್ಮ ಆಸ್ಪತ್ರೆಗೆ ಸಂಬಂಧಿಸಿದ್ದು ಅಲ್ಲ ಎಂದು ಸರ್ವೋದಯ ಆಸ್ಪತ್ರೆ ಸ್ಪಷ್ಟಪಡಿಸಿದೆ. ವಿಡಿಯೊದಲ್ಲಿರುವ ಮಾಹಿತಿಗೆ ಯಾವುದೇ ವೈಜ್ಞಾನಿಕ ಆಧಾರ ಇಲ್ಲ. ವೈದ್ಯರನ್ನು ಸಂಪರ್ಕಿಸದೇ ಈ ಪ್ರಯತ್ನ ಮಾಡಬೇಡಿ. ಹೀಗೆ ಮಾಡುವುದರಿಂದ ರೋಗ ಇನ್ನಷ್ಟು ತೀವ್ರಗೊಳ್ಳಬಹುದು ಎಂದು ಆಸ್ಪತ್ರೆ ಎಚ್ಚರಿಸಿದೆ. ನೆಬ್ಯುಲೈಸರ್ ಬಳಸಿದರೆ ರಕ್ತದಲ್ಲಿರುವ ಆಮ್ಲಜನಕದ ಪ್ರಮಾಣ ಹೆಚ್ಚುತ್ತದೆ ಎಂಬ ವಾದವನ್ನು ಮೇದಾಂತ ಆಸ್ಪತ್ರೆ ಸರ್ಜನ್ ಅರವಿಂದರ್ ಸಿಂಗ್ ಅಲ್ಲಗಳೆದಿದ್ದಾರೆ. ಹಲವು ವೈದ್ಯರು ಈ ತಂತ್ರವನ್ನು ಒಪ್ಪಿಲ್ಲ ಎಂದು ಆಲ್ಟ್ ನ್ಯೂಸ್ ವರದಿ ಮಾಡಿದೆ. 'ನೆಬ್ಯುಲೈಸರ್ ಬಳಸುವ ವಿಧಾನದ ಬಗ್ಗೆ ರೋಗಿಯೊಬ್ಬರಿಗೆ ಮಾಡಿ ಕಳುಹಿಸಿದ್ದ ವಿಡಿಯೊ ಇದು' ಎಂದು ವಿಡಿಯೊದಲ್ಲಿರುವ ವೈದ್ಯ ಡಾ. ಅಲೋಕ್ ಸ್ಪಷ್ಟಪಡಿಸಿದ್ದಾರೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಮಾನವನ ಅನೂಹ್ಯ ಚೈತನ್ಯ ಶಕ್ತಿ

ಜಾನಪದಗಳು ರಾಜ್ಯಸಾಮ್ರಾಜ್ಯಗಳು ಗುರು |
ಸ್ಥಾನಗಳು ಧರ್ಮಗಳು ಭಾಷೆ ವಿದ್ಯೆಗಳು ||
ಕಾಣಿಸದೆ ಸಾಗಿಹವು ಕಾಲಪ್ರವಾಹದಲಿ |
ಮಾನವತೆ ನಿಂತಿಹುದು – ಮಂಕುತಿಮ್ಮ || 410 ||


ಪದ-ಅರ್ಥ: ಜಾನಪದ = ಜನಪದದ ಸಾಹಿತ್ಯ, ಸಂಗೀತ, ನೃತ್ಯ, ಆಟ ಎಲ್ಲವನ್ನು ಒಳಗೊಂಡದ್ದು, ಗುರುಸ್ಥಾನಗಳು = ಗುರುಪೀಠಗಳು.

ವಾಚ್ಯಾರ್ಥ: ಕಾಲಪ್ರವಾಹದಲ್ಲಿ ಜಾನಪದಗಳು, ರಾಜ್ಯಗಳು ಸಾಮ್ರಾಜ್ಯಗಳು, ಗುರುಪೀಠಗಳು, ಧರ್ಮಗಳು, ಭಾಷೆಗಳು, ವಿದ್ಯೆಗಳು ಎಲ್ಲವೂ ಮರೆಯಾಗಿ ಹೋಗಿವೆ. ಆದರೆ ಮಾನವತೆ ಮಾತ್ರ ನಿಂತಿದೆ.

ವಿವರಣೆ: ಪೂಜ್ಯ ಡಿವಿಜಿಯವರನ್ನು ಆತ್ಮೀಯರಾರೋ ಕೇಳಿದರಂತೆ, 'ಸ್ವಾಮೀ, ತಮಗೆ ಒಬ್ಬನೇ ಮಗ. ಅವನಿಗೂ ಗಂಡುಮಕ್ಕಳಿಲ್ಲ. ಮುಂದೆ ವಂಶ ಹೇಗೆ?' ಡಿವಿಜಿ ಮರಳಿ ಕೇಳಿದರು, 'ರಾಮನ ವಂಶದವರು, ಕೃಷ್ಣನ ವಂಶದವರು ಯಾರಾದರೂ ಇದ್ದಾರೆಯೇ? ಅವರ ವಂಶವೇ ಕಾಲಗರ್ಭದಲ್ಲಿ ಕಳೆದು ಹೋಗಿರುವಾಗ ಗುಂಡಪ್ಪನ ವಂಶದ ಬಗ್ಗೆ ಯಾಕೆ ಚಿಂತೆ?' ಇದು ಸತ್ಯವಲ್ಲವೆ? ಯಾವ ವಂಶವೂ ಉಳಿದಿಲ್ಲ, ಉಳಿಯಲಾರದು. ಕರಗಿ ಹೋಗುವುದೇ ಪ್ರಕೃತಿ ನಿಯಮ. ಯಾವುದೂ ಶಾಶ್ವತವಾಗಿ ಉಳಿಯದೆ ಕಾಲಗರ್ಭದಲ್ಲಿ ಮರೆಯಾಗುತ್ತದೆ. ಎರಡು ಕಾಲುಗಳ ಮೇಲೆ ನೆಟ್ಟಗೆ ನಿಂತು ನಡೆಯುವ ಮನುಷ್ಯನಂತಹ ಪ್ರಾಣಿ ಭೂಮಿಯ ಮೇಲೆ ಕಾಣಿಸಿದ್ದು ಒಂದು ಲಕ್ಷ ಎಂಭತ್ತೊಂದು ಸಾವಿರ ವರ್ಷಗಳ ಹಿಂದೆ ಎಂದು ಜೀವವಿಕಾಸವನ್ನು ವಿವರಿಸುವ ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಅಲ್ಲಿಂದ ಇಲ್ಲಿಯವರೆಗೆ ಮನುಷ್ಯನ ದೇಹ, ಮನಸ್ಸು, ಬುದ್ಧಿಗಳ ವಿಕಾಸವಾಗುತ್ತ ಬಂದಿದೆ.

ವಿಕಾಸವಾಗುತ್ತ ಬಂದಂತೆ ಮನುಷ್ಯ ಸಂಘಜೀವಿಯಾದ. ಆಗ ಅವರು ಹಂಚಿಕೊಂಡ ಆಟಗಳು, ಹಾಡುಗಳು, ಸಾಹಿತ್ಯ, ಸಂಗೀತ ಮುಂತಾದವುಗಳೆಲ್ಲ ಜಾನಪದಗಳಾದವು. ಮನುಷ್ಯ ಭದ್ರತೆಗಾಗಿ ರಾಜ್ಯ, ಸಾಮ್ರಾಜ್ಯಗಳನ್ನು ನಿರ್ಮಿಸಿಕೊಂಡ. ಇದರಲ್ಲಿ ಶೌರ್ಯ, ಪರಾಕ್ರಮದ, ಅಧಿಕಾರದ ಆಸೆಯ ನೆರಳೂ ಇದೆ. ರಾಜರಿಗೆ ಮಾರ್ಗದರ್ಶನ ಮಾಡುವ ಗುರುಪೀಠಗಳು ಬಂದವು. ಇವುಗಳ ನಿರ್ವಹಣೆಗೆ, ವ್ಯವಸ್ಥಿತವಾದ ಬೆಳವಣಿಗೆಗೆ, ಧರ್ಮದ ಕಲ್ಪನೆ ಮೂಡಿತು. ಮನುಷ್ಯ ಬೆಳೆದಂತೆ ಸಂವಹನ ಕಲೆ ಬೆಳೆದು ಬೇರೆ ಭಾಷಾ ಪ್ರಕಾರಗಳಾದವು. ಜನ ತಮ್ಮ ವಸತಿಗಳನ್ನು ಬದಲಿಸುತ್ತ, ಹೊಸತಾದ, ನವೀನ ರೀತಿಯ ವಾಸಗಳನ್ನು ನಿರ್ಮಿಸಿಕೊಂಡರು. ಆದರೆ ಯಾವುದೂ ಶಾಶ್ವತವಾಗಿ ಉಳಿಯಲಿಲ್ಲ. ಹೊಸದು ಬಂದಂತೆ ಹಳೆಯದು ಮರೆಯಾಯಿತು. ಒಂದು ಕಾಲದಲ್ಲಿ ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿದ್ದ ರೋಮ್ ನಗರ, ಅಲೆಕ್ಸಾಂಡ್ರಿಯಾದ ಪ್ರಸಿದ್ಧ ಗ್ರಂಥಾಲಯ, ಹರಪ್ಪಾ ಮತ್ತು ಮೊಹೆಂಜೋದಾರೋದ ನಗರಗಳು ಇಂದು ಕೇವಲ ಪಳೆಯುಳಿಕೆಗಳಾಗಿವೆ. ಕೇವಲ ಅರವತ್ತು ವರ್ಷಗಳ ಹಿಂದೆ ತೀರ್ಥಕ್ಷೇತ್ರವಾಗಿದ್ದ ಧನುಷ್ಕೋಟಿ ಇದು ಜಲಸಮಾಧಿಯಾಗಿದೆ. ಕೃಷ್ಣ ಬದುಕಿದ್ದ ದ್ವಾರಕೆ ಸಮುದ್ರದ ತಳ ಕಂಡಿದೆ. ಅಂದರೆ, ಅತ್ಯಂತ ಶ್ರೇಷ್ಠವೆನ್ನಿಸಿದ, ಉದಾತ್ತವೆನ್ನಿಸಿದ, ಅದ್ಭುತವೆನ್ನಿಸಿದ ಯಾವುದೂ ಈಗ ಉಳಿದಿಲ್ಲ. ಇದೇ ಕಾಲಪ್ರವಾಹ. ಈ ಮಹಾಪ್ರವಾಹದಲ್ಲಿ ಯಾವುದೂ ನಿಲ್ಲಲಾರದು. ಇಂದಿನ ವೈಭವ, ಮೆರಗು ಕೂಡ ಭವಿಷ್ಯದಲ್ಲಿ ಶೂನ್ಯವಾಗುತ್ತದೆ. ಆದರೆ ಮತ್ತೊಂದು ಹೊಸ ವ್ಯವಸ್ಥೆ, ಹೊಸವಿಧಾನ, ಹೊಸ ಚೈತನ್ಯ ಮೈದೋರುತ್ತದೆ. ಯಾಕೆಂದರೆ, ಪ್ರತಿಯೊಂದು ಕಾಲದಲ್ಲಿ ಈ ವ್ಯವಸ್ಥೆಯನ್ನು ಹುಟ್ಟು ಹಾಕಿದ್ದು ಮಾನವನ ಅನೂಹ್ಯವಾದ ಚೈತನ್ಯ ಶಕ್ತಿ. ಆ ಮಾನವತೆ ಎಂದಿಗೂ ಅಳಿಯದೆ ನಿಂತಿದೆ. ❖

ಗುಂಡಣ್ಣ



ದಿನ ಭವಿಷ್ಯ

ಸೋಮವಾರ 26 ಏಪ್ರಿಲ್ 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಅಶ್ವಿನೀ ಚತುರ್ದಶೀ ಗಂ. 14-20 (ಹ. 11-53) ಸೋಮವಾರ ನಿತ್ಯ ನಕ್ಷತ್ರ ಚಿತ್ತೆ ಗಂ. 42-34 (ರಾ. 11-10) ವಜ್ರ ನಾಮ ಯೋಗ ಗಂ 46-1 ವಣಿಜ ಕರಣ ಗಂ. 14-20 ವಿಷ ಗಂ. 4-49 ಪುನರ್ವಿಷ ಗಂ. 55-41 ಅಮೃತ ಗಂ. 27-18 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 ಸೂರ್ಯೋದಯ: 6-05 ಸೂರ್ಯಾಸ್ತ: 6-30 ಅದೃಷ್ಟ ಸಂಖ್ಯೆ 1 9

ಮೇಷ: ವಿದ್ಯಾರ್ಥಿಗಳು ಓದಿನಲ್ಲಿ ಹೆಚ್ಚಿನ ಆಸಕ್ತಿ ತೋರುವಿರಿ. ಬಂಧುಗಳ ಜೊತೆ ವಿಚಾರ ಮಾಡಿ ಆರ್ಥಿಕ ಸಂಕಷ್ಟ ಪರಿಹರಿಸಿಕೊಳ್ಳುವಿರಿ. ಹೊಸ ಉದ್ಯಮದ ಬಗ್ಗೆ ತಯಾರಿ.

ವೃಷಭ: ಹೊಸಬರಿಗೆ ಬರವಣಿಗೆ ಅಥವಾ ಅನುವಾದಗಳಲ್ಲಿ ಕೆಲಸಗಳಿಗೆ ಉತ್ತೇಜನ ನೀಡಲಿದ್ದೀರಿ. ಸಂಗಾತಿಯೊಂದಿಗೆ ಪ್ರವಾಸಕ್ಕೆ ತೆರಳುವಿರಿ. ಪ್ರಯಾಣದಲ್ಲಿ ಸುಖಾನುಭವವಾಗಲಿದೆ.

ಮಿಥುನ: ಆಸ್ತಿಯನ್ನು ಖರೀದಿಸುವ ಸಾಧ್ಯತೆ. ವಾಹನ ರಿಪೇರಿ, ಮಾರಾಟಗಾರರಿಗೆ ಹೆಚ್ಚಿನ ಆದಾಯ. ಕಾನೂನಿಗೆ ಸಂಬಂಧಿಸಿದ ವಿಷಯದಲ್ಲಿ ಸೂಕ್ತ ಸಲಹೆ ಪಡೆದು ವ್ಯವಹರಿಸುವುದು ಒಳಿತು.

ಕರ್ಕಾಟಕ: ವರಮಾನದಲ್ಲಿ ಗಣನೀಯ ಸುಧಾರಣೆ. ವಿದೇಶದಿಂದ ಮಕ್ಕಳ ಅಥವಾ ಸಮೀಪ ಬಂಧುಗಳ ಆಗಮನಕ್ಕಾಗಿ ಎದುರು ನೋಡುವಿರಿ. ಗೃಹಾಲಂಕಾರ ವಸ್ತುಗಳ ಖರೀದಿ ಸಾಧ್ಯತೆ.

ಸಿಂಹ: ಕಳೆದುಹೋದ ವಸ್ತು ಅಥವಾ ಬಹುದಿನಗಳಿಂದ ಬರಬೇಕಾಗಿದ್ದ ಹಣ ಪುನಃ ಪಡೆದುಕೊಳ್ಳುವ ಸಾಧ್ಯತೆ. ಚರ ಆಸ್ತಿಗಳ ಖರೀದಿ. ದೇವತಾ ಕಾರ್ಯಗಳಲ್ಲಿ ತೊಡಗಿಕೊಂಡು ನೆಮ್ಮದಿ.

ಕನ್ಯಾ: ಮಕ್ಕಳಿಗಾಗಿ ದುಬಾರಿ ವಸ್ತುಗಳನ್ನು ಖರೀದಿ ಮಾಡುವ ಸಾಧ್ಯತೆ. ಶ್ರೀಮಂತ ಜೀವನ ಶೈಲಿಗಾಗಿ ವೆಚ್ಚ. ಸೋದರಿಯರ ವಿಚಾರದಲ್ಲಿ ಧಾರಾಳತನ. ಸಂಪನ್ಮೂಲಗಳ ವೃದ್ಧಿಗಾಗಿ ಹೊಸ ಯೋಜನೆ.

ತುಲಾ: ಹೊಸ ಕಾಮಗಾರಿಗಳನ್ನು ಪೂರ್ಣಗೊಳಿಸುವ ತವಕ. ನೆಮ್ಮದಿಯ ವಾತಾವರಣ. ಮನೆಯವರೊಂದಿಗೆ ಆತುರದ ವ್ಯವಹಾರ ತೋರುವುದು ತರವಲ್ಲ. ಪ್ರಚಲಿತ ವಿದ್ಯಮಾನಗಳ ಬಗ್ಗೆ ಆಸಕ್ತಿ.

ವೃಶ್ಚಿಕ: ಮನೆಯಲ್ಲಿ ಮೃದುಭಾಷಿಯಾಗಿ ವ್ಯವಹರಿಸಿ. ಕೆಲಸಗಳು ನಿಧಾನಗತಿಯಲ್ಲಿದ್ದರೂ ಮನಸ್ಸಿನಲ್ಲಿನ ದುಗುಡವನ್ನು ಮುಚ್ಚಿಡಲು ಪ್ರಯತ್ನಿಸುವಿರಿ. ದೂರದ ಸಂಬಂಧಿಕರೊಬ್ಬರ ಆಗಮನ.

ಧನು: ಶೈಕ್ಷಣಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವ ಭಾಗ್ಯ. ವಿವಾದಗಳು ಇತ್ಯರ್ಥಗೊಂಡು ಮಾನಸಿಕ ನೆಮ್ಮದಿ. ವಿವಾಹಾದಿ ಶುಭಕಾರ್ಯಗಳಲ್ಲಿ ಮನೆಯವರೊಂದಿಗೆ ಭಾಗಿ.

ಮಕರ: ಆದಾಯದಲ್ಲಿ ಹೆಚ್ಚಳ. ಮನೆಯಲ್ಲಿ ಸಂತೋಷದ ವಾತಾವರಣ. ದಾಂಪತ್ಯ ಜೀವನ ಸುಖಕರ. ಸರ್ಕಾರಿ ನೌಕರರಿಗೆ ಬಿಡುವಿನ ದಿನವಾಗಿದ್ದರೂ, ಉನ್ನತ ಹುದ್ದೆಯಲ್ಲಿರುವವರಿಗೆ ಜವಾಬ್ದಾರಿ ಹೆಚ್ಚಾಗಲಿದೆ.

ಕುಂಭ: ಕ್ರೀಡಾಪಟುಗಳಿಗೆ ಉತ್ತೇಜನ ದೊರಕುವ ಸಂಭವವಿದ್ದು ಉತ್ತಮ ಸಾಧನೆ ತೋರಲಿದ್ದೀರಿ. ಸಾಧನೆಯ ಪುಟಗಳನ್ನು ಅವಲೋಕನ ಮಾಡಿಕೊಳ್ಳಲಿದ್ದೀರಿ.

ಮೀನ: ಸಾಹಿತ್ಯ, ಸಂಗೀತ ಕಲಾ ನೈಪುಣ್ಯತೆ ಹೊಂದಿರುವ ವ್ಯಕ್ತಿಗಳೊಡನಾಟ ದಿನವಿಡೀ ದೊರಕುವ ಸಾಧ್ಯತೆ. ರಿಯಲ್ ಎಸ್ಟೇಟ್‌ನಂತಹ ಭೂ ಸಂಬಂಧಿ ವ್ಯವಹಾರಗಳಲ್ಲಿ ಅಧಿಕ ಲಾಭ.


ನಿಮ್ಮ ಜನ್ಮದಿನ 26-ಏಪ್ರಿಲ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಈ ವರ್ಷ ನೀವು ಹೆಚ್ಚಾಗಿ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುದರಿಂದ ಉದ್ಯೋಗದ ಸ್ಥಳದಲ್ಲಿ ಉತ್ತಮ ಸಂಪರ್ಕಗಳು ಸಿಗುತ್ತವೆ. ನಿಮ್ಮ ಯೋಜನೆಗಳನ್ನು ಕುರಿತು ಅಪರಿಚಿತರಲ್ಲಿ ಚರ್ಚಿಸುವುದರಿಂದ ಕಾರ್ಯ ವಿಫಲವಾದೀತು.

ಪದಬಂಧ 4578

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹೀಗೆ ಕೋಪಗೊಳ್ಳು (3)
3.ಈ ಪರಿ ತಪ್ಪಿಸಿಕೊಳ್ಳುವಿಕೆ! (3)
5.ಆವಿಯಾಗುವಂತೆ ಮಾಡು (2)
6.ಸುಟ್ಟು ಕಪ್ಪಾದುದು (3)
7.ರಿಕಾಪುವನ್ನು ಕದ್ದಿರುವ ಶತೃ (2)
9. ತಿರುಗಿ ಹೀಗೆ ನಿಂದಿಸು! (2)
11.ಆನಂದದಲ್ಲಿ ಕೊನೆಗೊಳ್ಳುವಂಥದ್ದು (3)
13.ಹತ್ತಿರ ಸುಳಿಯುತ್ತಿರುವ ಆಕಳು (2)
14.ಮಲಗುವಾಗ ಕಾಣಿಸಿದ ಚಾರ (3)
15.ನರ ನೋಡಿದ ಶಹರು (3)

ಮೇಲಿಂದ ಕೆಳಕ್ಕೆ
1. ಪರಿಷ್ಕೃತವಾಗದಿರುವ ಪ್ರತಿ (3)
2.ಲೋಭಿ ಇಲ್ಲಿದ್ದಾನೆ (3)
3.ತಪರಾಕಿನ ನಂತರದ ಹೊಗಳಿಕೆ (3)
4.ತಿರುಗಿಸಿದರೂ ದುರಸ್ತಿಯೇ! (3)
5.ವರ್ತುಲಾಕಾರವಾಗಿ ಸುತ್ತಿ ಸುತ್ತಿ ಬರುವ ಗಾಳಿ (5)
8.ಈ ರೀತಿ ಮಾತಿನಲ್ಲಿ ನಯವಾಗಿ ಉಬ್ಬಿಸು (5)
10.ದೊಡ್ಡ ನೌಕೆಯಿದು (3)
11.ಕೊನೆಗೆ ಮಗ ತಿರುಗಿದರೆ ಇದು ಸಲೀಸು! (3)
12.ತನಯ ಹೀಗೆ ಮಗ್ನ! (3)
13.ಅರಳೆ ಹಿಡಿದವನ ಸಮೀಪ! (3)



4577ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪ್ರತಿಷ್ಠಾಪನೆ 3.ಅಸಲು 5.ತಲೆಬರಹ 7.ನಕ್ರ 9.ಕುಠಾರ 11.ಭವಿ 13.ವಿಮಾನಯಾನ 15.ವಂತಿಗೆ 16.ಆಸೆಬುರುಕ

ಮೇಲಿಂದ ಕೆಳಕ್ಕೆ: 1.ಪ್ರಯೋಜನ 2.ಪತಿತ 4.ಸನಿಹ 6.ಬರ್ಬರ 8.ಕ್ರಯ 9.ಕುಲೀನ 10.ಲಾಭ 12.ವಿಧ್ವಂಸಕ 13.ವಿನಂತಿ 14.ನಕಾಸೆ

ಸುಡೊಕು 4964

		8	2		5		6	
			4			8		5
	4	5			9		3	
4	6		9		7			
				4		1		6
8		7	5		6		4	9
		4			2			7
7						6		3
	8		7			2		

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4963 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹410
12 ಮೊಟ್ಟೆಗೆ	₹57

ಮೈಸೂರು

100 ಮೊಟ್ಟೆಗೆ	₹410

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಸಣ್ಣ ಹೂಡಿಕೆದಾರರ ಭಾಗವಹಿಸುವಿಕೆ ಹೆಚ್ಚಳ

ಎಂಎಫ್: 81 ಲಕ್ಷ ಹೊಸ ಖಾತೆ



ನವದೆಹಲಿ (ಪಿಟಿಐ): ಮ್ಯೂಚುವಲ್ ಫಂಡ್ ಉದ್ಯಮಕ್ಕೆ 2020–21ರಲ್ಲಿ ಹೊಸದಾಗಿ 81 ಲಕ್ಷ ಹೂಡಿಕೆದಾರರ ಖಾತೆಗಳು ಸೇರ್ಪಡೆ ಆಗಿವೆ. ಇದರಿಂದ ಒಟ್ಟು ಖಾತೆಗಳ ಸಂಖ್ಯೆ 9.78 ಕೋಟಿಗೆ ಏರಿಕೆಯಾಗಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿಯೂ ಆರೋಗ್ಯಕರ ಬೆಳವಣಿಗೆಯು ಮುಂದುವರಿಯಲಿದೆ ಎನ್ನುವುದು ತಜ್ಞರ ಭರವಸೆ ಆಗಿದೆ.

2019–20ರಲ್ಲಿ ಉದ್ಯಮಕ್ಕೆ 72.89 ಲಕ್ಷ ಖಾತೆಗಳು ಹೊಸದಾಗಿ ಸೇರ್ಪಡೆ ಆಗಿದ್ದವು ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟವು (ಎಎಂಎಫ್‌ಐ) ಮಾಹಿತಿ ನೀಡಿದೆ.

‘ದೀರ್ಘಾವಧಿಯ ಮತ್ತು ಅಲ್ಪಾವಧಿಯ ಹಣಕಾಸಿನ ಗುರಿಗಳನ್ನು ಈಡೇರಿಸಿಕೊಳ್ಳಲು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದರ ಮಹತ್ವವನ್ನು ಹೂಡಿಕೆದಾರರು ಹೆಚ್ಚು ಅರ್ಥ ಮಾಡಿಕೊಳ್ಳುತ್ತಿದ್ದಾರೆ’ ಎಂದು ಮಾರ್ನಿಂಗ್‌ಸ್ಟಾರ್ ಇಂಡಿಯಾದ ಸಂಶೋಧನಾ ವಿಭಾಗದ ವ್ಯವಸ್ಥಾಪಕ ನಿರ್ದೇಶಕ ಕೌಸ್ತುಭ್ ಬೇಲ್ಪುರ್‌ಕರ್ ತಿಳಿಸಿದ್ದಾರೆ.

‘ಹೂಡಿಕೆದಾರರ ಜಾಗೃತಿ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿರುವುದರಿಂದ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಬಗ್ಗೆ ಜಾಗೃತಿಯು ಕಳೆದ ಹಲವು ವರ್ಷಗಳಿಂದ ಹೆಚ್ಚುತ್ತಿದೆ. ಉದ್ಯಮದ ಬೆಳವಣಿಗೆಗೆ ದೊಡ್ಡ ನಗರಗಳಷ್ಟೇ ಅಲ್ಲದೆ, ಸಣ್ಣ ನಗರಗಳ (ಬಿ–30) ಕೊಡುಗೆಯೂ ಹೆಚ್ಚಾಗುತ್ತಿದೆ’ ಎಂದೂ ಹೇಳಿದ್ದಾರೆ.

‘ಮ್ಯೂಚುವಲ್ ಫಂಡ್‌ಗಳು ಹೂಡಿಕೆದಾರರ ಅತ್ಯುತ್ತಮ ಆಯ್ಕೆಗಳಲ್ಲಿ ಒಂದಾಗಿವೆ. ಹೀಗಾಗಿ ಮ್ಯೂಚುವಲ್ ಫಂಡ್ ಉದ್ಯಮವು ಈ ವರ್ಷವೂ ಉತ್ತಮ ಬೆಳವಣಿಗೆ ಕಾಣಬೇಕಿದೆ’ ಎಂದು ಮೈವೆಲ್ತ್‌ಗ್ರೋತ್.ಕಾಂನ ಸಹ ಸ್ಥಾಪಕ ಹರ್ಷದ್ ಚೇತನ್ವಾಲಾ ತಿಳಿಸಿದ್ದಾರೆ.

‘ಸಣ್ಣ ಹೂಡಿಕೆದಾರರ ತಿಳಿವಳಿಕೆ ಮತ್ತು ಪಾಲ್ಗೊಳ್ಳುವಿಕೆಯ ಲಾಭವನ್ನು ಉದ್ಯಮವು ಪಡೆಯುತ್ತಿದೆ. ಮ್ಯೂಚುವಲ್ ಫಂಡ್‌ಗಳ ಮೂಲಕ ದೀರ್ಘಾವಧಿಯಲ್ಲಿ ಸಂಪತ್ತು ಸೃಷ್ಟಿಸಬಹುದು ಎನ್ನುವುದನ್ನು ಹೆಚ್ಚು ಹೆಚ್ಚು ಜನ ಅರ್ಥ ಮಾಡಿಕೊಂಡಂತೆಲ್ಲ ಈ ವ್ಯವಹಾರವು ಬೆಳೆಯುತ್ತಲೇ ಹೋಗುತ್ತದೆ’ ಎಂದು ಶೇರ್‌ಖಾನ್‌ನ ಹೂಡಿಕೆ ಪರಿಹಾರಗಳ ಮುಖ್ಯಸ್ಥ ಗೌತಮ್ ಕಲಿಯಾ ಹೇಳಿದ್ದಾರೆ.

‘ಆದರೆ, ಅಲ್ಪಾವಧಿಯಲ್ಲಿ ನಿಯಂತ್ರಣ ವ್ಯವಸ್ಥೆಯಲ್ಲಿನ ಬದಲಾವಣೆಗಳು, ಮಾರುಕಟ್ಟೆಯಲ್ಲಿನ ಕುಸಿತ, ಸಾಂಕ್ರಾಮಿಕದ ಉಲ್ಬಣ... ಇತ್ಯಾದಿ ಅಂಶಗಳು ಬೆಳವಣಿಗೆಗೆ ಅಡ್ಡಿಯಾಗುವ ಸಾಧ್ಯತೆಗಳು ಖಂಡಿತವಾಗಿಯೂ ಇವೆ’ ಎನ್ನುವುದನ್ನೂ ಅವರು ತಿಳಿಸಿದ್ದಾರೆ.

ಈಕ್ವಿಟಿ ಆಧಾರಿತ ಯೋಜನೆಗಳಲ್ಲಿ ಹೂಡಿಕೆದಾರ ಖಾತೆಗಳ ಸಂಖ್ಯೆಯು 2019–20ರಲ್ಲಿ 6.44 ಕೋಟಿ ಇದ್ದಿದ್ದು 2020–21ರಲ್ಲಿ 6.68 ಕೋಟಿಗೆ ಏರಿಕೆಯಾಗಿದೆ. ಅದೇ ರೀತಿ ಸಾಲಪತ್ರ ಆಧಾರಿತ ಯೋಜನೆಗಳ ಖಾತೆಗಳ ಸಂಖ್ಯೆ 16.16 ಲಕ್ಷದಿಂದ 88.4 ಲಕ್ಷಕ್ಕೆ ಏರಿಕೆ ಕಂಡಿದೆ.

ಮ್ಯೂಚುವಲ್ ಫಂಡ್ ಉದ್ಯಮದ ನಿರ್ವಹಣಾ ಸಂಪತ್ತು ₹ 22.26 ಲಕ್ಷ ಕೋಟಿಗಳಿಂದ ₹ 31.43 ಲಕ್ಷ ಕೋಟಿಗಳಿಗೆ ಏರಿಕೆಯಾಗಿದೆ.

ರಾಮನಗರ ರೇಷ್ಮೆ ಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹200-365
ದ್ವಿತಳಿ (ಬಿ.ವಿ) ₹205-414

ರಾಜ್ಯಗಳಲ್ಲಿ ನಿರ್ಬಂಧ: ರಫ್ತಿನ ಮೇಲೆ ಪರಿಣಾಮ ಸಂಭವ

ನವದೆಹಲಿ (ಪಿಟಿಐ): ಕೋವಿಡ್-19 ಹರಡುವಿಕೆ ನಿಯಂತ್ರಿಸಲು ರಾಜ್ಯಗಳು ಹೇರುತ್ತಿರುವ ನಿರ್ಬಂಧಗಳು ರಫ್ತು ವಹಿವಾಟಿನ ಮೇಲೆ ಪರಿಣಾಮ ಬೀರಬಹುದು ಎಂದು ಎಂಜಿನಿಯರಿಂಗ್ ರಫ್ತು ಉತ್ತೇಜನಾ ಮಂಡಳಿ (ಇಇಪಿಸಿ) ಹೇಳಿದೆ.

‘ಅದರಲ್ಲಿಯೂ, ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳಿಗೆ (ಎಂಎಸ್‌ಎಂಇ) ಹೆಚ್ಚು ಹಾನಿ ಆಗುವ ಸಾಧ್ಯತೆ ಇದೆ’ ಎಂದು ಮಂಡಳಿಯು ಅಂದಾಜು ಮಾಡಿದೆ.

ಹಣಕಾಸು ವರ್ಷದ ಕಳೆದ ಕೆಲವು ತಿಂಗಳುಗಳಲ್ಲಿ ಕಂಡ ಚೇತರಿಕೆಯು ಈ ವಲಯಕ್ಕೆ ಭರವಸೆ ನೀಡಿತ್ತು. ಇಂತಹ ಸಂದರ್ಭದಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವುದು ಮತ್ತೆ ಅಪಾಯ ತಂದೊಡ್ಡಿದೆ ಎಂದು ಹೇಳಿದೆ. ಸಾಂಕ್ರಾಮಿಕದ ಪರಿಣಾಮವನ್ನು ಕಡಿಮೆ ಮಾಡಲು ಸರ್ಕಾರವು ಲಸಿಕೆ ನೀಡುವುದನ್ನು ಚುರುಕುಗೊಳಿಸುವ ಅಗತ್ಯವಿದೆ ಎಂದು ಅದು ಅಭಿಪ್ರಾಯಪಟ್ಟಿದೆ. ಜಾಗತಿಕ ಬೇಡಿಕೆ ಹೆಚ್ಚಳ ಮತ್ತು ಆರ್ಥಿಕ ಚಟುವಟಿಕೆಗಳ ಚೇತರಿಕೆಯಿಂದಾಗಿ ಎಂಜಿನಿಯರಿಂಗ್ ಸರಕುಗಳ 33 ವಿಭಾಗಗಳಲ್ಲಿ 32 ವಿಭಾಗಗಳು ಮಾರ್ಚ್‌ನಲ್ಲಿ ಸಕಾರಾತ್ಮಕ ಬೆಳವಣಿಗೆ ಕಂಡಿವೆ. ಸಾಂಕ್ರಾಮಿಕದಿಂದಾಗಿ ಕಳೆದ ಒಂದು ವರ್ಷದಿಂದ ನಷ್ಟದಲ್ಲಿ ಸಿಲುಕಿರುವ ರಫ್ತುದಾರರಿಗೆ ಒಳ್ಳೆಯ ಕಾಲ ಶುರುವಾಗಿರುವುದನ್ನು ಇದು ಸೂಚಿಸುತ್ತಿದೆ ಎಂದು ತಿಳಿಸಿದೆ.

ಇದು ಶ್ರೀಮಂತಿಕೆಯ ಮೊದಲನೆಯ ಪಾಠ!



ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಶ್ರೀಮಂತರಾಗಬೇಕು ಅಂದರೆ ಅಳೆದು–ತೂಗಿ ಖರ್ಚು ಮಾಡುವುದನ್ನು ಮೊದಲು ಕಲಿಯಬೇಕು. ಅಳತೆ ಇಲ್ಲದೆ ಖರ್ಚು ಮಾಡುವವರು ದೀರ್ಘಾವಧಿಯಲ್ಲಿ ಶ್ರೀಮಂತರಾಗಿ ಉಳಿದ ಉದಾಹರಣೆಗಳಿಲ್ಲ. ಖರ್ಚು ಎಂದಿಗೂ ನಮ್ಮ ಆದಾಯಕ್ಕಿಂತ ಹೆಚ್ಚಿಗೆ ಆಗಬಾರದು. ಪ್ರತಿಯೊಬ್ಬರೂ ಬಂದ ಆದಾಯದಲ್ಲಿ ಉಳಿತಾಯ ಸಾಧಿಸಿ ಹೇಗೆ ಶ್ರೀಮಂತಿಕೆಯತ್ತ ಹೆಜ್ಜೆ ಹಾಕಬಹುದು? ಮುಂದೆ ಓದಿ...

ಶ್ರೀಮಂತ ಎಂದರೆ ಯಾರು?: ಶ್ರೀಮಂತ ಎಂದರೆ ಯಾರು ಎಂಬ ಪ್ರಶ್ನೆಗೆ ಸರಳ ಉತ್ತರ ಹೇಳುವುದಾದರೆ, ಯಾರು ಒಂದಕ್ಕಿಂತ ಹೆಚ್ಚು ಮೂಲಗಳಿಂದ ಆದಾಯ ಗಳಿಸುತ್ತಾರೋ ಅವರೇ ಶ್ರೀಮಂತರು. ಒಬ್ಬ ವ್ಯಕ್ತಿ ತನ್ನ ಆಸ್ತಿಯನ್ನು ಬಾಡಿಗೆಗೆ ನೀಡಿ ಸಂಪಾದನೆ ಮಾಡಬಹುದು, ಗಳಿಸಿದ ಹಣವನ್ನು ಬ್ಯಾಂಕ್‌ನಲ್ಲಿ ಇಟ್ಟು ಬಡ್ಡಿ ಪಡೆಯಬಹುದು, ಷೇರುಗಳ ಮೇಲೆ ಹೂಡಿಕೆ ಮಾಡಿ ಲಾಭ ಗಳಿಸಬಹುದು, ಮ್ಯೂಚವಲ್ ಫಂಡ್‌ಗಳಲ್ಲಿ ತೊಡಗಿಸಿ ಲಾಭ ಮಾಡಬಹುದು, ಸೈಟ್ ಅಥವಾ ಜಮೀನು ಖರೀದಿಸಿ ಭವಿಷ್ಯದಲ್ಲಿ ಉತ್ತಮ ಬೆಲೆಗೆ ಮಾರಾಟ ಮಾಡಬಹುದು.

ಆದರೆ ಇಷ್ಟೆಲ್ಲಾ ಆದಾಯ ಮೂಲಗಳಲ್ಲಿ ಹೂಡಿಕೆ ಮಾಡಬೇಕು ಅಂದರೆ, ಗಳಿಸಿದ ಆದಾಯದಲ್ಲಿ ಉಳಿತಾಯ ಮಾಡುವುದನ್ನು ಮೊದಲು ಕಲಿಯಬೇಕು.

ಖರ್ಚು ಮಾತ್ರ ನಿಮ್ಮ ಹಿಡಿತದಲ್ಲಿರುತ್ತದೆ!: ನೀವು ಎಷ್ಟು ಆದಾಯ ಗಳಿಸಬಹುದು ಎನ್ನುವುದು ಎಲ್ಲ ಸಂದರ್ಭಗಳಲ್ಲೂ ನಿಮ್ಮ ಹಿಡಿತದಲ್ಲಿ ಇರುವುದಿಲ್ಲ. ಹಲವು ಬಾಹ್ಯ ಸಂಗತಿಗಳು ನಿಮ್ಮ ಆದಾಯದ ಮೇಲೆ ಪರಿಣಾಮ ಬೀರುತ್ತವೆ. ಆದರೆ ಆದಾಯದಲ್ಲಿ ಎಷ್ಟು ಖರ್ಚು ಮಾಡಬೇಕು ಎನ್ನುವುದು ಸದಾ ನಿಮ್ಮ ನಿಯಂತ್ರಣದಲ್ಲಿರುತ್ತದೆ. ಸಾಮಾನ್ಯವಾಗಿ ಖರ್ಚು ಮಾಡಿದ ನಂತರದಲ್ಲಿ ನಾವು ಉಳಿತಾಯ ಮಾಡುವ ಬಗ್ಗೆ ಆಲೋಚನೆ ಮಾಡುತ್ತೇವೆ. ಆದರೆ ಬಂದ ಆದಾಯದಲ್ಲಿ ಮೊದಲು ಉಳಿತಾಯ ಮಾಡಿ, ಹಾಗೆ ಉಳಿದ ಹಣವನ್ನು ಖರ್ಚುಗಳಿಗೆ ಬಳಸಿಕೊಂಡರೆ ಭವಿಷ್ಯದ ಉದ್ದೇಶಗಳಿಗಾಗಿ ನೀವು ಮಾಡಬೇಕಿರುವ ಹೂಡಿಕೆಯ ಹಾದಿ ಸುಗಮವಾಗುತ್ತದೆ.

ಉಳಿತಾಯಕ್ಕೆ ಈ ಸೂತ್ರ ಅನುಸರಿಸಿ: ಎಷ್ಟು ಉಳಿತಾಯ ಮಾಡಬೇಕು, ಎಷ್ಟು ಖರ್ಚು ಮಾಡಬೇಕು ಎನ್ನುವ ಪ್ರಶ್ನೆಗಳಿಗೆ ನಿಮ್ಮ ಆರ್ಥಿಕ ಸ್ಥಿತಿಗತಿ ಆಧರಿಸಿ ಉತ್ತರ ಕಂಡುಕೊಳ್ಳಬೇಕಾಗುತ್ತದೆ. ಆದರೆ ವೈಯಕ್ತಿಕ ಹಣಕಾಸು ನಿರ್ವಹಣೆಯ ಸೂತ್ರಗಳ ಲೆಕ್ಕಾಚಾರದಲ್ಲಿ ಹೇಳುವುದಾದರೆ ನಿಮ್ಮ ಆದಾಯದ ಶೇಕಡ 50ರಷ್ಟು ಹಣವನ್ನು ನಿಮ್ಮ ಅಗತ್ಯಗಳಿಗೆ – ಅಂದರೆ, ದಿನಸಿ, ತರಕಾರಿ, ಪ್ರಯಾಣದ ಖರ್ಚು, ವಿದ್ಯುತ್, ನೀರಿನ ಬಿಲ್ ಇತ್ಯಾದಿಗಳ ಮೇಲೆ – ವ್ಯಯಿಸಬೇಕು.

ಇನ್ನುಳಿದ ಶೇಕಡ 30ರಷ್ಟು ಹಣವನ್ನು ನಿಮ್ಮ ಬಯಕೆಗಳನ್ನು (WANTS) ಈಡೇರಿಸಿಕೊಳ್ಳಲು ಮೀಸಲಿಡಬಹುದು. ಶೇಕಡ 20ರಷ್ಟು ಹಣವನ್ನು ನಿಯಮಿತವಾಗಿ ಉಳಿತಾಯ ಮಾಡಲೇಬೇಕು. ಬಡವರು, ಮಧ್ಯಮ ವರ್ಗದವರು, ಶ್ರೀಮಂತರು ಎನ್ನುವ ಭೇದವಿಲ್ಲದೆ ಎಲ್ಲರೂ ಅನುಸರಿಸಲು ಸಾಧ್ಯವಿರುವ ಸರಳ ನಿಯಮ ಇದು.

ತಿಂಗಳ ಖರ್ಚಿನ ಲೆಕ್ಕಾಚಾರ ಬಹಳ ಮುಖ್ಯ: ಪ್ರತಿ ತಿಂಗಳೂ ಬರುವ ಆದಾಯದಲ್ಲಿ ಎಷ್ಟು ಹಣ ಖರ್ಚು ಮಾಡಬೇಕು ಎನ್ನುವ ಲೆಕ್ಕಾಚಾರ ಬಹಳ ಮುಖ್ಯ. ಅಂದಾಜಿಲ್ಲದೆ ಖರ್ಚು ಮಾಡಿದರೆ ವೆಚ್ಚಗಳು ಹೆಚ್ಚಾಗುತ್ತವೆ. ನೀವು ಹಿಂದೆಂದೂ ತಿಂಗಳ ಖರ್ಚಿನ ಬಜೆಟ್ ಮಾಡಿಲ್ಲ ಎಂದಾದರೆ ಮೊದಲಿಗೆ ಪ್ರತಿ ಖರ್ಚಿನ ಲೆಕ್ಕ ಬರೆಯಲು ಶುರು ಮಾಡಬೇಕು. ಒಂದು ತಿಂಗಳ ಬಳಿಕ ಯಾವುದಕ್ಕೆ ಎಷ್ಟು ಖರ್ಚು ಮಾಡಿದ್ದೀರಾ ಎನ್ನುವುದನ್ನು ಲೆಕ್ಕಾಚಾರ ಮಾಡಿ ನೋಡಬೇಕು. ಮೈಕ್ರೋಸಾಫ್ಟ್ ಎಕ್ಸೆಲ್ ತಂತ್ರಾಂಶ ಬಳಸಿ ನೀವು ಸುಲಭವಾಗಿ ಈ ಅಂದಾಜು ಲೆಕ್ಕ ಮಾಡಬಹುದು. ಉದಾಹರಣೆಗೆ ಚಾಟ್ಸ್ ತಿನ್ನುವುದಕ್ಕೆ, ಮನರಂಜನೆಗೆ ಅತಿಯಾಗಿ ಖರ್ಚು ಮಾಡುತ್ತಿದ್ದರೆ ಮುಂದಿನ ದಿನಗಳಲ್ಲಿ ಆ ಖರ್ಚಿನ ಮೇಲೆ ಹಿಡಿತ ಸಾಧಿಸಬೇಕು. ಹೀಗೆ ಮಾಡುವುದರಿಂದ ಕ್ರಮೇಣ ಎಲ್ಲ ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕಬಹುದು.

ನೆನಪಿಟ್ಟುಕೊಳ್ಳಿ:

- ಒಳ್ಳೆಯ ಸಂಪಾದನೆ ಇರುವ ಸಂದರ್ಭಗಳಲ್ಲಿ ಕೆಲವರು ಅತಿಯಾಗಿ ಖರ್ಚು ಮಾಡಿ ಬದುಕಿನ ಮುಸ್ಸಂಜೆಯಲ್ಲಿ ಹಣವಿಲ್ಲದೆ ಪರದಾಡುತ್ತಾರೆ. ಇವತ್ತು ಸ್ವಲ್ಪ ಉಳಿತಾಯ ಮಾಡಿದರೆ ನಾವು ಮುಂದೆ ಸುಖವಾಗಿ ಜೀವಿಸಬಹುದು ಎನ್ನುವುದನ್ನು ಅರಿತುಕೊಳ್ಳಬೇಕು.
- ನಿಮ್ಮ ಖರ್ಚುಗಳು ಹೆಚ್ಚಿಗೆ ಇದ್ದು ಅದಕ್ಕೆ ತಕ್ಕಂತಹ ಆದಾಯ ಇದ್ದರೆ ಯಾವುದೇ ಸಮಸ್ಯೆ ಆಗುವುದಿಲ್ಲ. ಆದರೆ, ಆದಾಯ ಕಡಿಮೆ ಇದ್ದು ಖರ್ಚು ಹೆಚ್ಚುತ್ತ ಹೋದರೆ ನೀವು ಸಾಲದ ಸುಳಿಗೆ ಸಿಲುಕುವುದು ನಿಶ್ಚಿತ.

(ಲೇಖಕ: ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಸತತ ಮೂರನೇ ವಾರ ಕುಸಿದ ಷೇರುಪೇಟೆ



ಭಾರತದ ಷೇರುಪೇಟೆ ಸೂಚ್ಯಂಕಗಳಾದ ನಿಫ್ಟಿ ಮತ್ತು ಸೆನ್ಸೆಕ್ಸ್ ಸತತ ಮೂರನೇ ವಾರವೂ ನಕಾರಾತ್ಮಕ ಫಲಿತಾಂಶ ಕೊಟ್ಟಿವೆ. 14,341 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ, ವಾರದ ಅವಧಿಯಲ್ಲಿ ಶೇಕಡ 1.89ರಷ್ಟು ಕುಸಿತ ಕಂಡಿದ್ದರೆ, 47,878 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ಶೇ 1.95ರಷ್ಟು ಇಳಿಕೆಯಾಗಿದೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 4,986 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹ 6,224 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಕೋವಿಡ್–19 ಪ್ರಕರಣಗಳಲ್ಲಿ ಭಾರಿ ಹೆಚ್ಚಳವಾಗುತ್ತಿರುವುದರಿಂದ ಷೇರುಪೇಟೆ ಒತ್ತಡಕ್ಕೆ ಸಿಲುಕಿದೆ. ದೇಶದ ವಿವಿಧ ರಾಜ್ಯಗಳಲ್ಲಿನ ಲಾಕ್‌ಡೌನ್ ಕ್ರಮಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಿವೆ. ಜಾಗತಿಕವಾಗಿ ನೋಡುವುದಾದರೆ ಅಮೆರಿಕದಲ್ಲಿ ಬಂಡವಾಳ ವೃದ್ಧಿ ತೆರಿಗೆ ಹೆಚ್ಚಳ ಸಾಧ್ಯತೆ ಹೂಡಿಕೆದಾರರನ್ನು ಮಂಕಾಗಿಸಿದೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ರಿಯಲ್ ಎಸ್ಟೇಟ್ ಶೇ 3.6ರಷ್ಟು ಕುಸಿತ ಕಂಡಿದ್ದರೆ, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 3.5ರಷ್ಟು ಮತ್ತು ನಿಫ್ಟಿ ಎಫ್‌ಎಂಸಿಜಿ ಶೇ 3ರಷ್ಟು ಕುಸಿದಿವೆ. ನಿಫ್ಟಿ ಮಾಧ್ಯಮ ವಲಯ ಶೇ 2.6ರಷ್ಟು ಜಿಗಿದಿದೆ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ಡಾ ರೆಡ್ಡೀಸ್ ಶೇ 4ರಷ್ಟು, ಟಾಟಾ ಸ್ಟೀಲ್ ಶೇ 4ರಷ್ಟು, ಬಿಪಿಸಿಎಲ್ ಶೇ 2ರಷ್ಟು, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 2ರಷ್ಟು, ವಿಪ್ರೊ ಶೇ 2ರಷ್ಟು ಮತ್ತು ಎಸ್‌ಬಿಐ ಲೈಫ್ ಶೇ 1ರಷ್ಟು ಗಳಿಕೆ ಕಂಡಿವೆ. ಅಲ್ಟ್ರಾ ಟೆಕ್ ಶೇ 11ರಷ್ಟು, ಶ್ರೀ ಸಿಮೆಂಟ್ ಶೇ 9ರಷ್ಟು, ಗ್ರಾಸಿಮ್ ಶೇ 7ರಷ್ಟು, ಹಿಂದೂಸ್ತಾನ್ ಯುನಿಲಿವರ್ ಶೇ 6ರಷ್ಟು, ಹಿಂಡಾಲ್ಕೊ ಶೇ 6ರಷ್ಟು, ಏಷ್ಯನ್ ಪೇಂಟ್ಸ್ ಶೇ 6ರಷ್ಟು, ಟೆಕ್ ಮಹೀಂದ್ರ ಶೇ 6ರಷ್ಟು ಮತ್ತು ಎಚ್‌ಸಿಎಲ್ ಟೆಕ್ ಶೇ 6ರಷ್ಟು, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 5ರಷ್ಟು ಮತ್ತು ಟಾಟಾ ಮೋಟರ್ಸ್ ಶೇ 5ರಷ್ಟು ಕುಸಿತ ಕಂಡಿವೆ.

ಮುನ್ನೋಟ: ಸದ್ಯದ ಸ್ಥಿತಿಯಲ್ಲಿ ಕೋವಿಡ್ ಪ್ರಕರಣಗಳು ಮಾರುಕಟ್ಟೆಯ ದಿಕ್ಕು ನಿರ್ಧರಿಸಲಿವೆ. ಫೆಬ್ರುವರಿಯಲ್ಲಿ ಕೋವಿಡ್‌ನಿಂದಾಗಿ ಪ್ರತಿದಿನ ಸುಮಾರು 100 ಮಂದಿ ಸಾವನ್ನಪ್ಪುತ್ತಿದ್ದರು. ಈಗ ಆ ಸಂಖ್ಯೆ 1,800ಕ್ಕೆ ಹೆಚ್ಚಳವಾಗಿದೆ. ತ್ರೈಮಾಸಿಕ ಫಲಿತಾಂಶದ ಆಧಾರದಲ್ಲಿ ಕೆಲ ಷೇರುಗಳ ಬೆಲೆಯಲ್ಲಿ ಏರಿಳಿತವಾಗಬಹುದು.

ಕೋವಿಡ್ ಪ್ರಕರಣಗಳ ಹೆಚ್ಚಳದಿಂದ ವಾಣಿಜ್ಯ ಚಟುವಟಿಕೆಗಳಿಗೆ ಅಡ್ಡಿ ಉಂಟಾಗಿ ಆರ್ಥಿಕ ಚೇತರಿಕೆ ಮತ್ತಷ್ಟು ನಿಧಾನಗತಿಯತ್ತ ಸಾಗುವುದರಿಂದ ಸದ್ಯ ಹೂಡಿಕೆದಾರರು ಎಚ್ಚರಿಕೆಯ ನಡೆ ಕಾಯ್ದುಕೊಳ್ಳಬೇಕಿದೆ. ಕೋವಿಡ್ ಸಮಸ್ಯೆಯ ನಡುವೆಯೂ ಸಿಮೆಂಟ್, ಮಾಹಿತಿ ತಂತ್ರಜ್ಞಾನ, ಲೋಹ, ಫಾರ್ಮಾ, ಮೂಲಸೌಕರ್ಯ ವಲಯಗಳು ಉತ್ತಮ ಸಾಧನೆ ತೋರುವ ಸಾಧ್ಯತೆಯಿದೆ.

ಚೀನಾ: ಮೂರು ಯುದ್ಧನೌಕೆಗಳ ಕಾರ್ಯಾರಂಭ

ಬೀಜಿಂಗ್ (ಪಿಟಿಐ): ಚೀನಾ ನಿರ್ಮಿತ ಮೂರು ಪ್ರಮುಖ ಯುದ್ಧನೌಕೆಗಳ ಕಾರ್ಯಾಚರಣೆಗೆ ಸಾನ್ಯ ನೌಕಾನೆಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಚಾಲನೆ ನೀಡಲಾಯಿತು.

‘ಹಿಸ್ಟರಿ ಶೀಟರ್‌ಗಳಿಗೆ ಕಣ್ಮುಚ್ಚಿ ಜಾಮೀನು ನೀಡಬಾರದು’

ನವದೆಹಲಿ (ಪಿಟಿಐ): ‘ಅಪರಾಧ ಹಿನ್ನೆಲೆ ಇರುವಂತಹವರಿಗೆ (‘ಹಿಸ್ಟರಿ ಶೀಟರ್’ಗಳಿಗೆ) ಕೋರ್ಟ್‌ಗಳು ಕಣ್ಮುಚ್ಚಿಕೊಂಡು ಜಾಮೀನು ನೀಡುವುದನ್ನು ನಿಲ್ಲಿಸಬೇಕು. ಅವರು ಜಾಮೀನಿನ ಮೇಲೆ ಹೊರಗೆ ಬಂದರೆ, ಸಂತ್ರಸ್ತರ ಕುಟುಂಬದ ಸದಸ್ಯರು ಹಾಗೂ ಸಾಕ್ಷಿಗಳ ಮೇಲೆ ಏನು ಪರಿಣಾಮವಾಗುತ್ತದೆ ಎಂಬುದನ್ನು ಪರಿಗಣಿಸಬೇಕು’ ಎಂದು ಸುಪ್ರೀಂಕೋರ್ಟ್ ಹೇಳಿದೆ.

ಪತಿಯ ಕೊಲೆ ಆರೋಪಿಗೆ ಅಲಹಾಬಾದ್ ಹೈಕೋರ್ಟ್ ಜಾಮೀನು ನೀಡಿದ್ದನ್ನು ಪ್ರಶ್ನಿಸಿ ಉತ್ತರ ಪ್ರದೇಶದ ಸುಧಾ ಸಿಂಗ್ ಎಂಬುವವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯನ್ಯಾಯಮೂರ್ತಿ ಎಸ್.ಎ.ಬೊಬಡೆ (ಈಗ ನಿವೃತ್ತರಾಗಿದ್ದಾರೆ) ನೇತೃತ್ವದ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಹಾಗೂ ವಿ. ರಾಮಸುಬ್ರಮಣಿಯನ್ ಈ ಪೀಠದಲ್ಲಿದ್ದಾರೆ.

ಆರೋಪಿಗೆ ಜಾಮೀನು ಮಂಜೂರು ಮಾಡಿ ಅಲಹಾಬಾದ್ ಹೈಕೋರ್ಟ್ ನೀಡಿದ್ದ ತೀರ್ಪನ್ನು ಪಕ್ಕಕ್ಕಿರಿಸಿದ ನ್ಯಾಯಪೀಠ, ‘ವ್ಯಕ್ತಿ ಸ್ವಾತಂತ್ರ್ಯ ಮುಖ್ಯ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಅಪರಾಧ ಕೃತ್ಯ ಎಸಗಿದ ಆರೋಪ ಹೊತ್ತ ವ್ಯಕ್ತಿಗೆ ಜಾಮೀನು ನೀಡುವಾಗ ಕೋರ್ಟ್‌ಗಳು ಎಚ್ಚರದಿಂದಿರಬೇಕು. ಆರೋಪಿ ಜಾಮೀನಿನ ಮೇಲೆ ಹೊರಗೆ ಹೋದರೆ ಸಂತ್ರಸ್ತ ಕುಟುಂಬ ಎದುರಿಸುವ ಅಪಾಯವನ್ನು ಗಣನೆಗೆ ತೆಗೆದುಕೊಳ್ಳಬೇಕು’ ಎಂದು ನ್ಯಾಯಪೀಠ ಹೇಳಿದೆ.

‘ಇಂಥ ವ್ಯಕ್ತಿಗಳಿಗೆ ಜಾಮೀನು ನೀಡಿದರೆ, ಸಂತ್ರಸ್ತ ಕುಟುಂಬದ ಸದಸ್ಯರೇ ಮತ್ತೆ ಬಲಿಪಶುವಾಗುವ ಸಾಧ್ಯತೆ ಇರುತ್ತದೆ. ಇಂಥ ಅಂಶಗಳನ್ನು ಹೈಕೋರ್ಟ್ ನಿರ್ಲಕ್ಷ್ಯ ಮಾಡಿದೆ ಎಂಬುದು ನಮ್ಮ ಅನಿಸಿಕೆ’ ಎಂದೂ ನ್ಯಾಯಪೀಠ ಹೇಳಿತು.

ಸುಧಾಸಿಂಗ್ ಅವರ ಪತಿ ರಾಜ್‌ನಾರಾಯಣ್ ಸಿಂಗ್ ಅವರನ್ನು ಅರುಣ್ ಯಾದವ್ ಎಂಬ ವ್ಯಕ್ತಿ 2015ರಲ್ಲಿ ಅಜಂಗಡದಲ್ಲಿ ಗುಂಡಿಕ್ಕಿ ಕೊಲೆ ಮಾಡಿದ ಆರೋಪ ಇದೆ. ಆರೋಪಿಯು ಸುಪಾರಿ ಕೊಲೆಗಾರ ಹಾಗೂ ಶಾರ್ಪಶೂಟರ್ ಎನ್ನಲಾಗಿದ್ದು, ಕೊಲೆ, ಕೊಲೆ ಯತ್ನ ಹಾಗೂ ಕ್ರಿಮಿನಲ್ ಪಿತೂರಿ ಆರೋಪಗಳಿಗೆ ಸಂಬಂಧಿಸಿ ಈಗಾಗಲೇ ಈತನ ವಿರುದ್ಧ 15ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ.

ಸಂಕ್ಷಿಪ್ತ ಸುದ್ದಿ

ಆರೈಕೆ ಕೇಂದ್ರದಿಂದ 20 ಕೋವಿಡ್ ರೋಗಿಗಳು ಪರಾರಿ

ಯಾವತ್‌ಮಾಳ್: ‘ಮಹಾರಾಷ್ಟ್ರದ ಯಾವತ್‌ಮಾಳ್ ಜಿಲ್ಲೆಯ ಆರೈಕೆ ಕೇಂದ್ರದಿಂದ 20 ಕೋವಿಡ್ ರೋಗಿಗಳು ಪರಾರಿಯಾಗಿದ್ದಾರೆ’ ಎಂದು ಅಧಿಕಾರಿಗಳು ತಿಳಿಸಿದರು.

‘ಘಟಂಜಿ ತಾಲ್ಲೂಕಿನ ವಿದ್ಯಾರ್ಥಿಗಳ ವಸತಿ ನಿಲಯದಲ್ಲಿ ನಿರ್ಮಿಸಲಾಗಿದ್ದ ಆರೈಕೆ ಕೇಂದ್ರದಲ್ಲಿ ಶನಿವಾರ ಈ ಘಟನೆ ನಡೆದಿದೆ. ಪರಾರಿಯಾದವರ ವಿರುದ್ಧ ಘಟಂಜಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ’ ಎಂದು ಸ್ಥಳೀಯ ಆರೋಗ್ಯ ಅಧಿಕಾರಿ ಡಾ.ಸಂಜಯ್ ಪುರಂ ಮಾಹಿತಿ ನೀಡಿದರು.

ಆಕ್ಸಿಜನ್ ಕೊರತೆ: ನಾಲ್ವರ ಸಾವು

ರೇವಾರಿ(ಹರಿಯಾಣ): ಆಮ್ಲಜನಕದ ಕೊರತೆಯಿಂದ ಇಲ್ಲಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ಕೋವಿಡ್ ಸೋಂಕಿಗೆ ಒಳಗಾಗಿದ್ದ ನಾಲ್ವರು ರೋಗಿಗಳು ಸಾವಿಗೀಡಾಗಿದ್ದಾರೆ.

‘ನಮ್ಮ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆ ಇತ್ತು. ಸಮರ್ಪಕವಾಗಿ ಆಮ್ಲಜನಕ ಪೂರೈಕೆಯಾಗುತ್ತಿಲ್ಲ. ಈ ಬಗ್ಗೆ ಅಧಿಕಾರಿಗಳಿಗೆ ಪದೇ ಪದೇ ಮಾಹಿತಿ ನೀಡಲಾಗಿತ್ತು. ಆದರೂ, ಯಾರೂ ಸ್ಪಂದಿಸಲಿಲ್ಲ’ ಎಂದು ಆಸ್ಪತ್ರೆಯ ವ್ಯವಸ್ಥಾಪಕರು ತಿಳಿಸಿದ್ದಾರೆ.

ಭಾರತಕ್ಕೆ ಪರಿಹಾರ ವಸ್ತುಗಳನ್ನು ನೀಡಲು ಸಿದ್ಧ: ಪಾಕ್

ಇಸ್ಲಾಮಾಬಾದ್: ಕೋವಿಡ್‌ನ ಎರಡನೇ ಅಲೆಯನ್ನು ಎದುರಿಸಲು ಭಾರತಕ್ಕೆ ವೆಂಟಿಲೇಟರ್ ಸೇರಿದಂತೆ ಅಗತ್ಯ ನೆರವು ನೀಡಲು ಪಾಕಿಸ್ತಾನ ಮುಂದಾಗಿದೆ. ಉಭಯ ರಾಷ್ಟ್ರಗಳು ಸಹಕಾರವನ್ನು ಹೆಚ್ಚಿಸುವ ಮೂಲಕ ಬಿಕ್ಕಟ್ಟನ್ನು ನಿಭಾಯಿಸಲು ಮಾರ್ಗಗಳನ್ನು ಕಂಡುಕೊಳ್ಳಬಹುದು ಎಂದು ಪಾಕಿಸ್ತಾನ ಹೇಳಿದೆ.

ಭಾರತಕ್ಕೆ ತ್ವರಿತ ನೆರವು: ಬ್ಲಿಂಕೆನ್

ವಾಷಿಂಗ್ಟನ್ (ಪಿಟಿಐ): ಕೋವಿಡ್–19 ಪಿಡುಗಿನ ವಿರುದ್ಧ ಹೋರಾಡುತ್ತಿರುವ ಭಾರತಕ್ಕೆ ತ್ವರಿತವಾಗಿ ನೆರವು ನೀಡಲಾಗುವುದು ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಥೋನಿ ಬ್ಲಿಂಕೆನ್ ಹೇಳಿದ್ದಾರೆ.

ತನ್ನಲ್ಲಿರುವ ಹೆಚ್ಚುವರಿ ಲಸಿಕೆ ನೀಡುವುದು ಸೇರಿದಂತೆ, ಭಾರತಕ್ಕೆ ಎಲ್ಲ ನೆರವು ನೀಡಲು ಅಮೆರಿಕ ಮುಂದಾಗಬೇಕು ಎಂದು ಅಧ್ಯಕ್ಷ ಜೋ ಬೈಡನ್ ಅವರ ಮೇಲೆ ಒತ್ತಡ ಹೆಚ್ಚಿದ ಬೆನ್ನಲ್ಲೇ ಬ್ಲಿಂಕೆನ್ ಅವರಿಂದ ಈ ಹೇಳಿಕೆ ಹೊರಬಿದ್ದಿದೆ.

‘ಭಾರತ ಸರ್ಕಾರದೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇವೆ. ಭಾರತೀಯರಿಗೆ ಹಾಗೂ ಮುಂಚೂಣಿಯಲ್ಲಿದ್ದು ಕೋವಿಡ್ ವಿರುದ್ಧ ಹೋರಾಡುತ್ತಿರುವ ಆರೋಗ್ಯ ಸಿಬ್ಬಂದಿಗೆ ಶೀಘ್ರದಲ್ಲಿಯೇ ನೆರವು ನೀಡಲಾಗುವುದು’ ಎಂದು ಬ್ಲಿಂಕೆನ್ ಟ್ವೀಟ್ ಮಾಡಿದ್ದಾರೆ.

ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಜೆನ್ ಸಾಕಿ, ‘ಭಾರತದ ರಾಜಕೀಯ ಮುಖಂಡರು ಹಾಗೂ ತಜ್ಞರೊಂದಿಗೆ ಅಮೆರಿಕದ ಅಧಿಕಾರಿಗಳು ಚರ್ಚಿಸಿದ್ದು, ಯಾವ ವಿಧದ ನೆರವು ನೀಡಬೇಕು ಎಂಬ ಬಗ್ಗೆ ಸಮಾಲೋಚನೆ ನಡೆಸಿದ್ದಾರೆ’ ಎಂದು ಹೇಳಿದ್ದಾರೆ.

ಕನ್ನಡದಲ್ಲೂ ಪೋಸ್ಟರ್

ಕೋವಿಡ್ ಹೋರಾಟದಲ್ಲಿ ಭಾರತಕ್ಕೆ ನೆರವಾಗುತ್ತೇವೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕೆನ್ ಅವರು ಮಾಡಿರುವ ಟ್ವೀಟ್ ಅನ್ನು, ಚೆನ್ನೈನಲ್ಲಿರುವ ಅಮೆರಿಕದ ಕಾನ್ಸುಲೇಟ್ ಕಚೇರಿ ಸ್ಥಳೀಯ ಭಾಷೆಗಳಲ್ಲಿ ಹಂಚಿಕೊಂಡಿದೆ.

ಬ್ಲಿಂಕೆನ್ ಅವರ ಟ್ವೀಟ್ ಅನ್ನು ಕನ್ನಡ, ತಮಿಳು ಮತ್ತು ಮಲಯಾಳ ಭಾಷೆಗಳಿಗೆ ಭಾಷಾಂತರಿಸಲಾಗಿದೆ. ಮೂರೂ ಭಾಷೆಯ ಅವತರಣಿಕೆಗಳನ್ನು ಒಂದು ಪೋಸ್ಟರ್‌ನಲ್ಲಿ ಹಾಕಿ, ಅದನ್ನು ಚಿತ್ರದಂತೆ ಟ್ವೀಟ್‌ನಲ್ಲಿ ಹಂಚಿಕೊಳ್ಳಲಾಗಿದೆ.

ಬಾಗ್ದಾದ್‌ನ ಕೋವಿಡ್ ಆಸ್ಪತ್ರೆಯಲ್ಲಿ ಬೆಂಕಿ

ಆಮ್ಲಜನಕ ಸಿಲಿಂಡರ್ ಸ್ಫೋಟ: 82 ಮಂದಿ ಸಾವು

ಬಾಗ್ದಾದ್ (ಎಪಿ, ಎಎಫ್‌ಪಿ): ಕೋವಿಡ್–19 ಸೋಂಕಿತರು ಚಿಕಿತ್ಸೆಗಾಗಿ ದಾಖಲಾಗಿದ್ದ ಇಲ್ಲಿನ ಎಲ್‌ಬಿಎನ್ ಅಲ್-ಖತೀಬ್ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಶನಿವಾರ ತಡ ರಾತ್ರಿ ಸಂಭವಿಸಿದ ಭಾರಿ ಅಗ್ನಿ ಅನಾಹುತದಲ್ಲಿ 82 ಮಂದಿ ಸಾವಿಗೀಡಾಗಿದ್ದಾರೆ.

ಆಮ್ಲಜನಕ ಸಿಲಿಂಡರ್ ಸ್ಫೋಟ ಸಂಭವಿಸಿ ಈ ದುರಂತ ಸಂಭವಿಸಿದೆ ಎಂದು ಪ್ರಾಥಮಿಕ ತನಿಖಾ ವರದಿಗಳು ತಿಳಿಸಿವೆ. ಈ ಭೀಕರ ದುರ್ಘಟನೆಯಲ್ಲಿ 110 ಮಂದಿ ಗಾಯಗೊಂಡಿದ್ದಾರೆ.

ದುರ್ಘಟನೆ ನಡೆದ ಬಳಿಕ ಇರಾಕ್ ಪ್ರಧಾನಿ ಮುಸ್ತಾಫಾ ಅಲ್–ಖದಿಮಿ ಸಚಿವ ಸಂಪುಟ ಸಭೆ ನಡೆಸಿದರು.

ಆರೋಗ್ಯ ಸಚಿವ ಹಸನ್ ಅಲ್–ತಮಿಮಿ ಮತ್ತು ಬಾಗ್ದಾದ್ ಪ್ರಾಂತ್ಯದ ರಾಜ್ಯಪಾಲರನ್ನು ಅಮಾನತುಗೊಳಿಸಿದ ಸಚಿವ ಸಂಪುಟವು, ಈ ದುರಂತದ ಬಗ್ಗೆ ತನಿಖೆ ನಡೆಸುವಂತೆ ಆದೇಶಿಸಿತು.

ಜತೆಗೆ, ಬಾಗ್ದಾದ್ ಆರೋಗ್ಯ ಇಲಾಖೆಯ ಮಹಾನಿರ್ದೇಶಕ ಮತ್ತು ಆಸ್ಪತ್ರೆಯ ನಿರ್ದೇಶಕ ಹಾಗೂ ಎಂಜಿನಿಯರಿಂಗ್ ಮತ್ತು ನಿರ್ವಹಣೆ ವಿಭಾಗದ ನಿರ್ದೇಶಕರನ್ನು ಅಮಾನತುಗೊಳಿಸಲಾಯಿತು ಎಂದು ಪ್ರಧಾನಮಂತ್ರಿ ಕಚೇರಿ ಪ್ರಕಟಣೆ ತಿಳಿಸಿದೆ.

ಸಾವಿಗೀಡಾದವರ ಪೈಕಿ 28 ರೋಗಿಗಳಿಗೆ ವೆಂಟಿಲೇಟರ್ ಅಳವಡಿಸಲಾಗಿತ್ತು. ಕೋವಿಡ್ ರೋಗಿಗಳಾಗಿದ್ದ ಇವರಿಗೆ ತೀವ್ರ ಉಸಿರಾಟದ ತೊಂದರೆ ಇತ್ತು ಎಂದು ಮಾನವ ಹಕ್ಕುಗಳ ಆಯೋಗದ ವಕ್ತಾರ ಅಲಿ ಅಲ್–ಬಯಾಟಿ ಟ್ವೀಟ್ ಮಾಡಿದ್ದಾರೆ.

ಆಸ್ಪತ್ರೆಯ ಎರಡನೇ ಮಹಡಿಯಲ್ಲಿ ಬೆಂಕಿ ದುರಂತ ಸಂಭವಿಸಿದೆ. ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ಸಿಬ್ಬಂದಿ ಮತ್ತು ನಾಗರಿಕ ರಕ್ಷಣಾ ತಂಡಗಳು ಭಾನುವಾರ ಬೆಳಗಿನ ಜಾವದವರೆಗೆ ಬೆಂಕಿ ನಂದಿಸಿದರು. ಸುಮಾರು 200 ಮಂದಿಯನ್ನು ಆಸ್ಪತ್ರೆಯಿಂದ ರಕ್ಷಿಸಲಾಗಿದೆ.

ಈ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಗಂಭೀರ ಸ್ಥಿತಿಯಲ್ಲಿದ್ದ ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ಆಸ್ಪತ್ರೆಯಲ್ಲಿ ಬೆಂಕಿ ಅನಾಹುತಗಳಿಂದ ರಕ್ಷಿಸುವ ಯಾವುದೇ ವ್ಯವಸ್ಥೆ ಇರಲಿಲ್ಲ. ಹೀಗಾಗಿ, ಬೆಂಕಿಯ ಜ್ವಾಲೆಗಳು ಬಹುಮಹಡಿ ಕಟ್ಟಡದಲ್ಲಿ ತೀವ್ರಗತಿಯಲ್ಲಿ ವ್ಯಾಪಿಸಿಕೊಂಡವು. ವೆಂಟಿಲೇಟರ್‌ಗಳನ್ನು ತೆಗೆದು ಸಾಗಿಸಬೇಕಾಗಿದ್ದರಿಂದ ಹಲವು ರೋಗಿಗಳು ಮೃತಪಟ್ಟರು. ಕೆಲವರು ಉಸಿರುಗಟ್ಟಿ ಸಾವಿಗೀಡಾದರು ಎಂದು ಇರಾಕ್‌ನ ನಾಗರಿಕ ರಕ್ಷಣಾ ಘಟಕ ತಿಳಿಸಿದೆ.

ತುರ್ತು ಸಭೆ ನಡೆಸಿದ ಪ್ರಧಾನಿ, ತಕ್ಷಣಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಅಧಿಕಾರಿಗಳ ಜತೆ ಚರ್ಚೆ ನಡೆಸಿದರು. 24 ಗಂಟೆಗಳಲ್ಲಿ ಈ ದುರಂತದ ತನಿಖೆಯ ವರದಿಯನ್ನು ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದ್ದಾರೆ.



ಬಾಗ್ದಾದ್‌ನ ಎಲ್‌ಬಿಎನ್ ಅಲ್‌ಖತೀಬ್ ಆಸ್ಪತ್ರೆಯಲ್ಲಿನ ಬೆಂಕಿ ದುರಂತದಲ್ಲಿ ಸುಟ್ಟು ಕರಕಲಾಗಿರುವ ವಸ್ತುಗಳು –ರಾಯಿಟರ್ಸ್ ಚಿತ್ರ

> **ಇಂತಹ ದುರಂತಗಳಲ್ಲಿ ನಿರ್ಲಕ್ಷ್ಯತನ ಎನ್ನುವುದು ಅಪರಾಧವಾಗುತ್ತದೆ. ನಿರ್ಲಕ್ಷ್ಯ ವಹಿಸಿದ ಎಲ್ಲರೂ ಈ ಘಟನೆಗೆ ಹೊಣೆಯಾಗಿದ್ದಾರೆ**
> **ಮುಸ್ತಾಫಾ ಅಲ್–ಖದಿಮಿ**
> ಇರಾಕ್ ಪ್ರಧಾನಿ

ಸಂಕ್ಷಿಪ್ತ ಸುದ್ದಿ

ಬ್ರಿಟನ್, ಸೌದಿ ಅರೇಬಿಯಾದಿಂದ ಭಾರತಕ್ಕೆ ನೆರವು

ಲಂಡನ್, ದುಬೈ (ಪಿಟಿಐ): ವೆಂಟಿಲೇಟರ್‌ಗಳು ಸೇರಿದಂತೆ ಮಹತ್ವದ ಜೀವ ರಕ್ಷಕ ವೈದ್ಯಕೀಯ ಉಪಕರಣಗಳನ್ನು ಭಾರತಕ್ಕೆ ಬ್ರಿಟನ್ ಶೀಘ್ರ ರವಾನಿಸಲಿದೆ.

ಕೋವಿಡ್–19 ವಿರುದ್ಧ ಹೋರಾಟ ನಡೆಸುವ ನಿಟ್ಟಿನಲ್ಲಿ ಭಾರತಕ್ಕೆ ನೆರವಾಗುವ ನಿಟ್ಟಿನಲ್ಲಿ ಬ್ರಿಟನ್ ಈ ಕ್ರಮ ಕೈಗೊಂಡಿದೆ. ಭಾರತವು ಸಹ ನೆರವು ನೀಡುವಂತೆ ಬ್ರಿಟನ್ ಅನ್ನು ಕೋರಿತ್ತು.

ಸೌದಿ ಅರೇಬಿಯಾ ಸಹ 80 ಮೆಟ್ರಿಕ್ ಟನ್ ದ್ರವೀಕೃತ ಆಮ್ಲಜನಕವನ್ನು ಭಾರತಕ್ಕೆ ಕಳುಹಿಸಲಿದೆ. ಅದಾನಿ ಸಮೂಹ ಮತ್ತು ಲಿಂದೆ ಕಂಪನಿ ಸಹಯೋಗದಲ್ಲಿ ಭಾರತಕ್ಕೆ ಆಮ್ಲಜನಕ ಸಾಗಿಸಲಾಗುತ್ತಿದೆ.

ದ್ರವೀಕೃತ ಆಮ್ಲಜನಕ ವೈದ್ಯಕೀಯೇತರ ಬಳಕೆಗೆ ನಿಷೇಧ

ನವದೆಹಲಿ: ವೈದ್ಯಕೀಯೇತರ ಉದ್ದೇಶಕ್ಕೆ ದ್ರವೀಕೃತ ಆಮ್ಲಜನಕ ಬಳಕೆ ಮಾಡುವುದನ್ನು ಕೇಂದ್ರ ಸರ್ಕಾರ ಭಾನುವಾರ ನಿಷೇಧಿಸಿದೆ.

ವೈದ್ಯಕೀಯ ಬಳಕೆಗೆ ಮಾತ್ರ ಆಮ್ಲಜನಕ ಲಭ್ಯವಾಗಬೇಕು ಎಂದು ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಭಲ್ಲಾ ಅವರು ಆದೇಶ ಹೊರಡಿಸಿದ್ದಾರೆ.

‘ದ್ರವೀಕೃತ ಆಮ್ಲಜನಕಕ್ಕೆ ಸಂಬಂಧಿಸಿದಂತೆ ಯಾವುದೇ ಉದ್ಯಮಕ್ಕೂ ವಿನಾಯಿತಿ ಇಲ್ಲ. ತಯಾರಕರು ಸಹ ಆಮ್ಲಜನಕ ಉತ್ಪಾದನೆಯನ್ನು ಹೆಚ್ಚಿಸಬೇಕು’ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ವಿಪತ್ತು ನಿರ್ವಹಣೆ ಕಾಯ್ದೆ ಅಡಿಯಲ್ಲಿ ಈ ಆದೇಶ ಹೊರಡಿಸಲಾಗಿದೆ.

ದೇಶದಲ್ಲಿ 3.49 ಲಕ್ಷ ಪ್ರಕರಣ

ನವದೆಹಲಿ(ಪಿಟಿಐ): ದೇಶದಾದ್ಯಂತ ಭಾನುವಾರ 3.49 ಲಕ್ಷ ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, 2,767 ಜನರು ಮೃತಪಟ್ಟಿದ್ದಾರೆ.

2.17 ಲಕ್ಷ ಸೋಂಕಿತರು ಗುಣಮುಖರಾಗಿದ್ದಾರೆ. ದೇಶದಲ್ಲಿ ಸದ್ಯ 26 ಲಕ್ಷ ಸಕ್ರಿಯ ಪ್ರಕರಣಗಳಿವೆ ಎಂದು ಕೇಂದ್ರ ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.

ದೇಶದಲ್ಲಿ ಈವರೆಗೆ 1.92 ಲಕ್ಷ ಮಂದಿ ಸಾವಿಗೀಡಾಗಿದ್ದಾರೆ.


‘ಮನದ ಮಾತು’ ತಿಂಗಳ ಬಾನುಲಿ ಭಾಷಣ: ಬಿಕ್ಕಟ್ಟು ಬೇಗ ಪರಿಹಾರವಾಗುವ ವಿಶ್ವಾಸ

ಎರಡನೇ ಅಲೆಗೆ ದೇಶ ತತ್ತರ: ಮೋದಿ

ನವದೆಹಲಿ (ಪಿಟಿಐ): ಕೋವಿಡ್–19ರ ಎರಡನೇ ಅಲೆಯು ಜನರ ತಾಳ್ಮೆ ಮತ್ತು ನೋವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಪರೀಕ್ಷೆಗೆ ಒಳಪಡಿಸಿದೆ. ಮೊದಲ ಅಲೆಯನ್ನು ಯಶಸ್ವಿಯಾಗಿ ನಿಭಾಯಿಸಿದ ಹುರುಪು ಮತ್ತು ಆತ್ಮವಿಶ್ವಾಸದಲ್ಲಿದ್ದ ದೇಶವು ಈಗಿನ ‘ಬಿರುಗಾಳಿ’ಯಿಂದ ತತ್ತರಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ತಿಂಗಳ ಬಾನುಲಿ ಭಾಷಣ ‘ಮನದ ಮಾತು’ ಕಾರ್ಯಕ್ರಮದಲ್ಲಿ ಹೇಳಿದ್ದಾರೆ.

ಕೋವಿಡ್ ಕುರಿತಂತೆ ತಮ್ಮ ಅಭಿಪ್ರಾಯ ಮತ್ತು ನಿಲುವುಗಳನ್ನು ಹಂಚಿಕೊಂಡ ವೈದ್ಯರು, ನರ್ಸ್‌ಗಳು ಮತ್ತು ಮುಂಚೂಣಿ ಕಾರ್ಯಕರ್ತರ ಜತೆಗೆ ಮೋದಿ ಮಾತನಾಡಿದರು. ಈಗಿನ ಬಿಕ್ಕಟ್ಟಿನಿಂದ ಜನರು ಬೇಗನೆ ಹೊರಬರಲಿದ್ದಾರೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.

ಸುಮಾರು 30 ನಿಮಿಷಗಳ ಭಾಷಣವು ಮುಖ್ಯವಾಗಿ ಸಾಂಕ್ರಾಮಿಕದ ಸುತ್ತಲೇ ಇತ್ತು. ಈ ಪಿಡುಗನ್ನು ಸೋಲಿಸುವುದೇ ಆದ್ಯತೆ ಎಂದು ಅವರು ಹೇಳಿದ್ದಾರೆ.



ನರೇಂದ್ರ ಮೋದಿ

‘ನಮ್ಮ ಆತ್ಮೀಯರಲ್ಲಿ ಹಲವರು ಅಕಾಲಿಕವಾಗಿ ನಮ್ಮನ್ನು ಅಗಲಿದ್ದಾರೆ’ ಎಂದ ಅವರು, ಲಸಿಕೆ ಹಾಕಿಸಿಕೊಳ್ಳುವಂತೆ ಜನರನ್ನು ಕೋರಿದರು. ಲಸಿಕೆಯ ಕುರಿತು ಇರುವ ವದಂತಿಗಳಿಗೆ ಜನರು ಕಿವಿಗೊಡಬಾರದು’ ಎಂದೂ ಹೇಳಿದರು.

‘ಅರ್ಹರಿಗೆ (45 ವರ್ಷ ಮೇಲ್ಪಟ್ಟವರು) ಕೇಂದ್ರ ಸರ್ಕಾರವು ಉಚಿತವಾಗಿ ಲಸಿಕೆ ನೀಡುವುದನ್ನು ಮುಂದುವರಿಸಲಿದೆ. ಈ ಹೋರಾಟದ ಸಂದರ್ಭದಲ್ಲಿ ನಾವು ಪರಿಣತ ಮತ್ತು ವೈಜ್ಞಾನಿಕವಾದ ಸಲಹೆಗಳಿಗೆ ಮನ್ನಣೆ ನೀಡಬೇಕಿದೆ’ ಎಂದರು.

ಕೇಂದ್ರದ ಉಚಿತ ಲಸಿಕೆ ಅಭಿಯಾನವನ್ನು ಅತ್ಯಂತ ಹೆಚ್ಚು ಜನರಿಗೆ ತಲುಪಿಸಲು ರಾಜ್ಯಗಳು ಕೆಲಸ ಮಾಡಬೇಕು ಎಂದು ಕೋರಿದರು.

‘ರಾಜ್ಯ ಸರ್ಕಾರಗಳ ಪ್ರಯತ್ನಗಳನ್ನು ಕೇಂದ್ರ ಸರ್ಕಾರವು ತನ್ನೆಲ್ಲ ಬಲವನ್ನು ಕೊಟ್ಟು ಬೆಂಬಲಿಸುತ್ತಿದೆ. ರಾಜ್ಯ ಸರ್ಕಾರಗಳು ತಮ್ಮ ಜವಾಬ್ದಾರಿ ನಿರ್ವಹಿಸುವಲ್ಲಿ ಅತ್ಯುತ್ತಮವಾಗಿ ಕೆಲಸ ಮಾಡುತ್ತಿವೆ’ ಎಂದರು.

ಪ್ರಧಾನಿ ಜತೆಗೆ ವೈದ್ಯರು ನಡೆಸಿದ ಸಂವಾದವನ್ನು ಭಾಷಣದ ಜತೆಗೆ ಪ್ರಸಾರ ಮಾಡಲಾಗಿದೆ. ಸಾಂಕ್ರಾಮಿಕದ ಬಗ್ಗೆ ಜನರಲ್ಲಿ ಸ್ವಲ್ಪ ಭಯ ಇದೆ. ಆದರೆ, ಸೋಂಕಿಗೆ ಒಳಗಾದ ಶೇ 80–90ರಷ್ಟು ಜನರಿಗೆ ಯಾವ ರೋಗ ಲಕ್ಷಣವೂ ಇಲ್ಲ. ಹಾಗಾಗಿ, ಇಂತಹ ಭಯ ಬೇಡ ಎಂದು ಈ ವೈದ್ಯರೊಬ್ಬರು ಹೇಳಿದ್ದಾರೆ.

ಜನರು ಕೋವಿಡ್ ತಡೆ ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸಬೇಕು ಮತ್ತು ಲಸಿಕೆ ಹಾಕಿಸಿಕೊಳ್ಳಬೇಕು ಎಂದು ಶ್ರೀನಗರದ ಡಾ. ನವೀದ್ ನಝೀರ್ ಶಾ ಸಲಹೆ ಕೊಟ್ಟಿದ್ದಾರೆ.

ಜನರ ಮಾತು ಬೇಕಿದೆ: ರಾಹುಲ್



ರಾಹುಲ್ ಗಾಂಧಿ

‘ವ್ಯವಸ್ಥೆ ವಿಫಲವಾಗಿದೆ. ಇಂತಹ ಸಂದರ್ಭದಲ್ಲಿ ಜನರ ಮಾತು ಆಡುವುದು ಬಹಳ ಮುಖ್ಯ’ ಎಂದು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಟ್ವೀಟ್ ಮಾಡಿದ್ದಾರೆ. ಎರಡನೇ ಅಲೆಯು ದೇಶ ತತ್ತರಗೊಳ್ಳುವಂತೆ ಮಾಡಿದೆ ಎಂದು ಪ್ರಧಾನಿಯವರು ಮನದ ಮಾತಿನಲ್ಲಿ ಹೇಳಿದ್ದಕ್ಕೆ ರಾಹುಲ್ ಹೀಗೆ ಪ್ರತಿಕ್ರಿಯೆ ನೀಡಿದ್ದಾರೆ.

ಕೋವಿಡ್ ಪ್ರಕರಣಗಳು ದಿಢೀರ್ ಏರಿಕೆ ಕಂಡ ಈ ಸಂದರ್ಭದಲ್ಲಿ ತಮ್ಮ ಪಕ್ಷದ ಕಾರ್ಯಕರ್ತರು ಜನರ ನೆರವಿಗೆ ಧಾವಿಸಬೇಕು ಎಂದು ಅವರು ಕರೆಕೊಟ್ಟಿದ್ದಾರೆ.

‘ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ದೇಶಕ್ಕೆ ಹೊಣೆಯರಿತ ಪೌರರ ಅಗತ್ಯ ಇದೆ. ರಾಜಕೀಯದ ಎಲ್ಲ ಕೆಲಸಗಳನ್ನು ಬದಿಗೊತ್ತಿ ಜನರ ನೆರವಿಗೆ ಧಾವಿಸಿ ಎಂದು ಕಾಂಗ್ರೆಸ್ ಪಕ್ಷದ ನನ್ನೆಲ್ಲ ಸಹೋದ್ಯೋಗಿಗಳಲ್ಲಿ ಮನವಿ ಮಾಡುತ್ತೇನೆ. ಜನರಿಗೆ ಎಲ್ಲ ನೆರವನ್ನೂ ನೀಡಿ, ಅವರ ನೋವನ್ನು ಕಡಿಮೆ ಮಾಡಿ’ ಎಂದು ರಾಹುಲ್ ಟ್ವೀಟ್‌ನಲ್ಲಿ ಹೇಳಿದ್ದಾರೆ.

‘ಮನದ ಮಾತು ಯಾರಿಗೆ ಬೇಕಿದೆ?’



ಮಮತಾ ಬ್ಯಾನರ್ಜಿ

‘ಮನದ ಮಾತು’ ಬದಲಿಗೆ ಪ್ರಧಾನಿಯವರು ವೈದ್ಯಕೀಯ ಆಮ್ಲಜನಕ ಕೊರತೆಯ ಬಗ್ಗೆ ಮಾತನಾಡಬೇಕಿತ್ತು ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

‘ಆಮ್ಲಜನಕದ ತೀವ್ರ ಕೊರತೆಯಿಂದ ದೇಶವು ನರಳುತ್ತಿರುವಾಗ ಅವರು ಮನದ ಮಾತು ಆಡುತ್ತಾ ಕೂತಿದ್ದಾರೆ. ಅವರ ಮನದ ಮಾತು ಯಾರಿಗೆ ಬೇಕಾಗಿದೆ? ನೀವು ಕೋವಿಡ್ ಪಿಡುಗು ಮತ್ತು ಆಮ್ಲಜನಕ ಪೂರೈಕೆ ಬಗ್ಗೆ ಮಾತನಾಡಬೇಕು’ ಎಂದು ಮಮತಾ, ಪ್ರಧಾನಿಗೆ ಹೇಳಿದ್ದಾರೆ.

ಹೊರಗಿನಿಂದ ಸಾವಿರಾರು ಜನರು ಬಂದದ್ದೇ ಪಶ್ಚಿಮ ಬಂಗಾಳದಲ್ಲಿ ಕೋವಿಡ್ ತೀವ್ರವಾಗಿ ಹರಡಲು ಕಾರಣ ಎಂಬ ಆರೋಪವನ್ನು ಅವರು ಪುನರುಚ್ಚರಿಸಿದ್ದಾರೆ. ಇಂತಹ ಸ್ಥಿತಿಯಲ್ಲಿಯೂ ಮೋದಿ ಅವರು ಭಾಷಣ ಬಿಗಿದು ಓಡಿ ಹೋಗಿದ್ದಾರೆ. ಕಳೆದ ಆರು ತಿಂಗಳಲ್ಲಿ ಲಸಿಕೆ ಅಭಿಯಾನ ವ್ಯಾಪಕವಾಗಿ ನಡೆದಿದ್ದರೆ ಪರಿಸ್ಥಿತಿ ಹೀಗೆ ಆಗುತ್ತಿರಲಿಲ್ಲ. ಮೋದಿ ಅವರು ಲಸಿಕೆಯನ್ನು 80 ದೇಶಗಳಿಗೆ ರಫ್ತು ಮಾಡಿದ್ದೇ ಈಗಿನ ಸ್ಥಿತಿಗೆ ಕಾರಣ ಎಂದೂ ಆಪಾದಿಸಿದ್ದಾರೆ.

ಉಚಿತ ಲಸಿಕೆ: ರಾಜಸ್ಥಾನ, ಪಂಜಾಬ್ ನಿರ್ಧಾರ

ನವದೆಹಲಿ(ಪಿಟಿಐ): ಮೇ 1ರಿಂದ ಆರಂಭವಾಗಲಿರುವ ಅಭಿಯಾನದಲ್ಲಿ 18ರಿಂದ 45 ವರ್ಷದವರಿಗೆ ಉಚಿತವಾಗಿ ಲಸಿಕೆ ನೀಡಲು ರಾಜಸ್ಥಾನ ಮತ್ತು ಪಂಜಾಬ್ ರಾಜ್ಯ ಸರ್ಕಾರಗಳು ತೀರ್ಮಾನಿಸಿವೆ. ಈಗಾಗಲೇ ವಿವಿಧ ರಾಜ್ಯಗಳು ಉಚಿತ ಲಸಿಕೆ ನೀಡುವ ನಿರ್ಧಾರವನ್ನು ಪ್ರಕಟಿಸಿವೆ.

ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಅವರು ಉಚಿತ ಲಸಿಕೆ ನೀಡುವ ತೀರ್ಮಾನವನ್ನು ಪ್ರಕಟಿಸಿದರು. ‘ಸರ್ಕಾರ ಈ ಉದ್ದೇಶಕ್ಕಾಗಿ ಸುಮಾರು ₹ 3000 ಕೋಟಿ ವ್ಯಯಿಸಲಿದೆ. ವಿವಿಧ ರಾಜ್ಯಗಳ ಬೇಡಿಕೆಯಂತೆ ಕೇಂದ್ರ ಸರ್ಕಾರವೇ ಈ ವೆಚ್ಚವನ್ನು ಭರಿಸಿದರೆ ಸೂಕ್ತವಾಗಿರುತ್ತದೆ’ ಎಂದು ಅವರು ತಿಳಿಸಿದ್ದಾರೆ.

ದೆಹಲಿಯಲ್ಲಿ ಲಾಕ್‌ಡೌನ್ ವಿಸ್ತರಣೆ: ಕೋವಿಡ್ ಸೋಂಕು ಹರಡುವಿಕೆ ತಡೆಯುವ ಕ್ರಮವಾಗಿ ವಿಧಿಸಲಾಗಿದ್ದ ಲಾಕ್‌ಡೌನ್ ಅನ್ನು ಇನ್ನೂ ಒಂದು ವಾರ ವಿಸ್ತರಿಸಲು ದೆಹಲಿ ಸರ್ಕಾರ ತೀರ್ಮಾನಿಸಿದೆ.

ಕೋವಿಡ್–19: ಸರ್ಕಾರ, ಚಿತಾಗಾರದ ದಾಖಲೆಯಲ್ಲಿ ವ್ಯತ್ಯಾಸ

ಸತ್ತವರು 66, ಅಂತ್ಯಸಂಸ್ಕಾರ 462

ಪ್ರಜಾವಾಣಿ ವಾರ್ತೆ

ಕಾನ್ಪುರ (ಉತ್ತರ ಪ್ರದೇಶ) (ಪಿಟಿಐ): ಉತ್ತರ ಪ್ರದೇಶದ ಕಾನ್ಪುರದಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆಗೆ ಸಂಬಂಧಿಸಿದಂತೆ ಸರ್ಕಾರ ನೀಡುತ್ತಿರುವ ಲೆಕ್ಕಕ್ಕೂ, ಚಿತಾಗಾರಗಳು ನೀಡುತ್ತಿರುವ ಲೆಕ್ಕಕ್ಕೂ ಭಾರಿ ವ್ಯತ್ಯಾಸವಿದೆ.

ಏಪ್ರಿಲ್ 19ರಿಂದ ಏಪ್ರಿಲ್ 24ರ ನಡುವೆ ಕಾನ್ಪುರದಲ್ಲಿ 66 ಮಂದಿ ಮಾತ್ರ ಕೋವಿಡ್‌ನಿಂದ ಮೃತಪಟ್ಟಿದ್ದಾರೆ ಎಂದು ಜಿಲ್ಲಾಡಳಿತವು ತನ್ನ ಪ್ರಕಟಣೆಯಲ್ಲಿ ಹೇಳಿದೆ. ಆದರೆ, ಇದೇ ಅವಧಿಯಲ್ಲಿ ಕಾನ್ಪುರದ ಎರಡು ಚಿತಾಗಾರಗಳಲ್ಲಿ 462 ಶವಸಂಸ್ಕಾರ ನಡೆಸಲಾಗಿದೆ. ಚಿತಾಗಾರಗಳ ಎದುರು ಜನರು, ಶವಗಳನ್ನು ಇರಿಸಿಕೊಂಡು ಗಂಟೆಗಟ್ಟಲೆ ಕಾಯಬೇಕಾದ ಸ್ಥಿತಿ ಇದೆ.

‘ಪ್ರತಿದಿನ ದಹನ ಮಾಡುತ್ತಿರುವ ಶವಗಳ ಸಂಖ್ಯೆಯಲ್ಲಿ ಹಲವು ಪಟ್ಟು ಏರಿಕೆಯಾಗಿದೆ. ಈ ಹಿಂದೆ ಪ್ರತಿದಿನ 10 ಶವಗಳನ್ನು ಸುಡುತ್ತಿದ್ದೆವು. ಆದರೆ, ಈಗ ಪ್ರತಿದಿನ 50ಕ್ಕೂ ಹೆಚ್ಚು ಶವಗಳನ್ನು ಸುಡುತ್ತಿದ್ದೇವೆ. ಏಪ್ರಿಲ್ 21ರಂದು ಒಂದೇ ದಿನ 91 ಶವವನ್ನು ಸುಟ್ಟಿದ್ದೇವೆ’ ಎಂದು ಭೈರೋಘಾಟ್ ಚಿತಾಗಾರದ ಸಿಬ್ಬಂದಿ ಮಾಹಿತಿ ನೀಡಿದ್ದಾರೆ. ಈ ಅವಧಿಯಲ್ಲಿ, ಇಲ್ಲಿ 406 ಶವಗಳನ್ನು ದಹನ ಮಾಡಲಾಗಿದೆ.

ಭಗವತ್‌ಘಾಟ್‌ನಲ್ಲಿ 56 ಶವಗಳನ್ನು ದಹನ ಮಾಡಲಾಗಿದೆ. ಇದರ ಜತೆಯಲ್ಲೇ ಮುಸ್ಲಿಮರ ಖಬರಸ್ತಾನದಲ್ಲಿ ನೂರಾರು ಶವಗಳ ಅಂತ್ಯಸಂಸ್ಕಾರ ಮಾಡಲಾಗಿದೆ. ಇವುಗಳ ಮಾಹಿತಿ ಲಭ್ಯವಿಲ್ಲ. ಹೀಗಾಗಿ ಸರ್ಕಾರ ನೀಡುತ್ತಿರುವ ಲೆಕ್ಕಕ್ಕೂ, ವಾಸ್ತವದಲ್ಲಿ ಕೋವಿಡ್‌ನಿಂದ ಮೃತಪಡುತ್ತಿರುವವರ ಸಂಖ್ಯೆಗೂ ಭಾರಿ ವ್ಯತ್ಯಾಸವಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿವೆ.

ಈ ಆರೋಪವನ್ನು ಜಿಲ್ಲಾಡಳಿತ ನಿರಾಕರಿಸಿದೆ. ಕೋವಿಡ್‌ನಿಂದ ದಾಖಲಾಗುತ್ತಿರುವವರ ಮತ್ತು ಮೃತಪಡುತ್ತಿರುವವರ ವಿವರವನ್ನು ಪೋರ್ಟಲ್‌ನಲ್ಲಿ ನಮೂದಿಸುತ್ತಿದ್ದೇವೆ. ಹೀಗಾಗಿ ಮೃತರ ಸಂಖ್ಯೆಯನ್ನು ಮುಚ್ಚಿಡಲು ಸಾಧ್ಯವೇ ಇಲ್ಲ ಎಂದು ಜಿಲ್ಲಾಡಳಿತವು ಹೇಳಿದೆ.

ಕಾನ್ಪುರದಲ್ಲಿ ಕೋವಿಡ್‌ನಿಂದ ಈವರೆಗೆ 1,060 ಮಂದಿ ಮೃತಪಟ್ಟಿದ್ದಾರೆ ಎಂದು ಸರ್ಕಾರದ ದಾಖಲೆಗಳು ಹೇಳುತ್ತವೆ.



ಕೋವಿಡ್‌ನಿಂದ ಭಾನುವಾರ ಮೃತಪಟ್ಟವರ ಶವಗಳನ್ನು ಕಾನ್ಪುರದ ಭೈರೋಘಾಟ್ ಚಿತಾಗಾರದ ಎದುರು ಇರಿಸಲಾಗಿತ್ತು — ಪಿಟಿಐ ಚಿತ್ರ

ಕೇಂದ್ರದ ವಿರುದ್ಧ ಲಸಿಕೆ ‘ಅಪಹರಣ’ದ ಆರೋಪ

ನವದೆಹಲಿ (ಪಿಟಿಐ): ಮೇ 1ರಿಂದ ಜಾರಿಗೆ ಬರುವಂತೆ 18ರಿಂದ 45 ವರ್ಷದವರಿಗೆ ಕೋವಿಡ್ ಲಸಿಕೆ ನೀಡುವ ಕುರಿತು ಕಾಂಗ್ರೆಸ್ ಪಕ್ಷದ ಆಡಳಿತವಿರುವ ನಾಲ್ಕು ರಾಜ್ಯಗಳು ಅಸಹಾಯಕತೆ ಮತ್ತು ಅನುಮಾನ ವ್ಯಕ್ತಪಡಿಸಿವೆ. ಉತ್ಪಾದಕರಿಂದ ಎಲ್ಲ ಲಸಿಕೆಗಳನ್ನು ಕೇಂದ್ರ ಸರ್ಕಾರ ‘ಅಪಹರಿಸಿದೆ’ ಎಂದು ಆರೋಪಿಸಿವೆ.

ಕಾಂಗ್ರೆಸ್ ಪಕ್ಷದ ಆಡಳಿತವಿರುವ ರಾಜ್ಯಗಳ ಬಗ್ಗೆ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಅನುಸರಿಸುತ್ತಿದೆ. ಎಲ್ಲ ಅರ್ಹ ವಯಸ್ಕರಿಗೂ ಲಸಿಕೆ ನೀಡಲು ಅನುವಾಗುವಂತೆ ಉಚಿತವಾಗಿ ಲಸಿಕೆ ಡೋಸ್‌ಗಳನ್ನು ಪೂರೈಸಬೇಕು ಎಂದು ಈ ರಾಜ್ಯ ಸರ್ಕಾರಗಳು ಮನವಿ ಮಾಡಿವೆ.

ಕಾಂಗ್ರೆಸ್ ಆಡಳಿತವಿರುವ ಛತ್ತೀಸಗಡ, ರಾಜಸ್ಥಾನ, ಪಂಜಾಬ್ ಮತ್ತು ಜಾರ್ಖಂಡ್ ರಾಜ್ಯಗಳ ಆರೋಗ್ಯ ಸಚಿವರು ಜಂಟಿಯಾಗಿ ವರ್ಚುವಲ್ ಸುದ್ದಿಗೋಷ್ಠಿಯಲ್ಲಿ ತಮ್ಮ ಅಸಹಾಯಕತೆ ವ್ಯಕ್ತಪಡಿಸಿದ್ದು, ಸದ್ಯ ಲಭ್ಯವಿರುವ ಲಸಿಕೆಯ ಎಲ್ಲ ದಾಸ್ತಾನನ್ನೂ ಕೇಂದ್ರವೇ ಪಡೆದಿರುವಾಗ ಲಸಿಕೆ ನಿಡಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

‘ಮೇ 1 ರಿಂದ ಮುಂದಿನ ಲಸಿಕೆ ಅಭಿಯಾನ ಆರಂಭಿಸಲು ನಾವು ಸಿದ್ಧತೆ ಮಾಡಿಕೊಂಡಿದ್ದೇವೆ. ಆದರೆ ಉತ್ಪಾದಕರು ಲಸಿಕೆ ಪೂರೈಸಲು ಆಗುತ್ತಿಲ್ಲ ಎನ್ನುತ್ತಿದ್ದಾರೆ ಎಂದು ವಿವರಿಸಿದರು. ಮೇ 15ರವರೆಗೆ ಲಸಿಕೆ ಪೂರೈಸಲಾಗದು ಎಂದು ಸೀರಂ ಇನ್‌ಸ್ಟಿಟ್ಯೂಟ್ ಹೇಳಿದೆ’ ಎಂದು ರಾಜಸ್ಥಾನ ಆರೋಗ್ಯ ಸಚಿವ ರಘುಶರ್ಮಾ ತಿಳಿಸಿದರು.

‘ಕೇಂದ್ರ ಸರ್ಕಾರ ಅಗತ್ಯಾನುಸಾರ ಲಸಿಕೆ ಪೂರೈಸಬೇಕು. ಲಸಿಕೆ ಲಭ್ಯತೆಯನ್ನು ಆಧರಿಸಿ ಅಭಿಯಾನವನ್ನು ಕೈಗೊಳ್ಳಲಾಗುವುದು’ ಎಂದರು.

ಛತ್ತೀಸಗಡ ಆರೋಗ್ಯ ಸಚಿವ ಟಿ.ಎಸ್.ಸಿಂಗ್ ದೇವ್ ಅವರು, ‘ಲಸಿಕೆ ವಿಚಾರದಲ್ಲಿ ದೇಶಕ್ಕೆ ತಪ್ಪು ಮಾಹಿತಿ ನೀಡಲಾಗುತ್ತಿದೆ. ಈ ವಿಷಯದಲ್ಲಿ ಕೇಂದ್ರ ಅಪಹಾಸ್ಯ ಮಾಡುತ್ತಿದೆ’ ಎಂದು ತಿಳಿಸಿದರು.

18ರಿಂದ 45ವರ್ಷದೊಳಗಿನವರಿಗೆ ಲಸಿಕೆ: ನೋಂದಣಿ ಕಡ್ಡಾಯ

18ರಿಂದ 45 ವರ್ಷದೊಳಗಿನವರು ಕೋವಿಡ್–19 ಲಸಿಕೆ ಪಡೆಯಲು ಕೋವಿನ್ ವೆಬ್ ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ತಮ್ಮ ಹೆಸರನ್ನು ನೋಂದಣಿ ಮಾಡಬೇಕು ಎಂದು ಅಧಿಕೃತ ಮೂಲಗಳು ಭಾನುವಾರ ತಿಳಿಸಿವೆ.

45 ವರ್ಷ ಮೇಲ್ಪಟ್ಟವರಿಗೆ ಸ್ಥಳದಲ್ಲೇ ನೋಂದಣಿ ಮಾಡಿಕೊಂಡು ಲಸಿಕೆ ನೀಡಲಾಗುವುದು. 18 ವರ್ಷ ಮೇಲ್ಪಟ್ಟವರು ಏಪ್ರಿಲ್ 28ರಿಂದ ಕೋವಿನ್ ಪ್ಲಾಟ್‌ಫಾರಂ ಮತ್ತು ಆರೋಗ್ಯಸೇತು ಆ್ಯಪ್ ಮೂಲಕ ತಮ್ಮ ಹೆಸರನ್ನು ನೋಂದಾಯಿಸಬಹುದು ಎಂದು ಮೂಲಗಳು ಹೇಳಿವೆ.

ಸಮಸ್ಯೆ ಇದ್ದರೂ ಬೇಡಿಕೆ ಸಲ್ಲಿಸದ ರಾಜ್ಯ ಸರ್ಕಾರ

ಒಂದನೇ ಪುಟದಿಂದ..

‘ಹರಿಹರ, ಶಿವಮೊಗ್ಗ, ಹೊಸಪೇಟೆ, ಹಾಸನ, ಅರಸೀಕೆರೆ, ಬಾಗಲಕೋಟೆ, ತಾಳಗುಪ್ಪ, ವಿಜಯಪುರ, ಬೆಳಗಾವಿ ನಿಲ್ದಾಣಗಳಲ್ಲಿ ಐಸೋಲೇಷನ್ ಬೋಗಿಗಳನ್ನು ಮಾತ್ರ ಒದಗಿಸಲಾಗುತ್ತದೆ. ಆಮ್ಲಜನಕ ವ್ಯವಸ್ಥೆ ಬೇಕಾದರೆ ಆಯಾ ಜಿಲ್ಲಾಡಳಿತರ್ವೆ ಮಾಡಿಕೊಳ್ಳಬೇಕು’ ಎಂದೂ ಹೇಳಿದರು.

‘ಕಳೆದ ವರ್ಷ 320 ಬೋಗಿಗಳನ್ನು ಸಿದ್ಧಪಡಿಸಿ ಇಟ್ಟುಕೊಳ್ಳಲಾಗಿತ್ತು. ರಾಜ್ಯ ಸರ್ಕಾರದಿಂದ ಯಾವುದೇ ಬೇಡಿಕೆ ಬಂದಿರಲಿಲ್ಲ. ಈಗ 250ಕ್ಕೂ ಹೆಚ್ಚು ಬೋಗಿ ಸಿದ್ಧ ಇವೆ. ಅಗತ್ಯಬಿದ್ದರೆ ಮತ್ತಷ್ಟು ಬೋಗಿಗಳನ್ನು ಕೋವಿಡ್‌ಗಾಗಿ ಪರಿವರ್ತಿಸಲಾಗುವುದು’ ಎಂದರು.

ಯಾವ ಸೌಲಭ್ಯಗಳಿವೆ?

ಒಂದು ಬೋಗಿಯಲ್ಲಿ 16 ರೋಗಿಗಳಿಗೆ ಚಿಕಿತ್ಸೆ ನೀಡಬಹುದಾಗಿದೆ. ಆಕ್ಸಿಜನ್ ಸಿಲಿಂಡರ್ ಅಳವಡಿಸಲು ಜಾಗವಿದೆ. ಥರ್ಮಲ್ ಸ್ಕ್ಯಾನರ್, ಜೈವಿಕ ಶೌಚಾಲಯ, ಕಸದ ಬುಟ್ಟಿ ಇಡಲಾಗಿದೆ. ವೈದ್ಯರು ಮತ್ತು ಶುಶ್ರೂಷಕರು ಪಿಪಿಇ ಕಿಟ್ ಬದಲಿಸಿಕೊಳ್ಳಲು ಪ್ರತ್ಯೇಕ ಸ್ಥಳವನ್ನು ಮೀಸಲಿಡಲಾಗಿದೆ. ಎಲ್ಲ ಬೋಗಿಗಳನ್ನು ಸ್ಯಾನಿಟೈಸ್ ಮಾಡಲಾಗಿದೆ.

‘ಶೀಘ್ರ ಬೇಡಿಕೆ ಸಲ್ಲಿಕೆ’

‘ಸಾಮಾನ್ಯ ಹಾಸಿಗೆಗಳ ಅಗತ್ಯ ಸದ್ಯಕ್ಕಿಲ್ಲ. ಹೀಗಾಗಿ, ಯಾವುದೇ ಬೇಡಿಕೆ ಸಲ್ಲಿಸಿರಲಿಲ್ಲ. ನಮಗೆ ತುರ್ತಾಗಿ ಬೇಕಾಗಿರುವುದು ವೈದ್ಯಕೀಯ ಆಮ್ಲಜನಕ ಸಹಿತ ಹಾಸಿಗೆಗಳು. ನಾಲ್ಕು ನಿಲ್ದಾಣಗಳಲ್ಲಿ ಇಂತಹ ಹಾಸಿಗೆಗಳನ್ನು ಒದಗಿಸಿದರೂ ಸಾಕಷ್ಟು ಸಹಾಯವಾಗುತ್ತದೆ. ಈ ಬಗ್ಗೆ ಮಾಹಿತಿ ಇರಲಿಲ್ಲ. ನೈರುತ್ಯ ರೈಲ್ವೆ ಅಧಿಕಾರಿಗಳೊಂದಿಗೆ ಮಾತನಾಡಿ ಕೂಡಲೇ ಬೇಡಿಕೆ ಸಲ್ಲಿಸಲಾಗುವುದು’ ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

ಸರ್ಕಾರ – ಖಾಸಗಿ ‘ಬೆಡ್’ ಜಟಾಪಟಿ

ಒಂದನೇ ಪುಟದಿಂದ..

ಏಪ್ರಿಲ್ 14 ರಂದು 506 ರೋಗಿಗಳು ಐಸಿಯುನಲ್ಲಿದ್ದರೆ, ಭಾನುವಾರ (ಏ. 25) ಆ ಸಂಖ್ಯೆ 1,492 ಕ್ಕೆ ಹೆಚ್ಚಳವಾಗಿದೆ.

‘ಐಸಿಯು ಬೆಡ್ ಸಿಗದೇ ಇರುವ ಕಾರಣ ಸಾವಿನ ಸಂಖ್ಯೆ ಹೆಚ್ಚಳವಾಗುತ್ತಿದೆ. ಮುಂದೆ ಇನ್ನಷ್ಟು ಭೀಕರ ಪರಿಸ್ಥಿತಿ ಎದುರಾದರೂ ಅಚ್ಚರಿ ಪಡಬೇಕಿಲ್ಲ. ಮುಂದಿನ ದಿನಗಳಲ್ಲಿ ಐಸಿಯು ಒದಗಿಸುವುದು ಸರ್ಕಾರಕ್ಕೆ ಬಹುದೊಡ್ಡ ಸವಾಲಾಗಲಿದೆ’ ಎಂದು ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

‘ಬೆಂಗಳೂರು ನಗರದಲ್ಲಿರುವ ಎಲ್ಲ 13 ವೈದ್ಯಕೀಯ ಕಾಲೇಜುಗಳಲ್ಲಿ ಡಯಾಲಿಸಿಸ್, ತಾಯಿ ಶಿಶು ಹಾಸಿಗೆ, ತುರ್ತು ಚಿಕಿತ್ಸೆ ಹಾಸಿಗೆ ಹೊರತುಪಡಿಸಿ, ಉಳಿದೆಲ್ಲವನ್ನೂ ಕೋವಿಡ್‌ಗೆ ಮೀಸಲಿಡಲು ಸೂಚಿಸಲಾಗಿದೆ. ಇದರಿಂದಾಗಿ ಏಳೂವರೆ ಸಾವಿರ ಹಾಸಿಗೆ ವೈದ್ಯಕೀಯ ಕಾಲೇಜುಗಳಿಂದ ಲಭ್ಯವಾಗಲಿದೆ. ಆದರೆ, ಈ ಎಲ್ಲ ವ್ಯವಸ್ಥೆಗಳನ್ನೂ ಸರ್ಕಾರ ತ್ವರಿತಗೊಳಿಸಬೇಕಿದೆ’ ಎಂದರು.

‘ಬೆಂಗಳೂರಿನಲ್ಲಿ ಆಕ್ಸಿಜನ್ ಹಾಸಿಗೆ, ಐಸಿಯು ಹಾಸಿಗೆ, ವೆಂಟಿಲೇಟರ್ ಕೊರತೆಯಾಗುತ್ತಿದೆ. ಹೀಗಾಗಿ ವೆಂಟಿಲೇಟರ್ ಲಭ್ಯತೆಯನ್ನು 10 ಪಟ್ಟು ಹೆಚ್ಚಿಸಲು ಮುಖ್ಯಮಂತ್ರಿಗಳು ಸೂಚಿಸಿದ್ದು, ಇದಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಬೆಂಗಳೂರಿನಲ್ಲಿ 2 ಸಾವಿರ ಹಾಸಿಗೆಗಳ, ಮೈಸೂರು, ಬೀದರ್, ಹುಬ್ಬಳ್ಳಿ, ಬೆಳಗಾವಿ ಹಾಗೂ ಶಿವಮೊಗ್ಗದಲ್ಲಿ ಮಾಡ್ಯೂಲರ್ ಐಸಿಯು ಹೊಂದಿರುವ 200-250 ಮೇಕ್‌ಶಿಫ್ಟ್ ಆಸ್ಪತ್ರೆ ನಿರ್ಮಿಸಲು ತೀರ್ಮಾನಿಸಲಾಗಿದೆ. 15 ದಿನಗಳಲ್ಲಿ ಈ ಆಸ್ಪತ್ರೆಗಳು ನಿರ್ಮಾಣವಾಗಬೇಕಿದೆ’ ಎಂದೂ ಮಾಹಿತಿ ನೀಡಿದರು.

ಎಲ್ಲವೂ ಭರ್ತಿ: ಬಿಬಿಎಂಪಿ ಬೆಡ್‌ಗಳ ನಿರ್ವಹಣೆಗೆ ತೆರೆದಿರುವ ಪೋರ್ಟಲ್‌ನ (ಏ. 25) ಮಾಹಿತಿ ಪ್ರಕಾರ, ಸರ್ಕಾರಿ ವೈದ್ಯಕೀಯ, ಸರ್ಕಾರಿ ಆಸ್ಪತ್ರೆ, ಖಾಸಗಿ ವೈದ್ಯಕೀಯ, ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ ರೋಗಿಗಳಿಗೆ ಹಂಚಿಕೆಯಾದ ಒಟ್ಟು 8,804 ಬೆಡ್‌ಗಳಲ್ಲಿ 7,450 ಭರ್ತಿಯಾಗಿದೆ. 1,354 ಖಾಲಿ ಇದೆ. ಆದರೆ, ಖಾಸಗಿ ವೈದ್ಯಕೀಯ ಆಸ್ಪತ್ರೆಗಳಲ್ಲಿ 734, ಖಾಸಗಿ ಆಸ್ಪತ್ರೆಗಳಲ್ಲಿ 510. ‘ಬೆಡ್ ಖಾಲಿ ಇದೆ ಎಂದು ಈ ಆಸ್ಪತ್ರೆಗಳಿಗೆ ಹೋದರೆ ಎಲ್ಲವೂ ಭರ್ತಿಯಾಗಿದೆ ಎಂದು ವಾಪಸು ಕಳುಹಿಸುತ್ತಾರೆ’ ಎಂಬ ಆರೋಪ ರೋಗಿಗಳ ಸಂಬಂಧಿಕರದ್ದು.

ರಾಜ್ಯದ ಆಸ್ಪತ್ರೆಗಳಲ್ಲಿರುವ ಹಾಸಿಗೆಗಳು

ಎಲ್ಲಿ	ಎಷ್ಟು
ಸರ್ಕಾರಿ ಆಸ್ಪತ್ರೆ	31,444
ಸರ್ಕಾರಿ ವೈದ್ಯಕೀಯ ಕಾಲೇಜು	14,617
ಖಾಸಗಿ	38,600
ಖಾಸಗಿ ವೈದ್ಯಕೀಯ ಕಾಲೇಜು	35,766

ರಾಜ್ಯದಲ್ಲಿ ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆ

ಆಸ್ಪತ್ರೆ	ಐಸಿಯು ಹಾಸಿಗೆ	ಕೋವಿಡ್‌ಗೆ ಮೀಸಲು
ಸರ್ಕಾರಿ	1,126	892
ಸರ್ಕಾರಿ ವೈದ್ಯಕೀಯ ಕಾಲೇಜು	982	576
ಖಾಸಗಿ	680	285
ಖಾಸಗಿ ವೈದ್ಯಕೀಯ ಕಾಲೇಜು	982	283
ಒಟ್ಟು	3,770	2,036

‘ಆಕ್ಸಿಜನ್ ಹಾಸಿಗೆಗಳ ಸಂಖ್ಯೆ ತಕ್ಷಣ ಹೆಚ್ಚಿಸಬೇಕು’



‘ಆಕ್ಸಿಜನ್ ಪೂರೈಸುವ ಜೊತೆಗೆ ಆಕ್ಸಿಜನ್ ಹಾಸಿಗೆಗಳ ಸಂಖ್ಯೆಯನ್ನು ಸರ್ಕಾರ ಹೆಚ್ಚಿಸಬೇಕು. ವಿಕ್ಟೋರಿಯಾ, ಬೌರಿಂಗ್ ಹೀಗೆ ಆಸ್ಪತ್ರೆಗಳ ಅಂಗಳದಲ್ಲಿಯೇ 50, 100 ಬೆಡ್‌ಗಳ ತಾತ್ಕಾಲಿಕ ವ್ಯವಸ್ಥೆ ಮಾಡಬೇಕು. ಈ ಕೆಲಸ ಆದಷ್ಟು ಬೇಗ ಆಗಬೇಕು. ಆಕ್ಸಿಜನ್ ಬೆಡ್ ಸಿಗುತ್ತಿಲ್ಲ ಎಂಬ ಅಪವಾದ ಇದರಿಂದ ತಪ್ಪುತ್ತದೆ’ ಎಂದು ಆರೋಗ್ಯ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್. ಸಚ್ಚಿದಾನಂದ ಸಲಹೆ ನೀಡಿದರು.

‘ಸದ್ಯ ಎಲ್ಲ ಬೆಡ್‌ಗಳು ಭರ್ತಿಯಾಗಿವೆ. ಅದಕ್ಕೆ ಕಾರಣ, ಒಮ್ಮೆ ಆಸ್ಪತ್ರೆಗೆ ದಾಖಲಾದವರು ಕನಿಷ್ಠ 7 ರಿಂದ 10 ದಿನ ಇರಬೇಕಾಗುತ್ತದೆ. ನಿತ್ಯ 20 ಸಾವಿರದಿಂದ 25 ಸಾವಿರ ಕೇಸುಗಳು ಬರುತ್ತಿವೆ. ಅದರಲ್ಲಿ ಶೇ 80ರಷ್ಟು ಮಂದಿ ಮನೆಯಲ್ಲೇ ಆರೈಕೆ ಪಡೆದರೂ, ಉಳಿದವರಿಗೆ ಬೆಡ್ ವ್ಯವಸ್ಥೆ ಮಾಡಲೇಬೇಕು. ಎಲ್ಲೋ ಮಾಡುವ ಬದಲು, ಆಸ್ಪತ್ರೆಗಳ ಆವರಣದಲ್ಲಿಯೇ ಆಕ್ಸಿಜನ್ ಬೆಡ್ ಮಾಡಬೇಕು’ ಎಂದರು.

‘ಮುಂದಿನ ಎರಡು ವಾರ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಬಹುದು. ಬಿಗಿ ಕ್ರಮಗಳಿಂದ ಸೋಂಕು ಹರಡುವಿಕೆಗೆ ತಡೆ ಬಿದ್ದರೂ, ರೋಗಲಕ್ಷಣ ಇಲ್ಲದವರಿಂದ ತಗಲಿದ್ದರೆ, ಆ ಸೋಂಕು ದೃಢವಾಗಲು 14 ದಿನ ತೆಗೆದುಕೊಳ್ಳುತ್ತದೆ. ಮಹಾರಾಷ್ಟ್ರದಲ್ಲಿ ಪರಿಸ್ಥಿತಿ ಸುಧಾರಿಸುತ್ತಿದೆ. ಎರಡು ವಾರದಲ್ಲಿ ಅಲ್ಲಿ ಕಡಿಮೆಯಾದರೆ ಇಲ್ಲೂ ಆ ಸ್ಥಿತಿ ಬರಬಹುದು’ ಎಂದೂ ಹೇಳಿದರು.

ಕೊರೊನಾ ಸಾಂತ್ವನ

ಯುವಕರಿಗೇ ಹೆಚ್ಚು ಅಪಾಯ



‘ಕೋವಿಡ್ ಎರಡನೇ ಅಲೆಯಲ್ಲಿ ಯುವಕರೇ ಹೆಚ್ಚಿನ ಸಂಖ್ಯೆಯಲ್ಲಿ ಅಪಾಯಕ್ಕೆ ಗುರಿಯಾಗುತ್ತಿದ್ದಾರೆ’.

‘ಮಾಲ್‌ಗಳು, ಚಿತ್ರಮಂದಿರಗಳಲ್ಲಿ ಯುವಕರನ್ನೇ ಹೆಚ್ಚಾಗಿ ಕಾಣುತ್ತೇವೆ. ಅವರು ಕೋವಿಡ್ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದಿಲ್ಲ. ಅವರ ನಿರ್ಲಕ್ಷ್ಯದಿಂದ ಮನೆಯಲ್ಲಿರುವ ಇತರ ಸದಸ್ಯರು ಅಪಾಯಕ್ಕೊಳಗಾಗುತ್ತಿದ್ದಾರೆ. ಮೊದಲ ಅಲೆಯಲ್ಲಿ 60 ವರ್ಷ ಮೇಲ್ಪಟ್ಟವರು ಗಂಭೀರ ಸಮಸ್ಯೆಯಿಂದ ಬಳಲುತ್ತಿದ್ದುದ್ದನ್ನು ಕಂಡಿದ್ದೆವು. ಈಗ 40 ವರ್ಷದೊಳಗಿನವರು ಹೆಚ್ಚಿನ ಸಂಖ್ಯೆಯಲ್ಲಿ ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ. 27 ಹಾಗೂ 30 ವರ್ಷದೊಳಗಿನವರು ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇದು ಆತಂಕಕಾರಿ’.

‘ಈಗ ಪರಿಸ್ಥಿತಿ ಗಂಭೀರ ಸ್ವರೂಪ ಪಡೆದುಕೊಂಡಿದೆ. ಹೆಚ್ಚು ಮಂದಿ ಸೇರುವ ಜಾಗದಲ್ಲಿ ಸೋಂಕು ಪ್ರಸರಣದ ಅಪಾಯ ಅಧಿಕ. ಈಗ 10 ಮಂದಿಯ ಪೈಕಿ ಒಬ್ಬರಿಗೆ ಸೋಂಕು ದೃಢಪಡುತ್ತಿದೆ. ಹೀಗಾಗಿ ಮದುವೆ, ಜಾತ್ರೆ ಸೇರಿದಂತೆ ಇತರೆ ಸಭೆ, ಸಮಾರಂಭಗಳನ್ನು ನಡೆಸದಿರುವುದೇ ಒಳಿತು’.

‘ಮನೆಯಲ್ಲೇ ಆರು ನಿಮಿಷ ಓಡಾಡಿ ಬಳಿಕ ದೇಹದ ಆಮ್ಲಜನಕ ಪ್ರಮಾಣ ಪರೀಕ್ಷಿಸಿಕೊಳ್ಳಬೇಕು. ಆಮ್ಲಜನಕ ಪ್ರಮಾಣ 94ಕ್ಕಿಂತ ಕಡಿಮೆ ಇದ್ದರಷ್ಟೇ ಆಸ್ಪತ್ರೆಗೆ ದಾಖಲಾಗಬೇಕು. ಸೌಮ್ಯ ಲಕ್ಷಣ ಕಾಣಿಸಿಕೊಂಡವರೆಲ್ಲಾ ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ. ಇದು ಸರಿಯಲ್ಲ. ಜನರ ಈ ಮನೋಧೋರಣೆಯಿಂದಾಗಿಯೇ ಗಂಭೀರ ಸಮಸ್ಯೆ ಎದುರಿಸುತ್ತಿರುವವರಿಗೆ ಆಸ್ಪತ್ರೆಗಳಲ್ಲಿ ಹಾಸಿಗೆ ಸಿಗುತ್ತಿಲ್ಲ’.

‘ಮನೆಗೆ ಅತಿಥಿಗಳು ಬಂದರೆ ಅವರ ಜೊತೆ ಮುಖಗವಸು ಧರಿಸಿಕೊಂಡೇ ಮಾತನಾಡಬೇಕು. ಅವರಿಗೂ ಮುಖಗವಸು ಧರಿಸುವಂತೆ ಸೂಚಿಸಬೇಕು. ಇದನ್ನು ಎಲ್ಲರೂ ರೂಢಿಸಿಕೊಳ್ಳಬೇಕು’.

‘ಸೋಂಕು ತಗುಲಿದೆ ಎಂಬುದು ಗೊತ್ತಾದ ತಕ್ಷಣ ಗಾಬರಿಯಾಗುವ ಅಗತ್ಯವಿಲ್ಲ. ಅಂತಹ ಸಮಯದಲ್ಲಿ ಸಂಯಮದಿಂದ ಇರಬೇಕು. ಮಾನಸಿಕವಾಗಿ ಸದೃಢರಾಗಿದ್ದರೆ ದೇಹದಲ್ಲಿ ರೋಗನಿರೋಧಕ ಶಕ್ತಿಯೂ ಹೆಚ್ಚುತ್ತದೆ. ಮನೆಯಲ್ಲಿ ಇರುವವರು ಯೋಗ, ಪ್ರಾಣಾಯಾಮ, ಧ್ಯಾನ ಮಾಡುವುದಕ್ಕೆ ಹೆಚ್ಚು ಒತ್ತು ಕೊಡಬೇಕು. ಮನೆಯ ಆವರಣದಲ್ಲಿ ವಾಕಿಂಗ್ ಮಾಡುವುದು, ಲಘು ವ್ಯಾಯಾಮಗಳನ್ನು ಮಾಡುವುದು ಉತ್ತಮ. ಜೊತೆಗೆ ಪೌಷ್ಠಿಕ ಆಹಾರ ಸೇವನೆಗೆ ಆದ್ಯತೆ ಕೊಡಬೇಕು. ದಿನದ 24 ಗಂಟೆಯೂ ಟಿ.ವಿ ನೋಡುತ್ತಾ ಕೂರುವುದು ಸರಿಯಲ್ಲ’.

ಡಾ.ಪ್ರದೀಪ್ ರಂಗಪ್ಪ, ಹಿರಿಯ ವೈದ್ಯರು, ಕೊಲಂಬಿಯಾ ಏಷ್ಯಾ ರೆಫರಲ್ ಆಸ್ಪತ್ರೆ, ಯಶವಂತಪುರ, ಬೆಂಗಳೂರು

ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್ತಿನ ಸೆರೊ ಸಮೀಕ್ಷೆ ವರದಿ

ದುರ್ಬಲ ಪ್ರತಿಕಾಯದಿಂದ ಕೋವಿಡ್ ತೀವ್ರ

ನವದೆಹಲಿ (ಪಿಟಿಐ): ದೇಶದ ಜನರಲ್ಲಿ ಮಾರ್ಚ್ ವೇಳೆಗೆ ಕೋವಿಡ್ ಪ್ರತಿಕಾಯದ ಸಾಮರ್ಥ್ಯ ಕುಂದಿದ್ದೇ ಕೋವಿಡ್ ಮತ್ತಷ್ಟು ತೀವ್ರವಾಗಿ ಹರಡಲು ಕಾರಣ ಎಂಬುದು ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್ತು (ಸಿಎಸ್‌ಐಆರ್) ನಡೆಸಿದ ಸೆರೊ ಸಮೀಕ್ಷೆಯಲ್ಲಿ ಪತ್ತೆಯಾಗಿದೆ.


ಸಿಎಸ್‌ಐಆರ್ ದೇಶದ ವಿವಿಧ ನಗರಗಳಲ್ಲಿ ಇರುವ ತನ್ನ 40 ಪ್ರಯೋಗಾಲಯಗಳ ಸಿಬ್ಬಂದಿ, ಗುತ್ತಿಗೆ ನೌಕರರ ಮೇಲೆ ಸೆರೊ ಸಮೀಕ್ಷೆ ನಡೆಸಿತ್ತು. ಒಟ್ಟು 10,427 ಜನರು ಈ ಸಮೀಕ್ಷೆಗೆ ಒಳಪಟ್ಟಿದ್ದರು.

ಭಾರತದಲ್ಲಿ 2020ರ ಸೆಪ್ಟೆಂಬರ್ ವೇಳೆಗೆ ಕೋವಿಡ್ ತೀವ್ರವಾಗಿತ್ತು. ಆ ವೇಳೆಗೆ ಪದೇ ಪದೇ ಸಂಪರ್ಕಕ್ಕೆ ಬರುತ್ತಿದ್ದ ಕಾರ್ಮಿಕ ವರ್ಗ, ಆರೋಗ್ಯ ಸೇವಾ ಸಿಬ್ಬಂದಿ, ಪ್ರತಿನಿತ್ಯ ಸಾರ್ವಜನಿಕ ಸಾರಿಗೆಯಲ್ಲಿ ಓಡಾಡುವವರಲ್ಲಿ ಕೋವಿಡ್ ಪ್ರತಿಕಾಯವು ಅಭಿವೃದ್ಧಿಯಾಗಿತ್ತು. ಹೀಗಾಗಿಯೇ ಸೆಪ್ಟೆಂಬರ್ ನಂತರ ಹೊಸ ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆಯಾಗಿತ್ತು ಎಂದು ವರದಿಯಲ್ಲಿ ವಿವರಿಸಲಾಗಿದೆ.

ಸೆಪ್ಟೆಂಬರ್‌ನಲ್ಲಿ ಹತ್ತಾರು ಕೋಟಿ ಜನರಿಗೆ ಕೋವಿಡ್ ತಗುಲಿದೆ ಎಂದು ಹಲವು ಸೆರೊ ಸಮೀಕ್ಷೆಗಳು ಹೇಳಿದ್ದವು. ಈ ಜನರಲ್ಲಿ ಪ್ರತಿಕಾಯ ಅಭಿವೃದ್ಧಿಯಾಗಿ, ಅವು ಪ್ರಬಲವಾಗಿರುವವರೆಗೂ ಕೋವಿಡ್ ಹರಡುವುದು ನಿಧಾನವಾಯಿತು. ಹೀಗಾಗಿಯೇ ಕೋವಿಡ್ ತಗುಲಿದವರೂ ಬೇಗ ಗುಣಮುಖರಾದರು. ಈ ಪ್ರತಿಕಾಯವು 5-6 ತಿಂಗಳು ಮಾತ್ರ ರಕ್ಷಣೆ ನೀಡುವ ಸಾಮರ್ಥ್ಯ ಹೊಂದಿದ್ದವು. ಸೆಪ್ಟೆಂಬರ್‌ನಿಂದ 2021ರ ಮಾರ್ಚ್‌ವರೆಗೂ ಕೋವಿಡ್ ನಿಯಂತ್ರದಲ್ಲಿ ಇತ್ತು ಎಂದು ವರದಿಯಲ್ಲಿ ವಿವರಿಸಲಾಗಿದೆ.

ಆದರೆ, ಈ ಪ್ರತಿಕಾಯವು ಬಹುತೇಕ ಮಂದಿಯಲ್ಲಿ 5-6 ತಿಂಗಳಲ್ಲೇ ತನ್ನ ಬಲವನ್ನು ಕಳೆದುಕೊಂಡಿತ್ತು. ಇದು ಸೆರೊ ಸಮೀಕ್ಷೆಯಲ್ಲಿ ಪತ್ತೆಯಾಗಿದೆ. ಹೀಗೆ ಕೊರೊನಾವೈರಸ್ ವಿರುದ್ಧ ಹೋರಾಡುವ ಪ್ರತಿಕಾಯ ಸಾಮರ್ಥ್ಯ ದುರ್ಬಲವಾದ ಕಾರಣದಿಂದಲೇ, ಈ ವರ್ಗದ ಜನರಲ್ಲಿ ಕೋವಿಡ್ ಹರಡಿತು ಎಂದು ಸೆರೊ ಸಮೀಕ್ಷೆಯ ವರದಿಯಲ್ಲಿ ವಿವರಿಸಲಾಗಿದೆ.

‘ಧೂಮಪಾನಿಗಳು, ಸಸ್ಯಾಹಾರಿಗಳಿಂದ ಕೊರೊನಾ ದೂರ’



ಧೂಮಪಾನ ಮಾಡುವವರು ಮತ್ತು ಸಸ್ಯಾಹಾರಿಗಳು ಕೋವಿಡ್‌ಗೆ ಬಾಧಿತರಾಗುವ ಸಾಧ್ಯತೆ ಕಡಿಮೆ ಇದೆ ಎಂದು ಈ ಅಧ್ಯಯನದಲ್ಲಿ ಪತ್ತೆಯಾಗಿದೆ. ಧೂಮಪಾನದಿಂದ ಆರೋಗ್ಯಕ್ಕೆ ಹಾನಿಯಾದರೂ, ಕೋವಿಡ್ ವಿರುದ್ಧ ಇದು ರಕ್ಷಾಕವಚದಂತೆ ಕೆಲಸ ಮಾಡುತ್ತಿರುವ ಸಾಧ್ಯತೆ ಇದೆ ಎಂದು ಸಿಎಸ್‌ಐಆರ್ ಅಧ್ಯಯನ ವರದಿಯಲ್ಲಿ ಉಲ್ಲೇಖಿಸಲಾಗಿದೆ.

‘ಧೂಮಪಾನದಿಂದ ಶ್ವಾಸಕೋಶದ ಒಳಮೈಯಲ್ಲಿ ಲೋಳೆಯ ಉತ್ಪಾದನೆಯಾಗುವುದರಿಂದ ವೈರಾಣು ಶ್ವಾಸಕೋಶದ ಒಳಸೇರದಂತೆ ತಡೆಯುತ್ತಿರಬಹುದು. ಆದರೆ ಈ ಬಗ್ಗೆ ಇನ್ನಷ್ಟು ಅಧ್ಯಯನದ ಅವಶ್ಯಕತೆ ಇದೆ’ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಅಮೆರಿಕದ ಒಟ್ಟು ಜನಸಂಖ್ಯೆಯಲ್ಲಿ ಶೇ 14ರಷ್ಟು ಜನರು ಧೂಮಪಾನಿಗಳು. ಆದರೆ ಕೋವಿಡ್ ರೋಗಿಗಳಲ್ಲಿ ಧೂಮಪಾನಿಗಳ ಪ್ರಮಾಣ ಶೇ 1.3ರಷ್ಟು ಮಾತ್ರ. ಬ್ರಿಟನ್‌ನ ಒಟ್ಟು ಜನಸಂಖ್ಯೆಯಲ್ಲಿ ಧೂಮಪಾನಿಗಳ ಪ್ರಮಾಣ ಶೇ 28ರಷ್ಟು. ಆದರೆ ಕೋವಿಡ್ ರೋಗಿಗಳಲ್ಲಿ ಈ ಪ್ರಮಾಣ ಶೇ 5ರಷ್ಟು ಮಾತ್ರ. ಇದೇ ರೀತಿ ಫ್ರಾನ್ಸ್‌ನಲ್ಲಿ ಶೇ 32ರಷ್ಟು ಜನರು ಧೂಮಪಾನಿಗಳಿದ್ದಾರೆ. ಆದರೆ ಒಟ್ಟು ಕೋವಿಡ್ ರೋಗಿಗಳಲ್ಲಿ ಇವರ ಪ್ರಮಾಣ ಶೇ 7.1ರಷ್ಟು ಮಾತ್ರ. ಚೀನಾದಲ್ಲಿ ಶೇ 50ಕ್ಕೂ ಹೆಚ್ಚು ಜನರು ಧೂಮಪಾನಿಗಳು. ಆದರೆ ಕೋವಿಡ್ ರೋಗಿಗಳಲ್ಲಿ ಧೂಮಪಾನಿಗಳ ಪ್ರಮಾಣ ಶೇ 3.3ರಷ್ಟು ಮಾತ್ರ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

‘ಒ’ ಗುಂಪಿನ ರಕ್ತದವರಿಗೆ ಕೋವಿಡ್ ತಗಲುವ ಸಾಧ್ಯತೆ ಕಡಿಮೆ. ಆದರೆ ‘ಬಿ’ ಮತ್ತು ‘ಎಬಿ’ ಗುಂಪಿನ ರಕ್ತದವರಿಗೆ ಕೋವಿಡ್ ತಗಲುವ ಸಾಧ್ಯತೆ ಅತ್ಯಧಿಕ ಎಂದು ವರದಿಯಲ್ಲಿ ಹೇಳಲಾಗಿದೆ.

ಸಸ್ಯಾಹಾರದಲ್ಲಿ ನಾರಿನ ಅಂಶ ಹೆಚ್ಚು. ಇದು ಕೋವಿಡ್ ವಿರುದ್ಧದ ರೋಗನಿರೋಧಕ ಶಕ್ತಿ ಹೆಚ್ಚಿಸುತ್ತದೆ ಎಂದೂ ವರದಿಯಲ್ಲಿ ಹೇಳಲಾಗಿದೆ.

ಕೋವಿಡ್ ವಾರ್ಡ್‌ನಲ್ಲೇ ದಾಂಪತ್ಯ ಬದುಕಿಗೆ ಕಾಲಿಟ್ಟ ಜೋಡಿ!

ಪ್ರಜಾವಾಣಿ ವಾರ್ತೆ

ತಿರುವನಂತಪುರಂ: ಕೋವಿಡ್ ಆಸ್ಪತ್ರೆಯಾಗಿರುವ ಇಲ್ಲಿನ ಸರ್ಕಾರಿ ಆಸ್ಪತ್ರೆಯು ಭಾನುವಾರ ಮದುವೆಯೊಂದಕ್ಕೆ ವೇದಿಕೆಯಾಯಿತು. ವರನಿಗೆ ಸೋಂಕು ತಗುಲಿರುವುದು ದೃಢಪಟ್ಟಿತ್ತು. ಆದರೆ, ಇದು ಮದುವೆಯ ಉತ್ಸಾಹವನ್ನು ಕುಗ್ಗಿಸಲಿಲ್ಲ. ನಿಗದಿತ ಸಮಯಕ್ಕೆ ಕೋವಿಡ್ ವಾರ್ಡ್‌ನಲ್ಲಿಯೇ ಜೋಡಿ ದಾಂಪತ್ಯ ಬದುಕಿಗೆ ಕಾಲಿಟ್ಟರು.

ಕೇರಳದ ಅಲಪ್ಪುಜಾ ಜಿಲ್ಲೆಯ ನಿವಾಸಿಗಳಾತ ಶರತ್ ಮತ್ತು ಅಭಿರಾಮಿ ಹೊಸ ಬದುಕಿಗೆ ಕಾಲಿಟ್ಟ ಜೋಡಿ. ಇದಕ್ಕೂ ಮೊದಲು ಇವರು ಅಧಿಕಾರಿಗಳಿಂದ ಪೂರ್ವಾನುಮತಿಯನ್ನು ಪಡೆದುಕೊಂಡಿದ್ದರು. ಸೋಂಕಿನಿಂದಾಗಿ ಅದೇ ವಾರ್ಡ್‌ಗೆ ದಾಖಲಾಗಿದ್ದ ಶರತ್ ತಾಯಿ ಜಿಜಿ ಅವರು ಮದುವೆಯಲ್ಲಿ ಭಾಗವಹಿಸುವುದು ಸಾಧ್ಯವಾಯಿತು.


ಈ ಇಬ್ಬರ ಮದುವೆಗೆ ಎರಡು ವರ್ಷಗಳ ಹಿಂದೆಯೇ ನಿಶ್ಚಯವಾಗಿತ್ತು. ವಿದೇಶದಲ್ಲಿ ಕೆಲಸ ಮಾಡುತ್ತಿದ್ದ ಶರತ್, ಕೋವಿಡ್ ಪರಿಸ್ಥಿತಿಯ ಕಾರಣದಿಂದ ಸ್ವದೇಶಕ್ಕೆ ಮರಳಲು ಆಗಿರಲಿಲ್ಲ. ಅಂತಿಮವಾಗಿ ಕುಟುಂಬದವರು ಭಾನುವಾರಕ್ಕೆ ಮದುವೆ ನಿಗದಿಪಡಿಸಿದ್ದರು.



ಕೋವಿಡ್ ವಾರ್ಡ್‌ನಲ್ಲಿಯೇ ಮದುವೆಯಾದ ಜೋಡಿ

ಆದರೆ, ಶರತ್ ಮತ್ತು ಅವರ ತಾಯಿ ಇಬ್ಬರಿಗೂ ಸೋಂಕು ತಗುಲಿದ್ದು, ಆಸ್ಪತ್ರೆಗೆ ದಾಖಲಾದರು. ಹತ್ತಿರದಲ್ಲಿ ಒಳ್ಳೆಯ ಮುಹೂರ್ತ ಇಲ್ಲ ಎಂಬುದನ್ನು ಖಚಿತಪಡಿಸಿಕೊಂಡ ಕುಟುಂಬದವರು ಆಸ್ಪತ್ರೆಯಲ್ಲಿಯೇ ಮದುವೆ ಏರ್ಪಡಿಸಲು ನಿರ್ಧರಿಸಿದರು. ವಧು ಅಭಿರಾಮಿ ಪಿಪಿಇ ಕಿಟ್ ಧರಿಸಿ ಪಾಲ್ಗೊಂಡಿದ್ದರು. ನವಜೋಡಿ ಪರಸ್ಪರ ಹಾರ ಬದಲಿಸಿಕೊಂಡಿತು.

ಆಸ್ಪತ್ರೆಯಲ್ಲಿದ್ದ ಶರತ್ ತಾಯಿ, ಕೆಲ ಸಿಬ್ಬಂದಿ ಹಾಜರಿದ್ದರು. ಮದುವೆಯಾದ ಕೆಲ ಹೊತ್ತಿನಲ್ಲಿಯೇ ವಧು ಆಸ್ಪತ್ರೆಯಿಂದ ತೆರಳಿದರು.





ಫಫ್ ಡುಪ್ಲೆಸಿ ಅರ್ಧಶತಕ; ಇಮ್ರಾನ್ ತಾಹೀರ್‌ಗೆ ಎರಡು ವಿಕೆಟ್: ವಿರಾಟ್ ಕೊಹ್ಲಿ ಪಡೆಗೆ ನಿರಾಸೆ

ಆರ್‌ಸಿಬಿಗೆ ಸೋಲಿನ ಪೆಟ್ಟುಕೊಟ್ಟ ಜಡೇಜ

ಮುಂಬೈ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಅಜೇಯ ಓಟಕ್ಕೆ ಭಾನುವಾರ ಎಡಗೈ ಆಲ್‌ರೌಂಡರ್ ರವೀಂದ್ರ ಜಡೇಜ ತಡೆಯೊಡ್ಡಿದರು.

ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯದ ಒಂದೇ ಓವರ್‌ನಲ್ಲಿ ಐದು ಸಿಕ್ಸರ್‌ಗಳನ್ನು ಸಿಡಿಸಿದ ಜಡೇಜ, ಬೌಲಿಂಗ್‌ನಲ್ಲಿಯೂ ಮಿಂಚಿದರು. ಇದರಿಂದಾಗಿ ವಿರಾಟ್ ಕೊಹ್ಲಿ ಬಳಗವು ಈ ಟೂರ್ನಿಯಲ್ಲಿ ಮೊದಲ ಬಾರಿಗೆ ಸೋಲಿನ ಕಹಿಯುಂಡಿತು. ಇಲ್ಲಿಯವರೆಗೆ ಆಡಿದ್ದ ನಾಲ್ಕು ಪಂದ್ಯಗಳಲ್ಲಿ ಭರ್ಜರಿ ಜಯ ಸಾಧಿಸಿದ್ದ ತಂಡ ಇಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಎದುರು 69 ರನ್‌ಗಳಿಂದ ಸೋತಿತು. ಚೆನ್ನೈ ತಂಡವು ನಾಲ್ಕನೇ ಪಂದ್ಯ ಗೆದ್ದು ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಟಾಸ್ ಗೆದ್ದ ಚೆನ್ನೈ ಸೂಪರ್ ಕಿಂಗ್ಸ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಫಫ್ ಡುಪ್ಲೆಸಿ (50; 41ಎಸೆತ, 5ಬೌಂಡರಿ 1ಸಿಕ್ಸರ್) ಮತ್ತು ಜಡೇಜ ಅವರ ಅರ್ಧಶತಕಗಳ ಬಲದಿಂದ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 191 ರನ್ ಗಳಿಸಿತು. ಅದಕ್ಕುತ್ತರವಾಗಿ ಆರ್‌ಸಿಬಿ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 122 ರನ್ ಗಳಿಸಿತು.

ಈ ಸೋಲಿಗೆ ಪ್ರಮುಖ ಕಾರಣವಾಗಿದ್ದು ಚೆನ್ನೈ ಇನಿಂಗ್ಸ್‌ನ 15ನೇ ಓವರ್‌ನಲ್ಲಿ ಜಡೇಜ ಕ್ಯಾಚ್ ಅನ್ನು ಡ್ಯಾನ್ ಕ್ರಿಸ್ಟಿಯನ್ ಕೈಚೆಲ್ಲಿದ್ದು. ಅದರ ನಂತರ ಇನಿಂಗ್ಸ್ ಕೊನೆಯ ಓವರ್‌ನಲ್ಲಿ ಹರ್ಷಲ್ ಪಟೇಲ್ ಹಾಕಿದ ಕೊನೆಯ ಓವರ್. ಅದರಲ್ಲಿ ಜಡೇಜ ಐದು ಸಿಕ್ಸರ್ ಮತ್ತು ಒಂದು ಬೌಂಡರಿ ಸಹಿತ 37 ರನ್‌ಗಳನ್ನು ಸೂರೆ ಮಾಡಿದರು. ಈ ಓವರ್‌ನಲ್ಲಿ ಒಂದು ನೋಬಾಲ್‌ನಿಂದ ಸಿಕ್ಕ ಫ್ರೀ ಹಿಟ್‌ನಲ್ಲಿಯೂ ಜಡೇಜ ಸಿಕ್ಸರ್ ಬಾರಿಸಿದರು. ಅವರಿಗೆ ಈ ಓವರ್‌ನಲ್ಲಿಯೂ ಒಂದು ಜೀವದಾನ ಲಭಿಸಿತು. 2011ರಲ್ಲಿ ಆರ್‌ಸಿಬಿಯ-ಲ್ಲಿದ್ದ ಕ್ರಿಸ್ ಗೇಲ್ ಒಂದೇ ಓವರ್‌ನಲ್ಲಿ ಹೊಡೆದಿದ್ದ 37 ರನ್‌ಗಳ ದಾಖಲೆಯನ್ನು ಜಡೇಜ ಸರಿಗಟ್ಟಿದರು. ಇದರಿಂದಾಗಿ ಸ್ವತಃ ಹರ್ಷಲ್ ಪಟೇಲ್ (3 ವಿಕೆಟ್) ಅವರ ಶ್ರಮವೂ ವ್ಯರ್ಥವಾಯಿತು. ಅವರ ಉತ್ತಮ ಬೌಲಿಂಗ್‌ನಿಂದಾಗಿ ಚೆನ್ನೈ ತಂಡವು 17.3 ಓವರ್‌ಗಳಲ್ಲಿ 142 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿತ್ತು. ಅರ್ಧಶತಕ ಗಳಿಸಿ ತಂಡಕ್ಕೆ ಉತ್ತಮ ಆರಂಭ ನೀಡಿದ್ದ ಡುಪ್ಲೆಸಿ (50 ರನ್), ಅನುಭವಿ ಬ್ಯಾಟ್ಸ್‌ಮನ್ ಸುರೇಶ್ ರೈನಾ (24 ರನ್) ಮತ್ತು ಅಂಬಟಿ ರಾಯುಡು (14 ರನ್) ಅವರ ವಿಕೆಟ್‌ಗಳನ್ನು ಗಳಿಸಿದ್ದ ಹರ್ಷಲ್ ದೊಡ್ಡ ಜೊತೆಯಾಟಗಳಿಗೆ ತಡೆ ಹಾಕಿದ್ದರು. ಋತುರಾಜ್ ಗಾಯಕವಾಡ್ ಜೊತೆಗೆ ಫಫ್ 74 ರನ್‌ಗಳ ಜೊತೆಯಾ-ಟವಾಡಿದ್ದರು. ದೊಡ್ಡ ಮೊತ್ತದ ಸೌಧ ಕಟ್ಟಲು ಜಡೇಜಗೆ ಕೊನೆಯ ಒಂದು ಓವರ್ ಸಾಕಾಯಿತು. ತಮ್ಮ ಬೀಸು ಹೊಡೆತಗಳ ಮೂಲಕ ಆರ್‌ಸಿಬಿಯ ಆತ್ಮವಿಶ್ವಾಸವನ್ನೇ ಕಲಕಿಬಿಟ್ಟರು.

ಇದರ ಪರಿಣಾಮ ಆರ್‌ಸಿಬಿಯ ಬ್ಯಾಟಿಂಗ್ ಮೇಲೆಯೂ ಆಯಿತು. ಮೂರನೇ ಕ್ರಮಾಂಕಕ್ಕೆ ಬಡ್ತಿ ಪಡೆದು ಬ್ಯಾಟಿಂಗ್‌ಗೆ ಬಂದ ವಾಷಿಂಗ್ಟನ್ ಸುಂದರ್, ಟೂರ್ನಿಯಲ್ಲಿ ಎರಡು ಅರ್ಧಶತಕ ಹೊಡೆದಿರುವ ಗ್ಲೆನ್ ಮ್ಯಾಕ್ಸ್‌ವೆಲ್ (22 ರನ್) ಮತ್ತು 'ಸೂಪರ್ ಮ್ಯಾನ್' ಎಬಿ ಡಿವಿಲಿಯರ್ಸ್ (4 ರನ್) ವಿಕೆಟ್ ಕಬಳಿಸಿದ ಜಡೇಜ ಚೆನ್ನೈಗೆ ಜಯದ ಹಾದಿ ತೋರಿಸಿದರು. ಹೋದ ಪಂದ್ಯದಲ್ಲಿ ಅಜೇಯವಾಗಿ ಉಳಿದಿದ್ದ ಆರ್‌ಸಿಬಿಯ ಆರಂಭಿಕ ಜೋಡಿ ವಿರಾಟ್ ಕೊಹ್ಲಿ ಮತ್ತು ದೇವದತ್ತ ಪಡಿಕ್ಕಲ್ (34 ರನ್) ಈ ಪಂದ್ಯದಲ್ಲಿಯೂ ಮೊದಲ ಮೂರು ಓವರ್‌ಗಳಲ್ಲಿ 44 ರನ್ ಸೇರಿಸಿ ಉತ್ತಮ ಆರಂಭ ನೀಡಿದ್ದರು. ಆದರೆ, 4ನೇ ಓವರ್‌ನಲ್ಲಿ ಸ್ಯಾಮ್ ಕರನ್ ಎಸೆತದಲ್ಲಿ ವಿರಾಟ್ ಕೊಹ್ಲಿ ಕ್ಯಾಚ್ ಪಡೆದ ಮಹೇಂದ್ರಸಿಂಗ್ ಧೋನಿ ಸಂಭ್ರಮಿಸಿದರು. ನಂತರದ ಓವರ್‌ನಲ್ಲಿ ಶಾರ್ದೂಲ್ ಠಾಕೂರ್ ಎಸೆತದಲ್ಲಿ ಪಡಿಕ್ಕಲ್ ಔಟಾದರು. ಇದರೊಂದಿಗೆ ತಂಡವು ಸೋಲಿನ ಹಾದಿ ಹಿಡಿಯಿತು.

ಕೊಹ್ಲಿಗೆ ದಂಡ: ನಿಗದಿತ ಅವಧಿಯಲ್ಲಿ ಓವರ್‌ಗಳನ್ನು ಪೂರ್ಣಗೊಳಿಸದ ಕಾರಣ ಆರ್‌ಸಿಬಿ ತಂಡದ ನಾಯಕ ವಿರಾಟ್ ಕೊಹ್ಲಿ ಅವರಿಗೆ ₹ 12 ಲಕ್ಷ ದಂಡ ವಿಧಿಸಲಾಗಿದೆ. ನಿಧಾನಗತಿ ಓವರ್ ಕಾರಣಕ್ಕಾಗಿ ಆರ್‌ಸಿಬಿ ತಂಡವು ಈ ಆವೃತ್ತಿಯಲ್ಲಿ ಮೊದಲ ಬಾರಿ ಶಿಕ್ಷೆಗೆ ಒಳಗಾಗಿದೆ.



ಚೆನ್ನೈ ಸೂಪರ್ ಕಿಂಗ್ಸ್ ತಂಡದ ರವೀಂದ್ರ ಜಡೇಜ ಬ್ಯಾಟಿಂಗ್ ವೈಖರಿ -ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಚೆನ್ನೈ ಸೂಪರ್ ಕಿಂಗ್ಸ್ 4ಕ್ಕೆ 191 (20 ಓವರ್‌ಗಳಲ್ಲಿ)
ಋತುರಾಜ್ ಸಿ ಜೆಮಿಸನ್ ಬಿ ಚಾಹಲ್ 33 (25 ಎ, 4x4, 6x1)
ಡು ಪ್ಲೆಸಿ ಸಿ ಕ್ರಿಸ್ಟಿಯನ್ಸ್ ಬಿ ಪಟೇಲ್ 50 (41 ಎ, 4x5, 6x1)
ರೈನಾ ಸಿ ಪಡಿಕ್ಕಲ್ ಬಿ ಪಟೇಲ್ 24 (18 ಎ, 4x1, 6x3)
ರಾಯುಡು ಸಿ ಜೆಮೀಸನ್ ಬಿ ಪಟೇಲ್ 14 (7 ಎ, 4x1, 6x1)
ಜಡೇಜ ಔಟಾಗದೆ 62 (28 ಎ, 4x4, 6x5)
ಧೋನಿ ಔಟಾಗದೆ 2 (3 ಎ)
ಇತರೆ (ಲೆಗ್ ಬೈ 1, ನೋಬಾಲ್ 2, ವೈಡ್ 3) 6
ವಿಕೆಟ್ ಪತನ: 1-74 (ಋತುರಾಜ್ ಗಾಯಕವಾಡ್, 9.1), 2-111 (ಸುರೇಶ್ ರೈನಾ, 13.4), 3-111 (ಫಫ್ ಡು ಪ್ಲೆಸಿ, 13.5), 4-142 (ಅಂಬಟಿ ರಾಯುಡು, 17.3)
ಬೌಲಿಂಗ್: ಮೊಹಮ್ಮದ್ ಸಿರಾಜ್ 4-0-32-0, ಕೈಲ್ ಜೆಮೀಸನ್ 3-0-31-0, ಯಜುವೇಂದ್ರ ಚಾಹಲ್ 3-0-24-1, ನವದೀಪ್ ಸೈನಿ 2-0-27-0, ಹರ್ಷಲ್ ಪಟೇಲ್ 4-0-51-3, ಡ್ಯಾನ್ ಕ್ರಿಸ್ಟಿಯನ್ 2-0-12-0, ವಾಷಿಂಗ್ಟನ್ ಸುಂದರ್ 2-0-13-0

ರಾಯಲ್ ಚಾಲೆಂಜರ್ಸ್ ಬೆಂಗಳೂರು 9ಕ್ಕೆ 122 (20 ಓವರ್‌ಗಳಲ್ಲಿ)
ವಿರಾಟ್ ಸಿ ಧೋನಿ ಬಿ ಕರನ್ 8 (7 ಎ, 4x1)
ದೇವದತ್ತ ಸಿ ರೈನಾ ಬಿ ಠಾಕೂರ್ 34 (15 ಎ, 4x4, 6x2)
ವಾಷಿಂಗ್ಟನ್ ಸಿ ಗಾಯಕವಾಡ್ ಬಿ ಜಡೇಜ 7 (11ಎ, 4x1)
ಮ್ಯಾಕ್ಸ್‌ವೆಲ್ ಬಿ ಜಡೇಜ 22 (15 ಎ, 4x3)
ಡಿವಿಲಿಯರ್ಸ್ ಬಿ ಜಡೇಜ 4 (9 ಎ)
ಕ್ರಿಸ್ಟಿಯನ್ ರನೌಟ್ (ಜಡೇಜ) 1 (3 ಎ)
ಜೆಮೀಸನ್ ರನೌಟ್ ತಾಹಿರ್ 16 (13 ಎ, 4x1, 6x1)
ಹರ್ಷಲ್ ಬಿ ಇಮ್ರಾನ್ 2 (4 ಎ)
ನವದೀಪ್ ಸಿ ರೈನಾ ಬಿ ಇಮ್ರಾನ್ 2 (4 ಎ)
ಯಜುವೇಂದ್ರ ಔಟಾಗದೆ 8 (21 ಎ)
ಸಿರಾಜ್ ಔಟಾಗದೆ 12 (14 ಎ, 6x1)
ಇತರೆ (ಲೆಗ್ ಬೈ 3, ವೈಡ್ 5) 8
ವಿಕೆಟ್ ಪತನ: 1-44 (ವಿರಾಟ್ ಕೊಹ್ಲಿ, 3.1), 2-54 (ದೇವದತ್ತ ಪಡಿಕ್ಕಲ್, 4.6), 3-65 (ವಾಷಿಂಗ್ಟನ್ ಸುಂದರ್, 6.2), 4-79 (ಗ್ಲೆನ್ ಮ್ಯಾಕ್ಸ್‌ವೆಲ್, 8.5), 5-81 (ಡ್ಯಾನ್ ಕ್ರಿಸ್ಟಿಯನ್, 9.4), 6-83 (ಎಬಿ ಡಿವಿಲಿಯರ್ಸ್, 10.1), 7-89 (ಹರ್ಷಲ್ ಪಟೇಲ್, 11.6), 8-94 (ನವದೀಪ್ ಸೈನಿ, 13.1), 9-103 (ಕೈಲ್ ಜೆಮೀಸನ್, 15.6)
ಬೌಲಿಂಗ್: ದೀಪಕ್ ಚಾಹರ್ 2-0-25-0, ಸ್ಯಾಮ್ ಕರನ್ 4-0-35-1, ಶಾರ್ದೂಲ್ ಠಾಕೂರ್ 4-0-11-1, ರವೀಂದ್ರ ಜಡೇಜ 4-1-13-3, ಇಮ್ರಾನ್ ತಾಹಿರ್ 4-0-16-2, ಡ್ವೇನ್ ಬ್ರಾವೊ 2-0-19-0

ಫಲಿತಾಂಶ: ಚೆನ್ನೈ ಸೂಪರ್ ಕಿಂಗ್ಸ್‌ಗೆ 69 ರನ್‌ಗಳ ಜಯ

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಶಿಖರ್ ಧವನ್	ಡೆಲ್ಲಿ	259
ಕೆ.ಎಲ್.ರಾಹುಲ್	ಪಂಜಾಬ್	221
ಡುಪ್ಲೆಸಿ	ಚೆನ್ನೈ	214

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಬೆಂಗಳೂರು	15
ಆವೇಶ್ ಖಾನ್	ಡೆಲ್ಲಿ	11
ರಾಹುಲ್ ಚಾಹರ್	ಮುಂಬೈ	9

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಚೆನ್ನೈ ಸೂಪರ್ ಕಿಂಗ್ಸ್	5	4	1	-	-	8
ಡೆಲ್ಲಿ ಕ್ಯಾಪಿಟಲ್ಸ್	5	4	1	-	-	8
ಬೆಂಗಳೂರು	5	4	1	-	-	8
ಮುಂಬೈ ಇಂಡಿಯನ್ಸ್	5	2	3	-	-	4
ಪಂಜಾಬ್ ಕಿಂಗ್ಸ್	5	2	3	-	-	4
ರಾಜಸ್ತಾನ್ ರಾಯಲ್ಸ್	5	2	3	-	-	4
ಹೈದರಾಬಾದ್	5	1	4	-	-	2
ಕೋಲ್ಕತ್ತ	5	1	4	-	-	2

* ಭಾನುವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಪಂಜಾಬ್‌ಗೆ ಗೆಲುವು ಮುಂದುವರಿಸುವ ತವಕ

ಅಹಮದಾಬಾದ್ (ಪಿಟಿಐ) : ಸತತ ಸೋಲಿನ ಸರಪಣಿ ಕಳಚಿಕೊಂಡು ಜಯದ ಹಾದಿಗೆ ಮರಳಿರುವ ಪಂಜಾಬ್ ಕಿಂಗ್ಸ್ ತಂಡವು ಸೋಮವಾರ ಕೋಲ್ಕತ್ತ ನೈಟ್ ರೈಡರ್ಸ್ ಸವಾಲಿಗೆ ಸಜ್ಜಾಗಿದೆ. ಇಲ್ಲಿಯ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಉಭಯ ತಂಡಗಳ ಹಣಾಹಣಿಗೆ ವೇದಿಕೆ ಸಿದ್ಧಗೊಂಡಿದೆ.


ಟೂರ್ನಿಯಲ್ಲಿ ಜಯದ ಆರಂಭ ಮಾಡಿದ್ದ ಕೆ.ಎಲ್.ರಾಹುಲ್ ಸಾರಥ್ಯದ ಪಂಜಾಬ್, ನಂತರ ಸತತ ಮೂರು ಪಂದ್ಯಗಳಲ್ಲಿ ನಿರಾಸೆ ಅನುಭವಿಸಿತ್ತು. ಶುಕ್ರವಾರ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ವಿರುದ್ಧ ಒಂಬತ್ತು ವಿಕೆಟ್‌ಗಳ ಜಯ ಗಳಿಸಿ ಆತ್ಮವಿಶ್ವಾಸ ಮರಳಿ ಪಡೆದಿದೆ. ಸತತ ನಾಲ್ಕು ಪಂದ್ಯಗಳಲ್ಲಿ ಸೋತಿರುವ ಕೋಲ್ಕತ್ತ ತಂಡಕ್ಕೂ ಗೆಲುವು ಬೇಕಾಗಿದೆ.

ಸ್ಥಿರ ಸಾಮರ್ಥ್ಯ ತೋರುತ್ತಿರುವ ರಾಹುಲ್, ಮುಂಬೈ ಎದುರಿನ ಪಂದ್ಯದಲ್ಲೂ ಅಜೇಯ ಅರ್ಧಶತಕ (60) ಗಳಿಸಿದ್ದರು. ಕೇವಲ ಒಂದು ಪಂದ್ಯದಲ್ಲಿ ಮಿಂಚಿರುವ ದೀಪಕ್ ಹೂಡಾ ಲಯಕ್ಕೆ ಮರಳಬೇಕಿದೆ. ನಿಕೋಲಸ್ ಪೂರನ್ ಕೂಡ ಸಾಮರ್ಥ್ಯ ತೋರಬೇಕಿದೆ. ಸ್ಪಿನ್ನರ್ ರವಿ ಬಿಷ್ಣೋಯಿ ಹಾಗೂ ವೇಗಿ ಮೊಹಮ್ಮದ್ ಶಮಿ ಮುಂಬೈ ಎದುರು ಪರಿಣಾಮಕಾರಿ ಬೌಲಿಂಗ್ ಮಾಡಿದ್ದು, ತಂಡದ ನಿರೀಕ್ಷೆ ಹೆಚ್ಚಿಸಿದ್ದಾರೆ.

ಕಳೆದ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ಎದುರು ಎಡವಿರುವ ಏಯಾನ್ ಮಾರ್ಗನ್ ನೇತೃತ್ವದ ಕೋಲ್ಕತ್ತ, ಈ ಹಣಾಹಣಿಯಲ್ಲಿ ಜಯ ನಿರೀಕ್ಷಿಸುತ್ತಿದೆ. ನಿತೀಶ್ ರಾಣಾ ಬ್ಯಾಟಿಂಗ್‌ನಲ್ಲಿ ಮಿಂಚಿದ್ದಾರೆ. ಇನ್ನುಳಿದವರ ವೈಫಲ್ಯ ಕಳವಳಕ್ಕೆ ಕಾರಣವಾಗಿದೆ. ವೇಗಿ ಪ್ಯಾಟ್ ಕಮಿನ್ಸ್, ಚೆನ್ನೈ ಎದುರಿನ ಪಂದ್ಯದಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದ್ದರೂ ತಂಡವು ಸೋಲಿನಿಂದ ಪಾರಾಗಿರಲಿಲ್ಲ.

ಶುಭಮನ್ ಗಿಲ್ ಹಾಗೂ ನಾಯಕ ಮಾರ್ಗನ್ ದೊಡ್ಡ ಮೊತ್ತ ಗಳಿಸುವಲ್ಲಿ ಯಶಸ್ವಿಯಾಗಿಲ್ಲ. ಬೌಲಿಂಗ್‌ನಲ್ಲಿ ವರುಣ್ ಚಕ್ರವರ್ತಿ, ಪ್ರಸಿದ್ಧ ಕೃಷ್ಣ, ಆ್ಯಂಡ್ರೆ ರಸೆಲ್ ಮೇಲೆ ಕೋಲ್ಕತ್ತ ನಿರೀಕ್ಷೆ ಇಟ್ಟುಕೊಂಡಿದೆ.

ಬಲಾಬಲ



ಆರಂಭ: ರಾತ್ರಿ 7.30
ಸ್ಥಳ: ನರೇಂದ್ರ ಮೋದಿ ಕ್ರೀಡಾಂಗಣ, ಅಹಮದಾಬಾದ್
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಡೆಲ್ಲಿ ಕ್ಯಾಪಿಟಲ್ಸ್‌ಗೆ 'ಸೂಪರ್' ಜಯ

ಚೆನ್ನೈ (ಪಿಟಿಐ): ಡೆಲ್ಲಿ ಕ್ಯಾಪಿಟಲ್ಸ್ ತಂಡವು ಭಾನುವಾರ ರಾತ್ರಿ ಸನ್‌ರೈಸರ್ಸ್ ಹೈದರಾಬಾದ್ ತಂಡದ ಎದುರಿನ ಪಂದ್ಯದಲ್ಲಿ ಸೂಪರ್ ಓವರ್‌ನಲ್ಲಿ ರೋಚಕ ಗೆಲುವು ಸಾಧಿಸಿತು.

ಚೆಪಾಕ್ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಟಾಸ್ ಗೆದ್ದ ಡೆಲ್ಲಿ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 159 ರನ್ ಗಳಿಸಿತು. ಅದಕ್ಕುತ್ತರವಾಗಿ ಕೇನ್ ವಿಲಿಯಮ್ಸನ್ ಅವರ ಅಮೋಘ ಅರ್ಧಶತಕ ಮತ್ತು ಪಂದ್ಯದ ಕೊನೆಯ ಓವರ್‌ನಲ್ಲಿ ಕನ್ನಡಿಗ ಸುಚಿತ್ (ಔಟಾಗದೆ 14; 6ಎಸೆತ, 1ಸಿಕ್ಸರ್, 2ಬೌಂಡರಿ) ಚುರುಕಿನ ಬ್ಯಾಟಿಂಗ್‌ನಿಂದಾಗಿ ಸನ್‌ರೈಸರ್ಸ್ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 159 ರನ್ ಗಳಿಸಿ ಸಮಬಲ ಸಾಧಿಸಿತು.

ಆಗ ನಡೆದ ಸೂಪರ್ ಓವರ್‌ನಲ್ಲಿ ಡೆಲ್ಲಿ ತಂಡದ ಸ್ಪಿನ್ನರ್ ಅಕ್ಷರ್ ಪಟೇಲ್ ಬೌಲಿಂಗ್‌ನಲ್ಲಿ ಡೇವಿಡ್ ವಾರ್ನರ್ ಮತ್ತು ಕೇನ್ ವಿಲಿಯಮ್ಸನ್ ಸೇರಿ ಏಳು ರನ್ ಗಳಿಸಿದರು. ಈ ಗುರಿ ಬೆನ್ನತ್ತಿದ ಡೆಲ್ಲಿ ತಂಡಕ್ಕೆ ಸನ್‌ರೈಸರ್ಸ್ ಸ್ಪಿನ್ನರ್ ರಶೀದ್ ಖಾನ್ ಕಠಿಣ ಸವಾಲೊಡ್ಡಿದರು. ಆದರೆ ರಿಷಭ್ ಪಂತ್ ರಿವರ್ಸ್ ಸ್ವೀಪ್‌ನಲ್ಲಿ ಒಂದು ಬೌಂಡರಿ ಗಳಿಸಿದ್ದು ತಂಡದ ಜಯಕ್ಕೆ ನೆರವಾಯಿತು. ರಿಷಭ್ ಮತ್ತು ಶಿಖರ್ ಜೊತೆಗೂಡಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಈ ಟೂರ್ನಿಯಲ್ಲಿ ಟೈ ಆದ ಮೊದಲ ಪಂದ್ಯವಿದು.

ಪೃಥ್ವಿ ಅರ್ಧಶತಕ: ಅರ್ಧಶತಕ ಬಾರಿಸಿದ ಪೃಥ್ವಿ ಶಾ (53; 39ಎ) ಮತ್ತು ಶಿಖರ್ ಧವನ್ (28, 26ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 81 ರನ್‌ಗಳನ್ನು ಸೇರಿಸಿ ಡೆಲ್ಲಿ ತಂಡಕ್ಕೆ ಉತ್ತಮ ಆರಂಭ ನೀಡಿದರು.

11ನೇ ಓವರ್‌ನಲ್ಲಿ ಶಿಖರ್ ಧವನ್ ಅವರನ್ನು ಕ್ಲೀನ್‌ಬೌಲ್ಡ್ ಮಾಡಿದ ಸ್ಪಿನ್ನರ್ ರಶೀದ್ ಖಾನ್ ಜೊತೆಯಾಟವನ್ನು ಮುರಿದರು. ನಂತರದ ಓವರ್‌ನಲ್ಲಿ ಖಲೀಲ್ ಅಹಮದ್ ಮತ್ತು ಜೆ. ಸುಚಿತ್ ಅವರ ಚುರುಕಿನ ಫೀಲ್ಡಿಂಗ್‌ನಿಂದಾಗಿ ಪೃಥ್ವಿ ರನ್‌ಔಟಾದರು. 135.90ರ ಸ್ಟ್ರೈಕ್‌ರೇಟ್‌ನಲ್ಲಿ ಪೃಥ್ವಿ ಅರ್ಧಶತಕ ಗಳಿಸಿದರು.

ತಂಡದ ನಾಯಕ ರಿಷಭ್ ಪಂತ್ (37; 27ಎ) ಮತ್ತು ಸ್ಟೀವ್ ಸ್ಮಿತ್ (ಔಟಾಗದೆ 34) ಮೂರನೇ ವಿಕೆಟ್ ಜೊತೆಯಾಟದಲ್ಲಿ 58 ರನ್‌ಗಳನ್ನು ಸೇರಿಸಿದರು. ಸನ್‌ರೈಸರ್ಸ್ ತಂಡದ ಸಿದ್ಧಾರ್ಥ್ ಕೌಲ್ 19ನೇ ಓವರ್‌ನಲ್ಲಿ ರಿಷಭ್ ಮತ್ತು ಶಿಮ್ರೊನ್ ಹೆಟ್ಮೆಯರ್ ಅವರ ವಿಕೆಟ್‌ಗಳನ್ನು ಗಳಿಸಿದರು.

ಡೆಲ್ಲಿಯ ಆವೇಶ್ ಖಾನ್ ಅವರ ದಾಳಿಯಿಂದಾಗಿ ಸನ್‌ರೈಸರ್ಸ್ ಬ್ಯಾಟಿಂಗ್ ಮಂಕಾಯಿತು. ಆದರೆ, ಜಾನಿ ಬೆಸ್ಟೊ (38. 18ಎ) ಮತ್ತು ವಿಲಿಯಮ್ಸನ್ (ಔಟಾಗದೆ 66) ಅವರು ಚೇತರಿಕೆ ನೀಡಿದರು.

ಸ್ಕೋರ್ ಕಾರ್ಡ್

ಡೆಲ್ಲಿ ಕ್ಯಾಪಿಟಲ್ಸ್ 4ಕ್ಕೆ 159 (20 ಓವರ್‌ಗಳಲ್ಲಿ)
ಪೃಥ್ವಿ ರನೌಟ್ (ಅಹಮ್ಮದ್/ಸುಚಿತ್) 53 (39 ಎ, 4x7, 6x1)
ಧವನ್ ಬಿ ರಶೀದ್ ಖಾನ್ 28 (26 ಎ, 4x3)
ರಿಷಭ್ ಸಿ ಸುಚಿತ್ ಬಿ ಸಿದ್ಧಾರ್ಥ್ 37 (27 ಎ, 4x4, 6x1)
ಸ್ಮಿತ್ ಔಟಾಗದೆ 34 (25 ಎ, 4x3, 6x1)
ಶಿಮ್ರಾನ್ ಸಿ ವಿಲಿಯಮ್ಸನ್ ಬಿ ಸಿದ್ಧಾರ್ಥ್ 1 (2 ಎ)
ಸ್ಟೋಯಿನಿಸ್ ಔಟಾಗದೆ 2 (2 ಎ)
ಇತರೆ (ಬೈ 1, ನೋ ಬಾಲ್ 1, ವೈಡ್ 2) 4
ವಿಕೆಟ್ ಪತನ: 1-81 (ಶಿಖರ್ ಧವನ್, 10.2), 2-84 (ಪೃಥ್ವಿ ಶಾ, 11.3), 3-142 (ರಿಷಭ್ ಪಂತ್, 18.2), 4-145 (ಶಿಮ್ರಾನ್ ಹೆಟ್ಮೆಯರ್, 18.6)
ಬೌಲಿಂಗ್: ಖಲೀಲ್ ಅಹಮ್ಮದ್ 4-0-42-0, ಅಭಿಷೇಕ್ ಶರ್ಮಾ 1-0-14-0, ಸಿದ್ಧಾರ್ಥ್ ಕೌಲ್ 4-0-31-2, ಜೆ.ಸುಚಿತ್ 4-0-21-0, ವಿಜಯಶಂಕರ್ 3-0-19-0, ರಶೀದ್ ಖಾನ್ 4-0-31-1

ಸನ್‌ರೈಸರ್ಸ್ ಹೈದರಾಬಾದ್ 7ಕ್ಕೆ 159 (20 ಓವರ್‌ಗಳಲ್ಲಿ)
ವಾರ್ನರ್ ರನ್ ಔಟ್ (ರಬಾಡ/ಪಂತ್) 6 (8 ಎ)
ಬೆಸ್ಟೊ ಸಿ ಶಿಖರ್ ಬಿ ಆವೇಶ್ 38 (18 ಎ, 4x3, 6x4)
ವಿಲಿಯಮ್ಸನ್ ಔಟಾಗದೆ 66 (51 ಎ, 4x8)
ವಿರಾಟ್ ಸಿ ಸ್ಟೋಯಿನಿಸ್ ಬಿ ಆವೇಶ್ 4 (14)
ಕೇದಾರ್ ಸ್ಟಂಪ್ಡ್ ಪಂತ್ ಬಿ ಮಿಶ್ರಾ 9 (9 ಎ, 1 ಬೌಂ)
ಅಭಿಷೇಕ್ ಎಲ್‌ಬಿಡಬ್ಲ್ಯು ಬಿ ಪಟೇಲ್ 5 (6 ಎ)
ರಶೀದ್ ಎಲ್‌ಬಿಡಬ್ಲ್ಯು ಬಿ ಪಟೇಲ್ 0 (1 ಎ)
ವಿಜಯ ಬಿ ಆವೇಶ್ 8 (7 ಎ)
ಸುಚಿತ್ ಔಟಾಗದೆ 15 (6 ಎ, 4x2, 6x1)
ಇತರೆ (ಬೈ 2, ಲೆಗ್ ಬೈ 1, ವೈಡ್ 5) 8
ವಿಕೆಟ್ ಪತನ: 1-28 (ಡೇವಿಡ್ ವಾರ್ನರ್, 3.2), 2-56 (ಜಾನಿ ಬೆಸ್ಟೊ, 5.4), 3-84 (ವಿರಾಟ್ ಕೊಹ್ಲಿ, 11.2), 4-104 (ಕೇದಾರ್ ಜಾಧವ್, 14.2), 5-117 (ಅಭಿಷೇಕ್ ಶರ್ಮಾ, 16.1), 6-117 (ರಶೀದ್ ಖಾನ್, 16.2), 7-136 (ವಿಜಯಶಂಕರ್, 18.3))
ಬೌಲಿಂಗ್: ಕಗಿಸೊ ರಬಾಡ 3-0-26-0, ರವಿಚಂದ್ರನ್ ಅಶ್ವಿನ್ 4-0-27-0, ಮಾರ್ಕಸ್ ಸ್ಟೋಯಿನಿಸ್ 1-0-12-0, ಅಕ್ಷರ್ ಪಟೇಲ್ 4-0-26-2, ಆವೇಶ್ ಖಾನ್ 4-0-34-3, ಅಮಿತ್ ಮಿಶ್ರಾ 4-0-31-1

ಫಲಿತಾಂಶ: ಪಂದ್ಯ ಟೈ, ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಸೂಪರ್ ಓವರ್‌ನಲ್ಲಿ ಜಯ



ಸನ್‌ರೈಸರ್ಸ್ ಹೈದರಾಬಾದ್ ತಂಡದ ರಶೀದ್ ಖಾನ್ (ಬಲ) ವಿಕೆಟ್ ಗಳಿಸಿದ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಅಕ್ಷರ್ ಪಟೇಲ್ ಸಂಭ್ರಮ– ಪಿಟಿಐ ಚಿತ್ರ

ಬಾಕ್ಸಿಂಗ್: ಅಮಿತ್‌ಗೆ ಕಂಚು

ನವದೆಹಲಿ (ಪಿಟಿಐ): ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿರುವ ಭಾರತದ ಅಮಿತ್ ಪಂಘಲ್ ರಷ್ಯಾದ ಸೇಂಟ್ ಪೀಟ-ರ್ಸ್‌ಬರ್ಗ್‌ನಲ್ಲಿ ನಡೆದ ಗವರ್ನರ್ಸ್ ಕಪ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕಕ್ಕೆ ಸಮಾಧಾನಪಟ್ಟು-ಕೊಂಡಿದ್ದಾರೆ.

52 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಅವರು ಸೆಮಿಫೈನಲ್‌ನಲ್ಲಿ ವಿಶ್ವ ಚಾಂಪಿಯನ್ ಶಕೊಬಿದಿನ್ ಜೈರೊವ್‌ಗೆ 0–5ರಲ್ಲಿ ಮಣಿದರು. ಅಮಿತ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗಳಿಸಿದ್ದಾರೆ. ಜೈರೊವ್ ಕೂಡ ಈಗಾಗಲೇ ಒಲಿಂಪಿಕ್ಸ್‌ಗೆ ಟಿಕೆಟ್ ಗಿಟ್ಟಿ-ಸಿಕೊಂಡಿದ್ದಾರೆ.

ಗವರ್ನರ್ಸ್ ಕಪ್ ಟೂರ್ನಿಯಲ್ಲಿ ಫೈನಲ್ ಪದಕ ಸುತ್ತಿಗೆ ಪ್ರವೇಶಿಸಿದ ಭಾರತದ ಏಕೈಕ ಬಾಕ್ಸರ್ ಅಮಿತ್.

ಆರ್ಚರಿ: ಭಾರತ ಮಹಿಳಾ ತಂಡಕ್ಕೆ ಚಿನ್ನ

ಗ್ವಾಟೆಮಾಲಾ ಸಿಟಿ (ಪಿಟಿಐ): ಭಾರತ ಮಹಿಳಾ ರಿಕರ್ವ್ ತಂಡವು ಆರ್ಚರಿ ವಿಶ್ವಕಪ್ ಮೊದಲ ಹಂತದ ಟೂರ್ನಿಯಲ್ಲಿ ಚಿನ್ನದ ಪದಕ ಗೆದ್ದುಕೊಂಡಿದೆ. ಇಲ್ಲಿ ಭಾನುವಾರ ನಡೆದ ಫೈನಲ್ ಹಣಾಹಣಿಯಲ್ಲಿ 5–4ರಿಂದ ಮೆಕ್ಸಿಕೊ ತಂಡವನ್ನು ಪರಾಭವ-ಗೊಳಿಸಿತು.


ದೀಪಿಕಾ ಕುಮಾರಿ, ಅಂಕಿತಾ ಭಕತ್ ಹಾಗೂ ಕೋಮಲಿಕಾ ಬಾರಿ ಅವರನ್ನೊಳಗೊಂಡ ಭಾರತ ತಂಡವು ಚಿನ್ನದ ಪದಕದ ಸುತ್ತಿನಲ್ಲಿ 4–4ರ ಸಮಬಲ ಸಾಧಿಸಿತ್ತು. ಫಲಿತಾಂಶ ನಿರ್ಧರಿಸಲು ಶೂಟ್ ಆಫ್ ಮೊರೆಹೋಗಲಾಯಿತು. ಇಲ್ಲಿ ಒಂದು ಪಾಯಿಂಟ್‌ಯಿಂದ (27–26) ಭಾರತ ಎದುರಾಳಿಯನ್ನು ಹಿಂದಿಕ್ಕಿತು. 7 ವರ್ಷಗಳ ಬಳಿಕ ಮಹಿಳಾ ತಂಡವು ವಿಶ್ವಕಪ್‌ನಲ್ಲಿ ಚಿನ್ನ ಜಯಿಸಿತು.

ಸಿಎಸ್‌ಕೆ ನಿರ್ದೇಶಕ ಸಬರೆತ್ನಂ ನಿಧನ

ಚೆನ್ನೈ: ಉದ್ಯಮಿ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ಕ್ರಿಕೆಟ್ ಲಿಮಿಟೆಡ್ ಸಂಸ್ಥೆಯ ನಿರ್ದೇಶಕ ಎಲ್.ಸಬರೆತ್ನಂ (80) ಭಾನುವಾರ ನಿಧನರಾದರು. ಅವರು ಕೆಲ ಕಾಲದಿಂದ ಅನಾರೋಗ್ಯದಿಂದ ಬಳಲುತ್ತಿದ್ದರು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರು ಇದ್ದಾರೆ.

ಚೆಟ್ಟಿನಾಡ್ ಸಿಮೆಂಟ್ ಕಾರ್ಪೊ-ರೇಷನ್‌ನಲ್ಲಿ ಸೇವೆ ಸಲ್ಲಿಸಿದ್ದ ಅವರು ನಂತರ ಸುದೀರ್ಘ ಕಾಲ ಆ ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕರಾಗಿ-ದ್ದರು.

ಪ್ರಜಾವಾಣಿ
ಕ್ಯಾಚ್ ಇಟ್.. ಕ್ರೀಡಾ ಕಥೆಗಳು
ದಣಿವರಿಯದ ಸೈಕ್ಲಿಂಗ್ ಗುರು ಚಂದ್ರು ಕುರಣಿ



ರಸ್ತೆಗೆ ಡಾಂಬರು ಹಾಕುವ ಮೈಲ್ ಕೂಲಿಯಾಗಿದ್ದ ಚಂದ್ರು ಕುರಣಿ ಸೈಕ್ಲಿಂಗ್ ಕ್ರೀಡೆಯ ದಿಗ್ಗಜರಾಗಿ ಬೆಳೆದಿದ್ದು ಪ್ರೇರಣಾದಾಯಿ, ಅಂತರರಾಷ್ಟ್ರೀಯ ಸೈಕ್ಲಿಸ್ಟ್ ಮತ್ತು ಕೋಚ್ ಆಗಿ ನೂರಾರು ಸೈಕ್ಲಿಸ್ಟ್‌ಗಳನ್ನೂ ಬೆಳೆಸಿದರು. ಅವರೊಂದಿಗಿನ ಒಡನಾಟದ ಒಂದು ಝಲಕ್ ಇಲ್ಲಿದೆ ನೋಡಿ..

QR ಕೋಡ್ ಸ್ಕ್ಯಾನ್ ಮಾಡಿ